17th JULY 2008

ಕರ್ನಾಟಕ ವಿಧಾನಸಭೆ

ಗುರುವಾರ **17ನೇ ಜುಲೈ 2008** ರಂದು ಸದನವು

ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಮಧ್ಯಾಹ್ನ 12-08 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಜಗದೀಶ ಶೆಟ್ಟರ್‌ರವರು ಪೀಠವನ್ನು ಅಲಂಕರಿಸಿದ್ದರು.

2007-2008 ನೇ ಸಾಲಿನ ಆಯವ್ಯಯ ಮಂಡನೆ

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು, 2008-09 ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಮಂಡಿಸುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಮಂತ್ರಿಗಳು) :

ಸನ್ಮಾನ್ಯ ಸಭಾಧ್ಯಕ್ಷರೇ,

1. ನಾನು ಕರ್ನಾಟಕ ಸರ್ಕಾರದ 2008-09 ನೇ ಸಾಲಿನ ಮುಂಗಡ ಪತ್ರವನ್ನು ಮಂಡಿಸಲು ಹರ್ಷಿಸುತ್ತೇನೆ. ಸತತ ಮೂರನೆಯ ಮುಂಗಡ ಪತ್ರ ಮಂಡಿಸಲು ಅವಕಾಶವಿತ್ತ ರಾಜ್ಯದ ಜನತೆಗೆ ನಾನು ಸದಾ ಋಣಿಯಾಗಿದ್ದೇನೆ.

2. ಕರ್ನಾಟಕ ರಾಜ್ಯವು ಆರು ತಿಂಗಳಿಗೂ ಹೆಚ್ಚು ಅವಧಿಯ ರಾಜಕೀಯ ಅನಿಶ್ಚಿತತೆ ಮತ್ತು ರಾಷ್ಟ್ರಪತಿ ಆಡಳಿತದ ಅವಧಿಯಿಂದ ಹೊರಬಂದಿದೆ. ಸಮ್ಮಿಶ್ರ ಸರ್ಕಾರದ ಪ್ರಯೋಗ ಜನರಿಗೆ ಹಿಡಿಸಿಲ್ಲ. ಜನರು ಏಕಪಕ್ಷದ ಸ್ಥಿರಸರ್ಕಾರವನ್ನು ಬಯಸಿದ್ದಾರೆ. ಇದರ ಫಲವೇ ಕಳೆದ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷಕ್ಕೆ ದೊರೆತಿರುವ ಜನಾದೇಶ. ಇದಕ್ಕಾಗಿ ರಾಜ್ಯದ ಜನರನ್ನು ನಾನು ಮನದುಂಬಿ ಅಭಿನಂದಿಸುತ್ತೇನೆ.

3. ಕರ್ನಾಟಕದಲ್ಲಿ ಭಾರತೀಯ ಜನತಾ ಪಕ್ಷದ ಸರ್ಕಾರದ ಪ್ರತಿಷ್ಠಾಪನೆಯೊಂದಿಗೆ ದಕ್ಷಿಣ ಭಾರತದ ಇತಿಹಾಸದಲ್ಲಿ ನವಯುಗದ ಆರಂಭವಾಗಿದೆ. ರಾಜ್ಯದ ಜನತೆಯು ಅಭಿವೃದ್ಧಿ, ಸ್ಥಿರತೆ ಮತ್ತು ಸ್ಪಂದನಶೀಲ ಆಡಳಿತ ಬಯಸಿ ಭಾರತೀಯ ಜನತಾ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆ. ಅಭಿವೃದ್ಧಿ ಪ್ರಕ್ರಿಯೆಯ ವೇಗವನ್ನು ಹೆಚ್ಚಿಸಿ ಜನರ ಆಶಯಗಳಿಗೆ ಸ್ಪಂದಿಸುವ ಹೊಣೆಗಾರಿಕೆ ನಮ್ಮ ಮೇಲಿದೆ.

ಸವಿ ನುಡಿಯ ಸಿರಿ ಗುಡಿಯ

ಕಟ್ಟುವರು ನಾವು;

ಹೊಂಗನಸುಗಳ ಮುಡಿಯ

ಮುಟ್ಟುವರು ನಾವು.

ರಾಷ್ಟ್ರಕವಿ ಕುವೆಂಪುರವರ ಆಶಯದಂತೆ ನಾಡನ್ನು ಸಿರಿಗುಡಿಯನ್ನಾಗಿ ಕಟ್ಟುವುದು ನಮ್ಮ ಸರ್ಕಾರದ ಕನಸಾಗಿದೆ. ಜನರ ಭಾವನೆಗಳನ್ನು ಗೌರವಿಸಿ ಅವರ ಆಶಯ ಮತ್ತು ಅಗತ್ಯಗಳಿಗೆ ಸ್ಪಂದಿಸುವ ಪ್ರಾಮಾಣಿಕ ಪ್ರಯತ್ನಗಳನ್ನು ನಮ್ಮ ಸರ್ಕಾರ ಮಾಡಲಿದೆ.

4. ರೈತರ ಹೆಸರಿನಲ್ಲಿ ನಾನು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದೇನೆ. ಅನ್ನದಾತನ ಮೇಲೆ ಆಣೆಯಿಟ್ಟು ಅಧಿಕಾರಕ್ಕೆ ಬಂದ ನಾವು ಅವರ ಸಂಕಷ್ಟಗಳಿಗೆ ಸ್ಪಂದಿಸಲು ಬದ್ಧರಾಗಿದ್ದೇವೆ. ರೈತರ ಸಂಕಷ್ಟಗಳನ್ನು ನೇರವಾಗಿ ತಿಳಿದು ಪರಿಹಾರೋಪಾಯಗಳನ್ನು ರೂಪಿಸಲು ರಾಜಧಾನಿಯಿಂದ ಹಿಡಿದು ರಾಜ್ಯದ ಉದ್ದಗಲಕ್ಕೂ ಪ್ರಮುಖ ಜಿಲ್ಲಾ ಕೇಂದ್ರಗಳಲ್ಲಿ ರೈತರೊಡನೆ ಸಂವಾದ ನಡೆಸಿದ್ದೇವೆ. ಅಲ್ಲಿ ಮೂಡಿ ಬಂದ ಸಲಹೆಗಳನ್ನು ಆಧರಿಸಿ ಕೃಷಿ ಕ್ಷೇತ್ರವನ್ನು ಬಲಪಡಿಸಲು ಈ ಬಜೆಟ್‌ನಲ್ಲಿ ಪ್ರಯತ್ನಿಸಲಾಗಿದೆ. ಇದು ರೈತಪರವಾದ ಬಜೆಟ್ ಎಂದು ಹೆಮ್ಮೆಯಿಂದ ಹೇಳಬಯಸುತ್ತೇನೆ.

5. ರಾಜ್ಯದ ಈ ಸಾಲಿನ ಮುಂಗಡ ಪತ್ರದ ಮೂಲಕ ನಮ್ಮ ಸರ್ಕಾರದ ಅಭಿವೃದ್ಧಿಪರ ಚಿಂತನೆಯನ್ನು ತಮ್ಮ ಮುಂದಿಡುವ ಸಂದರ್ಭದಲ್ಲಿ ಇಡೀ ರಾಷ್ಟ್ರದ ಸದ್ಯದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಸ್ಥೂಲವಾಗಿ ಪ್ರಸ್ತಾಪಿಸುವುದು ಸೂಕ್ತ ಎನ್ನುವುದು ನನ್ನ ಭಾವನೆಯಾಗಿದೆ.

6. ಕಳೆದ ಐದು ವರ್ಷಗಳಲ್ಲಿ ನಮ್ಮ ದೇಶವು ಶೇ.8.7 ರಷ್ಟು ಆರ್ಥಿಕ ವೃದ್ಧಿದರವನ್ನು ಸಾಧಿಸಿದೆ. ಆದರೆ, ಪ್ರಸ್ತುತ ಆರ್ಥಿಕ ಪರಿಸ್ಥಿತಿಯನ್ನು ಗಮನಿಸಿದರೆ ತೀವ್ರ ಹಣದುಬ್ಬರ, ಬಿಗಿ ಹಣಕಾಸು ನೀತಿಗಳು ನಮ್ಮ ಬೆಳವಣಿಗೆಯ ಗತಿಯನ್ನು ಮಂದಗೊಳಿಸುವ ಸಾಧ್ಯತೆಗಳಿವೆ. ಇತ್ತೀಚಿನ ಏಳು ವರ್ಷಗಳಲ್ಲಿಯೇ ಅತ್ಯಧಿಕವೆನಿಸಿರುವ ಶೇ.11.89 ರ ಪ್ರಮಾಣದ ಹಣದುಬ್ಬರದ ಪರಿಣಾಮದಿಂದಾಗಿ ಆಹಾರ ಮತ್ತು ತೈಲಗಳ ಬೆಲೆಯಲ್ಲಿ ಏರಿಕೆಯಾಗಿದ್ದು ಇದು ಬಹಳಷ್ಟು ಬಡವರನ್ನು ಬಾಧಿಸುತ್ತಿದೆ. ಬೆಲೆ ಏರಿಕೆಯ ವಿಷಯದಲ್ಲಿ ಭಾರತ ಸರ್ಕಾರವು ಕೈಗೊಂಡಿರುವ ಪೂರೈಕೆ ಮತ್ತು ವಿತ್ತೀಯ ಕ್ರಮಗಳು ಬೆಲೆಯನ್ನು ನಿಯಂತ್ರಿಸುವಲ್ಲಿ ಅಲ್ಪ ಪ್ರಭಾವವನ್ನು ಮಾತ್ರ ಬೀರಿವೆ. ಭಾರತೀಯ ರಿಸರ್ವ್ ಬ್ಯಾಂಕ್ ಆರ್ಥಿಕ ನಿರ್ವಹಣೆಗೆ ಸಂಬಂಧಿಸಿದಂತೆ ಬೇಡಿಕೆಯನ್ನು ಸರಿದೂಗಿಸಲು ಹಣಕಾಸು ನೀತಿಯನ್ನು ಬಿಗಿಗೊಳಿಸಿದೆ. ಈ ಸಂದರ್ಭದಲ್ಲಿ ನಮ್ಮ ರಾಜ್ಯದ ಆರ್ಥಿಕ ವೃದ್ಧಿಯ ಬಗೆಗಿನ ನಮ್ಮ ನಿರೀಕ್ಷೆ ಕೂಡ ರಾಷ್ಟ್ರಮಟ್ಟದಲ್ಲಿನ ಅನಿಶ್ಚಯತೆ ಮತ್ತು ಜಾಗತಿಕಮಟ್ಟದ ಆರ್ಥಿಕ ಬಿಕ್ಕಟ್ಟುಗಳಿಂದ ಪ್ರಭಾವಿತವಾಗುವುದರಲ್ಲಿ ಸಂದೇಹವಿಲ್ಲ.

7. ರಾಜ್ಯದ ಅಭಿವೃದ್ಧಿಯ ಜವಾಬ್ದಾರಿಯನ್ನು ಹೊತ್ತುಕೊಂಡ ಒಂದೇ ತಿಂಗಳಿನೊಳಗೆ ರಾಜ್ಯ ಸರ್ಕಾರವು ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ರಾಜ್ಯ ಮಾರಾಟ ತೆರಿಗೆಯನ್ನು ಕಡಿತಗೊಳಿಸಿ ತೀವ್ರ ಬೆಲೆ ಏರಿಕೆಯನ್ನು ನಿಯಂತ್ರಿಸುವಲ್ಲಿ ಸಾಕಷ್ಟು ಯಶಸ್ಸು ಪಡೆದಿದೆ. ರಾಜ ಸರ್ಕಾರದ ಈ ಕ್ರಮದಿಂದಾಗಿ ಸರ್ಕಾರದ ಆದಾಯಕ್ಕೆ 380 ಕೋಟಿ ರೂ.ಗಳ ಕೊರತೆಯುಂಟಾಗಲಿದೆ. ಆದರೆ ರಾಜ್ಯ ಮಾರಾಟ ತೆರಿಗೆ ಕಡಿತದ ಪರಿಣಾಮದಿಂದಾಗಿ ಪ್ರತಿ ಲೀಟರ್ ಪೆಟ್ರೋಲಿನ ಬೆಲೆ 1.35 ರೂ.ಗಳಷ್ಟು, ಡೀಸೆಲ್‌ನ ಬೆಲೆ 65 ಪೈಸೆಗಳಷ್ಟು ಮತ್ತು ಅಡುಗೆ ಅನಿಲದ ಸಿಲಿಂಡರ್‌ನ ಬೆಲೆ 10.34 ರೂ.ಗಳಷ್ಟು ಕಡಿಮೆಯಾಗಿದೆ. ಆದಾಗ್ಯೂ ಇತರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿನ ಪೆಟ್ರೋಲಿಯಂ ಬೆಲೆಗಳು ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿವೆ. ಇದಕ್ಕೆ ತೈಲ ಸಂಸ್ಥೆಗಳು ಕರ್ನಾಟಕದಲ್ಲಿ ನಿಗದಿ ಮಾಡಿರುವ ಪೆಟ್ರೋಲಿಯಂ ಉತ್ಪನ್ನಗಳ ಮೂಲ ಬೆಲೆಯೇ ಹೆಚ್ಚಾಗಿರುವುದು ಕಾರಣವಾಗಿದೆ. ಆದ್ದರಿಂದ ತೈಲ ಕಂಪನಿಗಳು ವಿಧಿಸುವ ಮೂಲ ಬೆಲೆಯ ಅಸಮಾನತೆಯನ್ನು ನಿವಾರಿಸುವಂತೆ ನಾನು ಭಾರತ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೇನೆ.

8. ತೀವ್ರ ಹಣದುಬ್ಬರದ ಪರಿಣಾಮವನ್ನು ನಿಯಂತ್ರಿಸಲು ರಾಜ್ಯ ಸರ್ಕಾರದ ಬಳಿ ಸೀಮಿತ ಆರ್ಥಿಕ ಸಂಪನ್ಮೂಲ ಮತ್ತು ಅತಿ ಕಡಿಮೆ ವಿತ್ತೀಯ ಅವಕಾಶಗಳಿವೆ. ಆದ್ದರಿಂದ ನಾನು ಈ ಸದನದ ಮೂಲಕ ಹಣದುಬ್ಬರವನ್ನು ನಿಯಂತ್ರಿಸಲು ಇನ್ನೂ ಹೆಚ್ಚಿನ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕೆಂದು ಭಾರತ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ರಾಜ್ಯದ ಆರ್ಥಿಕ ಪರಿಸ್ಥಿತಿ

9. ಗೌರವಾನ್ವಿತ ಸದಸ್ಯರಿಗೆ ತಿಳಿದಿರುವಂತೆ ಕಳೆದ ಆರು ವರ್ಷಗಳಲ್ಲಿ ಕರ್ನಾಟಕದ ಆರ್ಥಿಕ ವೃದ್ಧಿಯು ನೈಸರ್ಗಿಕ ವೈಪರೀತ್ಯಗಳಿಂದ ಹಾಗೂ ತತ್ಪರಿಣಾಮವಾಗಿ ಕೃಷಿ ವಲಯದಲ್ಲಿನ ಹಿನ್ನಡೆಯಿಂದಾಗಿ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಹತ್ತನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ನಮ್ಮ ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು (Gross State Domestic Product) ವಾರ್ಷಿಕ ಸರಾಸರಿ 6 ರಷ್ಟು ಬೆಳೆದಿದ್ದು (1999-2000 ರ ಸ್ಥಿರ ಬೆಲೆ ಆಧಾರದಲ್ಲಿ) ಇದು ರಾಷ್ಟ್ರದ ಒಟ್ಟು ಆಂತರಿಕ ಉತ್ಪನ್ನದ ಬೆಳವಣಿಗೆಯ ಶೇ.7.8 ಕ್ಕೆ ಹೋಲಿಸಿದರೆ ಕಡಿಮೆ ಆಗುತ್ತದೆ. ರಾಜ್ಯದ ಉತ್ಪನ್ನದ ಬೆಳವಣಿಗೆಯು 2006-07 ರಲ್ಲಿದ್ದ ಶೇ.6.2 ರ ಪ್ರಮಾಣಕ್ಕೆ ಹೋಲಿಸಿದರೆ 2007-08 ರಲ್ಲಿ ಶೇ.7 ರ ಪ್ರಮಾಣಕ್ಕೆ ಸುಧಾರಿಸಿದ್ದು ರಾಜ್ಯದ ಒಟ್ಟು ಆಂತರಿಕ ಉತ್ಪನ್ನವನ್ನು 2,15,282 ಕೋಟಿ ರೂ.ಗಳಿಗೆ ಹೆಚ್ಚಿಸಿದೆ. (ಚಾಲ್ತಿ ಬೆಲೆಗಳ ಆಧಾರ) ಮುಂಗಡ ಅಂದಾಜುಗಳ ರೀತ್ಯಾ ಚಾಲ್ತಿ ಬೆಲೆಗಳ ಆಧಾರದಲ್ಲಿ 2007-08 ನೇ ಸಾಲಿನಲ್ಲಿನ ರಾಜ್ಯದ ತಲಾ ಆದಾಯವು 37,576 ರೂ.ಗಳೆಂದು ಅಂದಾಜು ಮಾಡಲಾಗಿದೆ.

10. ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ ಶೇ.55.72 ರಷ್ಟು ಹೆಚ್ಚಿನ ಕೊಡುಗೆ ಸೇವಾ ವಲಯದಿಂದ ಬರುತ್ತಿದೆ. ಉತ್ಪಾದನೆ ಮತ್ತು ಗಣಿ ವಲಯವನ್ನು ಒಳಗೊಂಡಿರುವ ದ್ವಿತೀಯ ವಲಯದ ಪಾಲು ಶೇ.25.16 ರಷ್ಟಿದೆ. ರಾಜ್ಯದ ಶೇ.56 ರಷ್ಟು ಮಂದಿ ದುಡಿಮೆಗಾರರಿಗೆ ಉದ್ಯೋಗ ಒದಗಿಸುವ ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಒಳಗೊಂಡ ಪ್ರಾಥಮಿಕ ವಲಯದ ಕೊಡುಗೆ ಕೇವಲ ಶೇ.19.13 ಎಂದು ಅಂದಾಜು ಮಾಡಲಾಗಿದೆ.

11. ಹನ್ನೊಂದನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ರಾಷ್ಟ್ರದ ಬೆಳವಣಿಗೆಯ ಗುರಿಯಾದ ಶೇ.9 ರ ಪ್ರಮಾಣದಲ್ಲಿ ರಾಜ್ಯದ ಬೆಳವಣಿಗೆಯನ್ನು ಹೆಚ್ಚಿಸಲು ಮತ್ತು ಗುರಿಯನ್ನು ಮೀರಲು ರಾಜ್ಯವು ಪ್ರಯತ್ನಿಸಬೇಕಾಗಿದೆ. ಕರ್ನಾಟಕದ ಒಟ್ಟು ಆಂತರಿಕ ಉತ್ಪನ್ನದ ವಲಯವಾರು ವಿಭಜನೆ ಮತ್ತು ಕೃಷಿ ವಲಯದ ಮಂದಗತಿಯ ಬೆಳವಣಿಗೆಗಳನ್ನು ಪರಿಶೀಲಿಸಿದಾಗ ಪ್ರಾಥಮಿಕ ವಲಯದ ಶೇ.2 ರ ಬೆಳವಣಿಗೆಯನ್ನು ಕನಿಷ್ಟ ಶೇ.4 ರ ಪ್ರಮಾಣಕ್ಕೆ ಏರಿಸುವ ಅಗತ್ಯ ಕಂಡುಬರುತ್ತಿದೆ. ಇದೇ ರೀತಿಯಲ್ಲಿ ಈ ಹಿಂದೆ ಶೇ.9 ರ ಪ್ರಮಾಣದ ಬೆಳವಣಿಗೆ ತೋರಿಸಿದ್ದ ಸೇವಾವಲಯವನ್ನು ರಾಜ್ಯದಲ್ಲಿರುವ ಅನುಕೂಲಕರ ಮಾನವ ಸಂಪನ್ಮೂಲ ಹಾಗೂ ಜ್ಞಾನತಳಹದಿಯನ್ನು ಬಳಸಿಕೊಂಡು ಮತ್ತಷ್ಟು ಸುಧಾರಿಸಲು ಬೆಂಬಲಿಸಬೇಕಾಗಿದೆ. ಇತ್ತೀಚಿನ ವರ್ಷಗಳಲ್ಲಿ ಶೇ.6 ರಿಂದ 7 ರಷ್ಟು ಪ್ರಮಾಣದ ಆರ್ಥಿಕ ವೃದ್ಧಿಯನ್ನು ತೋರಿಸಿರುವ ಕೈಗಾರಿಕಾ ವಲಯದ ಪ್ರಗತಿಯನ್ನು ಮತ್ತಷ್ಟು ಬಲಪಡಿಸಲು ಅಗತ್ಯ ನೆರವು ನೀಡಬೇಕಾಗಿದೆ.

ಈ ಎಲ್ಲಾ ಅಂಶಗಳನ್ನು ಗಮನಿಸಿದರೆ ರಾಜ್ಯವು ಕೃಷಿ ವಲಯಕ್ಕೆ ಹೆಚ್ಚಿನ ಪ್ರಮಾಣದ ಹೂಡಿಕೆಯನ್ನು ಒಗ್ಗೂಡಿಸುವ ಜೊತೆಯಲ್ಲಿಯೇ ಕೈಗಾರಿಕೆ ಮತ್ತು ಸೇವಾ ವಲಯಕ್ಕೆ ಖಾಸಗಿ ಹೂಡಿಕೆಯನ್ನು ಆಕರ್ಷಿಸಲು ಹೆಚ್ಚಿನ ಪ್ರಯತ್ನ ನಡೆಸಬೇಕಾದ ಅಗತ್ಯ ಕಂಡುಬರುತ್ತಿದೆ.

ವಿತ್ತೀಯ ಪರಿಸ್ಥಿತಿ

12. ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕದ ಆರ್ಥಿಕ ವೃದ್ಧಿಯು ರಾಷ್ಟ್ರೀಯ ಸರಾಸರಿಗಿಂತ ಕಡಿಮೆಯಾಗಿದ್ದರೂ ರಾಜ್ಯದ ವಿತ್ತೀಯ ಪರಿಸ್ಥಿತಿ ಗಣನೀಯ ಪ್ರಮಾಣದ ಸುಧಾರಣೆಯನ್ನು ಬಿಂಬಿಸುತ್ತಿದೆ. 2000-01 ನೇ ಸಾಲಿನಿಂದ ರಾಜ್ಯವು ಅಳವಡಿಸಿಕೊಂಡಿರುವ ವಿತ್ತೀಯ ಸುಧಾರಣೆಗಳು ಈ ಪ್ರಗತಿಗೆ ಮೂಲ ಕಾರಣಗಳಾಗಿವೆ. 2004-05 ನೇ ಸಾಲಿನಿಂದ ರಾಜ್ಯವು ಪ್ರತೀ ವರ್ಷದಲ್ಲಿ ರಾಜಸ್ವ ವೆಚ್ಚದ ಮೇಲೆ ರಾಜಸ್ವದ ಹೆಚ್ಚಳ (Revenue Surplus) ವನ್ನು ಕಾಪಾಡಿಕೊಂಡು ಬರುತ್ತಿದೆ. ಇದರ ಜೊತೆಗೆ ಇದೇ ಅವಧಿಯಲ್ಲಿ ರಾಜ್ಯದ ವಿತ್ತೀಯ ಕೊರತೆ (fiscal deficit)ಯನ್ನು ಶೇ.3 ಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿ ನಿಯಂತ್ರಿಸಿಕೊಂಡು ಬರುತ್ತಿದೆ. ಇದರ ಪರಿಣಾಮದಿಂದಾಗಿ ರಾಜ್ಯದ ಒಟ್ಟು ಸಾಲದ ಮೊತ್ತವು 60588 ಕೋಟಿ ರೂ.ಗಳಾಗಿದ್ದು, ಇದು 2007-08 ಸಾಲಿನ ಆಂತರಿಕ ಉತ್ಪನ್ನದ (GSDP) ಶೇ.30 ಕ್ಕಿಂತ ಕಡಿಮೆ ಪ್ರಮಾಣದಲ್ಲಿದೆ. ರಾಜ್ಯದ ಒಟ್ಟು ಸಾಲ ತೀರುವಳಿ, ಹೊಣೆಗಾರಿಕೆಯು ಬಡ್ಡಿ ಪಾವತಿಯನ್ನೂ ಸೇರಿಸಿಕೊಂಡು, 2007-08 ನೇ ಸಾಲಿನಲ್ಲಿ 6018 ಕೋಟಿ ರೂ.ಗಳಿದ್ದು ಇದು ರಾಜ್ಯದ ರಾಜಸ್ವ ಸ್ವೀಕೃತಿಗಳ ಶೇ.14.73 ರ ಪ್ರಮಾಣದಲ್ಲಿರುತ್ತದೆ.

13. ಕರ್ನಾಟಕ ಸರ್ಕಾರವು ಅಳವಡಿಸಿಕೊಂಡು ಬರುತ್ತಿರುವ ವಿತ್ತೀಯ ಸುಧಾರಣೆಗಳ ಬಗ್ಗೆ ಭಾರತ ಸರ್ಕಾರ ಮತ್ತು ಹನ್ನೆರಡನೇ ಹಣಕಾಸು ಆಯೋಗವು ಮೆಚ್ಚುಗೆ ಮತ್ತು ಬೆಂಬಲವನ್ನು ವ್ಯಕ್ತಪಡಿಸಿವೆ. ಕರ್ನಾಟಕವು 2002 ರಿಂದಲೇ ಅಳವಡಿಸಿಕೊಂಡಿರುವ ವಿತ್ತೀಯ ಸುಧಾರಣಾ ಶಾಸನಗಳನ್ನು ಇತರೆ ರಾಜ್ಯಗಳು ನಂತರದ ವರ್ಷಗಳಲ್ಲಿ ಅಳವಡಿಸಿಕೊಳ್ಳುತ್ತಿವೆ. ಹನ್ನೆರಡನೇ ಹಣಕಾಸು ಆಯೋಗವು ಶಿಫಾರಸ್ಸು ಮಾಡಿರುವಂತೆ ರಾಜ್ಯವು ಸಾಲ ಒಗ್ಗೂಡಿಸುವಿಕೆ ಮತ್ತು ಸಾಲ ಪರಿಹಾರ ಯೋಜನೆಗಳ ಸೌಲಭ್ಯವನ್ನು ಪಡೆದುಕೊಂಡಿದೆ.

14. ರಾಜ್ಯದ ವಿತ್ತೀಯ ಸ್ಥಿರತೆಯನ್ನು ದೀರ್ಘಾವಧಿಯಲ್ಲಿ ಕಾಪಾಡಿಕೊಳ್ಳುವ ದೃಷ್ಟಿಯಿಂದ ವಿತ್ತೀಯ ಸುಧಾರಣೆಗಳನ್ನು ರಾಜ್ಯವು ಮುಂದುವರಿಸಿಕೊಂಡು ಹೋಗಬೇಕಾಗಿದೆ. ಇದರಿಂದ ಅಭಿವೃದ್ಧಿಯೇತರ ಮತ್ತು ರಾಜಸ್ವ ವೆಚ್ಚಗಳನ್ನು ಕಡಿಮೆ ಮಾಡಿ ತನ್ಮೂಲಕ ಸಂಪನ್ಮೂಲಗಳನ್ನು ಸಂಗ್ರಹಿಸಿ ಅದನ್ನು ಅಭಿವೃದ್ಧಿ ವೆಚ್ಚ ಮತ್ತು ಬಂಡವಾಳ ಹೂಡಿಕೆಗೆ ಒದಗಿಸಲಾಗುವುದು.

15. ರಾಜ್ಯದ ಗ್ರಾಮೀಣ ಮತ್ತು ನಗರ ಪ್ರದೇಶದ ನಾಗರೀಕರಿಗೆ ಉತ್ತಮ ಗುಣಮಟ್ಟದ ಜೀವನ ನೀಡಿ ಸಮೃದ್ಧ ಕರ್ನಾಟಕವನ್ನು ಕಟ್ಟಲು ನಮ್ಮ ಸರ್ಕಾರವು ಬದ್ಧವಾಗಿದೆ. ಅಭಿವೃದ್ಧಿಯ ವೇಗವನ್ನು ಹೆಚ್ಚಿಸುವುದು ನಮ್ಮ ಆಡಳಿತ ಮಂತ್ರವಾಗಿದೆ. ರಾಜ್ಯದ ಎಲ್ಲ ಪ್ರದೇಶಗಳ ಸಮಾನ ಅಭಿವೃದ್ಧಿಗೆ ಆದ್ಯತೆ ನೀಡುವುದು ಮತ್ತು ಎಲ್ಲ ಜಾತಿ, ಸಮುದಾಯಗಳಿಗೆ ಸೇರಿದ ದುರ್ಬಲ ವರ್ಗಗಳ ಜನರ ಬದುಕನ್ನು ಹಸನುಗೊಳಿಸುವುದು ನಮ್ಮ ಬದ್ಧತೆಯಾಗಿದೆ. ಆರ್ಥಿಕ ವೃದ್ಧಿಯ ಜೊತೆ ಸಾಮಾಜಿಕ ಅಭಿವೃದ್ಧಿಯನ್ನು ಸಮನ್ವಯಗೊಳಿಸಿ ಎಲ್ಲರ ಕಲ್ಯಾಣ ಸಾಧಿಸುವುದು ನಮ್ಮ ಗುರಿಯಾಗಿದೆ.

"ಪ್ರೀತಿ-ಕರುಣೆ-ಸ್ನೇಹ-ಮರುಕ
ಇವೇ ನಮ್ಮ ದೇವರು
ಇಲ್ಲಿ ಇಲ್ಲ ಜಾತಿ ಗೀತಿ
ಇಲ್ಲಿ ಇರುವುದೊಂದೆ ಪ್ರೀತಿ
ಅಳೆಯಲಾರದಿದನು ನೀತಿ
ಇಲ್ಲಿ ನೀತಿಯೊಂದೇ ಪ್ರೀತಿ"

ನಮ್ಮ ಸರ್ಕಾರದ ಧ್ಯೇಯ ರಾಷ್ಟ್ರಕವಿ ಡಾ|| ಜಿ.ಎಸ್. ಶಿವರುದ್ರಪ್ಪನವರ ಕವನದಲ್ಲಿನ ಅಭಿವ್ಯಕ್ತಿಗೆ ಪ್ರತಿರೂಪವಾಗಿದೆ.

16. ಹಿಂದಿನ ಮೈತ್ರಿ ಸರ್ಕಾರದಲ್ಲಿ ನಾನು ಮಂಡಿಸಿದ್ದ ಎರಡು ಮುಂಗಡ ಪತ್ರಗಳು ಜನಸಾಮಾನ್ಯರಿಂದ ಹಿಡಿದು ತಜ್ಞರವರೆಗೆ ಮೆಚ್ಚುಗೆಗೆ ಪಾತ್ರವಾಗಿರುವುದನ್ನು ಈ ಸಂದರ್ಭದಲ್ಲಿ ವಿನಮ್ರವಾಗಿ ಸ್ಮರಿಸುತ್ತೇನೆ. ರೈತರು, ಕೃಷಿ ಕಾರ್ಮಿಕರು, ಪರಿಶಿಷ್ಟರು, ಹಿಂದುಳಿದವರು, ಅಲ್ಪಸಂಖ್ಯಾತರು, ಮಹಿಳೆಯರು ಮತ್ತು ಯುವಜನರ ಕಲ್ಯಾಣಕ್ಕೆ ನಾವು ರೂಪಿಸಿದ್ದ ಕಾರ್ಯಕ್ರಮಗಳು ಮನೆಮಾತಾಗಿವೆ. ಭಾಗ್ಯಲಕ್ಷ್ಮೀ ಯೋಜನೆ, ಸಂಧ್ಯಾ ಸುರಕ್ಷಾ ಯೋಜನೆ, ಸುವರ್ಣ ಕಾಯಕ ಯೋಜನೆ, ಉಚಿತ ಬೈಸಿಕಲ್ ವಿತರಣೆ, ಆದರ್ಶ ವಿವಾಹ ಇತ್ಯಾದಿ ಜನಪರವಾದ ಯೋಜನೆ ಮೊದಲಾದ ಯೋಜನೆಗಳು ಮುಂದುವರಿಯಲಿವೆ.

ಕರ್ನಾಟಕ ಅಭಿವೃದ್ಧಿ ಮುನ್ನೋಟ

17. ಕರ್ನಾಟಕವು ಪ್ರಗತಿಪರ ರಾಜ್ಯವೆಂದು ಜಗತ್ತಿನಾದ್ಯಂತ ಮನ್ನಣೆ ಗಳಿಸಿದೆ. ಇದರ ರಾಜಧಾನಿ ಬೆಂಗಳೂರು ನಗರವು ಜಾಗತಿಕ ಮಟ್ಟದಲ್ಲಿ ಮುಂಚೂಣಿಯಲ್ಲಿರುವ ತಂತ್ರಜ್ಞಾನದ ನೆಲೆಯಾಗಿದೆ. ರಾಜ್ಯದಲ್ಲಿರುವ ಗುಣಮಟ್ಟದ ಮಾನವ ಸಂಪನ್ಮೂಲವು ನಮ್ಮ ರಾಜ್ಯವನ್ನು ಅಭಿವೃದ್ಧಿ ಭೂಪಟದಲ್ಲಿ ಅಗ್ರಸ್ಥಾನಕ್ಕೇರಿಸುವ ಸಾಮರ್ಥ್ಯವನ್ನು ಹೊಂದಿದೆ. ಸ್ವಾತಂತ್ರ್ಯಾನಂತರದ ಆರು ದಶಕಗಳಲ್ಲಿ ನಮ್ಮ ರಾಜ್ಯವು ಗಣನೀಯ ಪ್ರಗತಿಯನ್ನು ಸಾಧಿಸಿದ್ದರೂ ನಮ್ಮ ಅಭ್ಯುದಯದ ಕನಸನ್ನು ನನಸುಗೊಳಿಸುವ ದಾರಿಯಲ್ಲಿ ನಾವು ಇನ್ನೂ ಬಹಳ ದೂರ ಸಾಗಬೇಕಾಗಿದೆ. ರಾಷ್ಟ್ರದ ಪ್ರಮುಖ ರಾಜ್ಯಗಳ ಪೈಕಿ ಕರ್ನಾಟಕವು ಅಭಿವೃದ್ಧಿ ಶ್ರೇಣಿಯಲ್ಲಿ ಏಳನೇ ಸ್ಥಾನದಲ್ಲಿದೆ. ಆದರೆ ಈ ಸ್ಥಾನವು ನಮ್ಮ ಸಾಮರ್ಥ್ಯ ಮತ್ತು ಜನತೆಯ ಆಶಯಗಳಿಗೆ ಅನುಗುಣವಾಗಿಲ್ಲ. ನಮ್ಮ ರಾಷ್ಟ್ರದ ಅಭಿವೃದ್ಧಿಶೀಲ ರಾಜ್ಯಗಳ ಪೈಕಿ ಕರ್ನಾಟಕವನ್ನು ಮೇಲ್ಪಂಕ್ತಿಗೆ ಏರಿಸುವುದು ಹಾಗೂ ಮಾದರಿ ರಾಜ್ಯವನ್ನಾಗಿಸುವುದು ನಮ್ಮ ಸರ್ಕಾರದ ಅಪೇಕ್ಷೆಯಾಗಿದೆ.

18. ನಾಡಿನ ಸಮಗ್ರ ಅಭಿವೃದ್ಧಿಗಾಗಿ ರಾಜ್ಯದ ಸಂಪೂರ್ಣ ಸಾಮರ್ಥ್ಯವನ್ನು ಸದ್ಬಳಕೆ ಮಾಡುವ ಕನಸನ್ನು ನನಸು ಮಾಡುವ ಉದ್ದೇಶದ ನೀಲನಕ್ಷೆ "ಕರ್ನಾಟಕ 2020" ನ್ನು ತಯಾರಿಸಲು ಒಂದು ಕಾರ್ಯಪಡೆ ಈಗಾಗಲೇ ಕಾರ್ಯೋನ್ಮುಖವಾಗಿದೆ. ಬಡತನವನ್ನು ಸಂಪೂರ್ಣವಾಗಿ ನಿವಾರಿಸಿ, ಪ್ರಾಂತೀಯ ಅಸಮಾನತೆಯನ್ನು ತೊಡೆದುಹಾಕಿ, ರಾಜ್ಯದ ಗ್ರಾಮೀಣ ಮತ್ತು ನಗರ ಪ್ರದೇಶಗಳ ಜನರ ಜೀವನ

ಗುಣಮಟ್ಟವನ್ನು ಸುಧಾರಿಸುವ ಹಾಗೂ ರಾಜ್ಯದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಸಮಾನತೆಯನ್ನು ಉತ್ತೇಜಿಸುವ ಕಾರ್ಯತಂತ್ರಗಳನ್ನು ಈ ನೀಲನಕ್ಷೆ ಅನಾವರಣಗೊಳಿಸಲಿದೆ. ಈ ನೀಲನಕ್ಷೆಯನ್ನು ತಯಾರಿಸುವಲ್ಲಿ ರಾಜ್ಯದ ಜನತೆ ಹಾಗೂ ಎಲ್ಲಾ ರಾಜಕೀಯ ಪಕ್ಷಗಳ ನಾಯಕರು, ಚುನಾಯಿತ ಜನಪ್ರತಿನಿಧಿಗಳು ಸಲಹೆಗಳನ್ನು ನೀಡಿ ಸಹಕರಿಸಬೇಕೆಂದು ಕೋರುತ್ತೇನೆ.

19. ನಮ್ಮ ಸರ್ಕಾರವು ಮುಂದಿನ ಐದು ವರ್ಷಗಳಲ್ಲಿ ಸಮೃದ್ಧ ಕರ್ನಾಟಕ ನಿರ್ಮಾಣಕ್ಕಾಗಿ ಭದ್ರ ಬುನಾದಿಯನ್ನು ಹಾಕುವ ಸಂಕಲ್ಪ ತಳೆದಿದ್ದು ಈ ಸಂಬಂಧ ನಮ್ಮ ಅಭಿವೃದ್ಧಿ ಕಾರ್ಯತಂತ್ರಗಳ ಮುಖ್ಯಾಂಶಗಳನ್ನು ಇಲ್ಲಿ ನಮೂದಿಸುತ್ತೇನೆ.

- ಕರ್ನಾಟಕದ ಶೇ. 60 ಕ್ಕೂ ಹೆಚ್ಚಿನ ಜನರು ತಮ್ಮ ಜೀವನ ನಿರ್ವಹಣೆಗಾಗಿ ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಆಶ್ರಯಿಸಿದ್ದಾರೆ. ಆದ್ದರಿಂದ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ, ರೇಷ್ಮೆ ಮತ್ತು ಇತರೆ ಪೂರಕ ಚಟುವಟಿಕೆಗಳ ಸಮಗ್ರ ಅಭಿವೃದ್ಧಿಯನ್ನು ಉತ್ತೇಜಿಸುವುದು ಹಾಗೂ ಈ ವೃತ್ತಿಗಳನ್ನು ಲಾಭದಾಯಕಗೊಳಿಸುವುದು;
- ರಾಜ್ಯದ 56,000 ಗ್ರಾಮ ಮತ್ತು ಉಪಗ್ರಾಮಗಳಲ್ಲಿರುವ ಜನರಿಗೆ ಮೂಲ ಸೌಕರ್ಯಗಳಾದ ವಸತಿ, ಕುಡಿಯುವ ನೀರು, ಶೌಚಾಲಯ, ರಸ್ತೆ, ವಿದ್ಯುತ್, ಆರೋಗ್ಯ ಮತ್ತು ಶೈಕ್ಷಣಿಕ ಸೇವೆಗಳನ್ನು ಒದಗಿಸುವುದು;
- ಭಾರತದ ಹೆಮ್ಮೆಯ ನಗರ ಬೆಂಗಳೂರನ್ನೂ ಒಳಗೊಂಡಂತೆ ರಾಜ್ಯದ ಎಲ್ಲ ನಗರ ಮತ್ತು ಪಟ್ಟಣಗಳಿಗೆ ಮೂಲಸೌಕರ್ಯ ಮತ್ತು ನಾಗರಿಕ ಸೌಲಭ್ಯಗಳನ್ನು ಶೀಘ್ರವಾಗಿ ಒದಗಿಸಿ ರಾಜ್ಯದ ಅಭಿವೃದ್ಧಿ ಮಟ್ಟವನ್ನು ಹೆಚ್ಚಿಸುವುದು;
- ಬೆಳವಣಿಗೆ ಪಥದಲ್ಲಿರುವ ಕೈಗಾರಿಕೆ ಮತ್ತು ಸೇವಾ ವಲಯಗಳಲ್ಲಿ ಹೆಚ್ಚುವರಿಯಾಗಿ ಹತ್ತು ಲಕ್ಷ ಉದ್ಯೋಗಾವಕಾಶ ಸೃಜಿಸಲು ಮುಂದಿನ ಐದು ವರ್ಷಗಳಲ್ಲಿ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಗೊಳಿಸುವುದು;
- ಕೈಗಾರಿಕಾ ಅಭಿವೃದ್ಧಿಗಾಗಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಮೂಲಸೌಕರ್ಯ ಸೃಜಿಸಿ ರಾಜ್ಯಾದ್ಯಂತ ಕೈಗಾರಿಕಾ ಕಾರಿಡಾರ್‌ಗಳನ್ನು ಉತ್ತೇಜಿಸುವುದು;
- ರಾಜ್ಯದ ಕೈಗಾರಿಕಾ ಅಭಿವೃದ್ಧಿಗೆ ಅನುವಾಗುವಂತೆ ಖಾಸಗಿ; ಸಾರ್ವಜನಿಕ ಸಹಭಾಗಿತ್ವದಲ್ಲಿ ರಾಜ್ಯದ ಹೆದ್ದಾರಿಗಳು, ರೈಲ್ವೆ ಮಾರ್ಗಗಳು, ಬಂದರುಗಳು ಮತ್ತು ವಿಮಾನ ನಿಲ್ದಾಣಗಳನ್ನು ನಿರ್ಮಿಸುವುದು ಹಾಗೂ ಕೈಗಾರಿಕಾ ವಸಾಹತುಗಳು ಮತ್ತು ವಿದ್ಯುತ್ ಉತ್ಪಾದನಾ ಘಟಕಗಳನ್ನು ಸ್ಥಾಪಿಸುವುದು;

- ನಮ್ಮ ಜನತೆಯ ಸಂಸ್ಕೃತಿ ಮತ್ತು ಭಾಷಾ ಪರಂಪರೆಯನ್ನು ಸಂರಕ್ಷಿಸುವುದು ಹಾಗೂ ಕಲೆ, ಸಾಹಿತ್ಯವನ್ನು ಸಂಪನ್ನಗೊಳಿಸಿ ರಾಜ್ಯದ ಸಾಂಸ್ಕೃತಿಕ ಲೋಕವನ್ನು ಸಮೃದ್ಧಗೊಳಿಸುವುದು; ಇದರ ಜೊತೆಗೆ ಕರ್ನಾಟಕದ ಭವ್ಯ ಪರಂಪರೆ ಮತ್ತು ಮನಮೋಹಕ ಸೌಂದರ್ಯದ ಅದ್ಭುತ ನೋಟವನ್ನು ಪ್ರವಾಸಿಗರಿಗೆ ಉಣಬಡಿಸಲು ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವುದು;
- ಅಲ್ಪಸಂಖ್ಯಾತರ ಮತ್ತು ದುರ್ಬಲ ವರ್ಗಗಳ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಬೆಂಬಲ ನೀಡಲು ವಿಶೇಷ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು;
- ರಾಜ್ಯದ ಸಮೃದ್ಧ ಹಾಗೂ ವೈವಿಧ್ಯಮಯ ನಿಸರ್ಗಸಿರಿ, ಸಸ್ಯಸಂಪತ್ತು, ವನ್ಯಜೀವಿಗಳ ಸಂರಕ್ಷಣೆ ಮತ್ತು ನಾಗರಿಕರ ಜೀವನ ಗುಣಮಟ್ಟ ಹಸನಾಗಿಸಲು ರಾಜ್ಯದ ಪರಿಸರವನ್ನು ಕಾಪಾಡಿಕೊಂಡು ಹೋಗುವುದು;
- ರಾಜ್ಯದಲ್ಲಿ ಪ್ರಜಾಪ್ರಭುತ್ವ ಪದ್ಧತಿಯನ್ನು ಪೋಷಿಸುವುದು ಹಾಗೂ ತಳಮಟ್ಟದ ಆಡಳಿತ ವ್ಯವಸ್ಥೆಯಾದ ಪಂಚಾಯತ್‌ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳು ದಕ್ಷತೆಯಿಂದ ನಾಗರಿಕ ಪರವಾದ ಆಡಳಿತವನ್ನು ನೀಡುವಂತೆ ಉತ್ತೇಜಿಸುವುದು;

2008-09 ರ ಪರಿಷ್ಕೃತ ಮುಂಗಡಪತ್ರದ ಮುಖ್ಯಾಂಶಗಳು

20. ಮೇಲ್ಕಂಡ ಹತ್ತು ಅಂಶಗಳ ಕಾರ್ಯತಂತ್ರವನ್ನು ಅನುಸರಿಸುವ ಹಿನ್ನೆಲೆಯಲ್ಲಿ, ನಮ್ಮ ರಾಜ್ಯದ 2008-09 ನೇಯ ಸಾಲಿನ ಪರಿಷ್ಕೃತ ಮುಂಗಡ ಪತ್ರದ ಮುಖ್ಯಾಂಶಗಳ ಬಗ್ಗೆ ಗೌರವಾನ್ವಿತ ಸದನದ ಸದಸ್ಯರ ಗಮನವನ್ನು ಸೆಳೆಯಲು ಇಚ್ಛಿಸುತ್ತೇನೆ.

ಕೃಷಿ ರಂಗ :

- 10 ಹೆಚ್.ಪಿ.ವರೆಗಿನ 15 ಲಕ್ಷ ನೀರಾವರಿ ಪಂಪ್‌ಸೆಟ್‌ಗಳಿಗೆ ಆಗಸ್ಟ್ 1 ರಿಂದ ಉಚಿತ ವಿದ್ಯುತ್. ಈ ವೆಚ್ಚವೂ ಸೇರಿ ಒಟ್ಟು ವಿದ್ಯುತ್ ಸಹಾಯಧನ 2050 ಕೋಟಿ ರೂ.
- ಸಂಪೂರ್ಣ ಒಣಭೂಮಿ ಕೃಷಿಯಲ್ಲಿ ನಿರತರಾಗಿರುವ 50 ಲಕ್ಷ ಸಣ್ಣ ಮತ್ತು ಅತಿಸಣ್ಣ ರೈತ ಕುಟುಂಬಗಳಿಗೆ ಮಳೆ ವೈಫಲ್ಯದ ಹಿನ್ನೆಲೆಯಲ್ಲಿ ಬಿತ್ತನೆ ಬೀಜ ಮತ್ತು ಗೊಬ್ಬರ ಕೊಳ್ಳಲು ಮೊಟ್ಟ ಮೊದಲ ಬಾರಿಗೆ ಪ್ರತಿ ಕುಟುಂಬಕ್ಕೆ 1 ಸಾವಿರ ರೂ. ಸಹಾಯಧನ ನೀಡಲಾಗುವುದು. ಈ ವರ್ಷಕ್ಕೆ ಸೀಮಿತವಾಗಿ ಇದಕ್ಕಾಗಿ 500 ಕೋಟಿ ರೂ. ಹಂಚಿಕೆ ಮಾಡಲಾಗಿದೆ.
- ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಹಾಲಿಗೆ 2 ರೂ. ಪ್ರೋತ್ಸಾಹಧನ. ಇದಕ್ಕಾಗಿ 130 ಕೋಟಿ ರೂ. ಅನುದಾನ.

- ಕೃಷಿ ಆವರ್ತ ನಿಧಿಗೆ 500 ಕೋಟಿ ರೂ.
- ಶೇ.3 ರ ಬಡ್ಡಿ ದರದಲ್ಲಿ ಕೃಷಿ ಸಾಲ. ನೇಕಾರರು ಮತ್ತು ಮೀನುಗಾರರಿಗೂ ಈ ಸೌಲಭ್ಯ.
- ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ಚಟುವಟಿಕೆಗಳ ಸಮಗ್ರ ಅಭಿವೃದ್ಧಿಗೆ ಮುಖ್ಯಮಂತ್ರಿ ನೇತೃತ್ವದಲ್ಲಿ "ಕೃಷಿ ಮಿಷನ್" ರಚನೆ.
- ರಾಜ್ಯಾದ್ಯಂತ ಸಾವಯವ ಕೃಷಿ ಉತ್ತೇಜಿಸಲು ವಿಶೇಷ ಆಯೋಗ. ಪ್ರಥಮ ಹಂತದಲ್ಲಿ ಒಂದು ಸಾವಿರ ಗ್ರಾಮಗಳಲ್ಲಿ ಪ್ರತಿ ರೈತ ಕುಟುಂಬಕ್ಕೆ 2000 ರೂ. ಸಹಾಯಧನ.
- ರಾಜ್ಯದಲ್ಲಿನ ಎಲ್ಲಾ 36,000 ಕೆರೆಗಳ ಜೀರ್ಣೋದ್ಧಾರಕ್ಕೆ ಜಲ ಸಂವರ್ಧನೆ ಮಾದರಿಯಲ್ಲಿ ಸಮಗ್ರ ಯೋಜನೆಯ ರಚನೆ ಮತ್ತು ಅನುಷ್ಠಾನಕ್ಕೆ ಕ್ರಮ.
- ಜಲಸಂಪನ್ಮೂಲಗಳ ನಿರ್ವಹಣೆ ಮತ್ತು ನೀತಿ ನಿರೂಪಣೆಗೆ ವಿಶೇಷ ಪ್ರಾಧಿಕಾರದ ರಚನೆ.
- ಅಂತರ್ಜಲದ ಉತ್ತಮ ನಿರ್ವಹಣೆಗೆ ಸೂಕ್ತ ಕಾನೂನಿನ ರಚನೆ.

ಅಸಮತೋಲನ ನಿವಾರಣೆ :

- ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಡಾ|| ಡಿ.ಎಂ. ನಂಜುಂಡಪ್ಪ ಸಮಿತಿಯ ಸಲಹೆಗಳನ್ನು ಅನುಷ್ಠಾನಗೊಳಿಸಲು 2,547 ಕೋಟಿ ರೂ. ವಿಶೇಷ ನೆರವು.

ಗ್ರಾಮ ಪಂಚಾಯತ್ :

- 90 ಸಾವಿರ ಗ್ರಾಮ ಪಂಚಾಯತ್ ಸದಸ್ಯರಿಗೆ ಮಾಸಿಕ ಗೌರವ ಧನ.
- ಗ್ರಾಮ ಪಂಚಾಯಿತಿಗಳಿಗೆ ಮತ್ತು ನಗರ ಪ್ರದೇಶಗಳಿಗೆ ನದಿ ಹಾಗೂ ಜಲಾಶಯಗಳಿಂದ ಕುಡಿಯುವ ನೀರು ಪೂರೈಸಲು ಸಮಗ್ರ ಕುಡಿಯುವ ನೀರು ಯೋಜನೆ ಜಾರಿಗೆ ನಿರ್ಧಾರ.
- ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಸೈಬರ್ ಕೇಂದ್ರಗಳ ಸ್ಥಾಪನೆ.

ಶಿಕ್ಷಣ :

- 1993 ಮತ್ತು 1994 ರಲ್ಲಿ ಆರಂಭವಾದ ಖಾಸಗಿ ಪ್ರೌಢಶಾಲೆಗಳನ್ನು ಅನುದಾನಕ್ಕೆ ಒಳಪಡಿಸಲಾಗುವುದು.
- ಸರ್ವಶಿಕ್ಷಾ ಅಭಿಯಾನಕ್ಕೆ ಈ ವರ್ಷ 958 ಕೋಟಿ ರೂ.ಗಳ ಅನುದಾನ.
- 8 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 7 ಲಕ್ಷ ಮಕ್ಕಳಿಗೆ ಉಚಿತ ಬೈಸಿಕಲ್ ಒದಗಿಸಲು 140 ಕೋಟಿ ಅನುದಾನ.
- 37 ಐಟಿಐ ಗಳನ್ನು ಮೇಲ್ದರ್ಜೆಗೇರಿಸಲು 100 ಕೋಟಿ ರೂ.
- 9 ತಾಲ್ಲೂಕುಗಳಲ್ಲಿ ಐಟಿಐ ಸಂಸ್ಥೆಗಳನ್ನು ಸ್ಥಾಪಿಸಲು 17 ಕೋಟಿ ರೂ. ಅನುದಾನ.

- ಉನ್ನತ ವ್ಯಾಸಂಗಕ್ಕೆ ಸಾಲ ಪಡೆಯುವ ವಿದ್ಯಾರ್ಥಿಗಳಿಗೆ ಶೇ.6 ರ ಬಡ್ಡಿ ಸಹಾಯಧನ.
- ಪರಿಶಿಷ್ಟ ಜಾತಿ, ವರ್ಗ ಹಾಗೂ ಹಿಂದುಳಿದ ವರ್ಗಗಳ ಹಾಸ್ಟೆಲ್ ವಿದ್ಯಾರ್ಥಿಗಳ ಊಟ ಮತ್ತು ವಸತಿ ವೆಚ್ಚ 450 ರೂ.ಗಳಿಂದ 650 ಕ್ಕೆ ಏರಿಕೆ.
- ಶಿಕ್ಷಣದ ಗುಣಮಟ್ಟ ಸುಧಾರಿಸಲು 'ಕರ್ನಾಟಕ ಜ್ಞಾನ ಮತ್ತು ಉನ್ನತ ಶಿಕ್ಷಣ ಆಯೋಗ' ರಚನೆ.
- ಬೆಂಗಳೂರಿನಲ್ಲಿ ಸಂಸ್ಕೃತ ವಿಶ್ವವಿದ್ಯಾನಿಲಯ ಸ್ಥಾಪನೆಗೆ 2 ಕೋಟಿ ರೂ. ನೆರವು.
- ಬಾಗಲಕೋಟೆ ಮತ್ತು ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾನಿಲಯ ಸ್ಥಾಪನೆಗೆ ಕ್ರಮ.
- ಹುಬ್ಬಳ್ಳಿಯ ಕಿಮ್ಸ್ ಸಂಸ್ಥೆಯ ಅಭಿವೃದ್ಧಿಗೆ 36 ಕೋಟಿ ರೂ. ಅನುದಾನ.
- ರಾಜ್ಯದಲ್ಲಿ ಖಾಸಗಿ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಪ್ರೋತ್ಸಾಹ.

ಆರೋಗ್ಯ :

- ಖಾಸಗಿ ಸಹಭಾಗಿತ್ವದಲ್ಲಿ ರಾಜ್ಯಾದ್ಯಂತ ಬಡವರಿಗೆ ತುರ್ತು ಚಿಕಿತ್ಸೆ ಒದಗಿಸಲು ಸಂಚಾರಿ ಚಿಕಿತ್ಸಾ ಘಟಕ ಮತ್ತು ಕರೆ ಕೇಂದ್ರ ಸ್ಥಾಪಿಸಲು **"ಆರೋಗ್ಯ ಕವಚ"** ಯೋಜನೆ. ಇದಕ್ಕೆ 10 ಕೋಟಿ ರೂ. ಹಂಚಿಕೆ.
- ಸಾರ್ವಜನಿಕ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಹೆರಿಗೆ ಸೌಲಭ್ಯಕ್ಕೆ **'ತಾಯಿಭಾಗ್ಯ'** ಯೋಜನೆ. ಇದಕ್ಕಾಗಿ 30 ಕೋಟಿ ರೂ. ಹಂಚಿಕೆ.

ಸಮಾಜ ಕಲ್ಯಾಣ :

- ವೃದ್ಧರಿಗೆ, ವಿಧವೆಯರಿಗೆ ಮತ್ತು ವಿಕಲ ಚೇತನರಿಗೆ ನೀಡುತ್ತಿರುವ ಮಾಸಿಕ ವೇತನವನ್ನು ಸುಲಭವಾಗಿ ದೊರಕಿಸಲು ಸ್ಮಾರ್ಟ್‌ಕಾರ್ಡ್ ಮೂಲಕ ವಿತರಣೆ.
- ಕೊರಗ ಜನಾಂಗ ಅಭಿವೃದ್ಧಿಗೆ ವಿಶೇಷ ಯೋಜನೆ.
- ಕ್ಷತ್ರಿಯ, ಉಪ್ಪಾರ, ಸವಿತಾ, ಮಡಿವಾಳ, ದೇವಾಂಗ, ಕುಂಬಾರ, ಕಂಬಾರ ಇತ್ಯಾದಿ ಸಂಘ ಸಂಸ್ಥೆಗಳಿಗೆ ಸಹಾಯ ಧನ.
- ಅಲ್ಪಸಂಖ್ಯಾತರಿಗಾಗಿ ಶಾದಿಮಹಲ್‌ಗಳ ನಿರ್ಮಾಣಕ್ಕೆ 15 ಕೋಟಿ ರೂ. ಅನುದಾನ.

ಮಹಿಳಾ ಕಲ್ಯಾಣ :

- 'ಭಾಗ್ಯಲಕ್ಷ್ಮಿ' ಯೋಜನೆಯ ಮೊತ್ತವನ್ನು 1 ಲಕ್ಷ ರೂ.ಗಳಿಗೆ ಏರಿಕೆ, 266 ಕೋಟಿ ರೂ.ಗಳ ಹೆಚ್ಚಿನ ಅನುದಾನ.
- ಸ್ತ್ರೀ ಶಕ್ತಿ ಗುಂಪುಗಳಿಗೆ ಶೇ.6 ರ ಬಡ್ಡಿ ಸಹಾಯಧನ.

ಅಂಗವಿಕಲರು :

- ಶೇ.75 ರಷ್ಟು ಅಂಗವೈಕಲ್ಯ ಅನುಭವಿಸುತ್ತಿರುವ ಅಂಗವಿಕಲರಿಗೆ 1 ಸಾವಿರ ರೂ. ಮಾಸಾಶನ.

ಹಿರಿಯ ನಾಗರಿಕರು :

- 65 ವರ್ಷ ಮೇಲ್ಪಟ್ಟ ಹಿರಿಯರಿಗೆ ಬಸ್ ಪ್ರಯಾಣ ದರದಲ್ಲಿ ಶೇ.25 ರ ರಿಯಾಯ್ತಿ.

ಬಾಲ ವಿಕಾಸ :

- ಮಕ್ಕಳ ಸರ್ವಾಂಗೀಣ ವ್ಯಕ್ತಿತ್ವ ವಿಕಾಸಕ್ಕೆ ರಾಜ್ಯ ಮಟ್ಟದಲ್ಲಿ 'ಬಾಲ ವಿಕಾಸ ಅಕಾಡೆಮಿ' ಸ್ಥಾಪನೆ.

ವಸತಿ :

- ಇನ್ನು ಮುಂದೆ ಆಶ್ರಯ ಯೋಜನೆಯಡಿ ನಿರ್ಮಾಣ ವೆಚ್ಚ ಪ್ರತಿ ಮನೆಗೆ 40 ಸಾವಿರ ರೂ. ನಿಗದಿ.

ಬೆಂಗಳೂರು ನಗರಾಭಿವೃದ್ಧಿ :

- ಬೆಂಗಳೂರು ಮೂಲಭೂತ ಸೌಕರ್ಯ ಅಭಿವೃದ್ಧಿಗೆ 1,800 ಕೋಟಿ ರೂ.
- ಬಿಡಿಎ ವತಿಯಿಂದ 60,000 ನಿವೇಶನಗಳಿರುವ ನಾಡಪ್ರಭು ಕೆಂಪೇಗೌಡ ಬಡಾವಣೆ 2610 ಕೋಟಿ ರೂ. ಖರ್ಚಿನಲ್ಲಿ ನಿರ್ಮಾಣ.
- ಬೆಂಗಳೂರಿನ ಹೊರ ವರ್ತುಲ ರಸ್ತೆಯಲ್ಲಿ ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸಲು, ಹತ್ತು ಮೇಲು ರಸ್ತೆ ಮತ್ತು ಅಂಡರ್‌ಪಾಸ್‌ಗಳನ್ನು 350 ಕೋಟಿ ರೂ. ವೆಚ್ಚದಲ್ಲಿ ಬಿಡಿಎ ನಿರ್ಮಿಸಲಿದೆ.
- ಪೆರಿಫೆರಲ್ ವರ್ತುಲ ರಸ್ತೆಯನ್ನು ಖಾಸಗಿ ಸಹಭಾಗಿತ್ವದಲ್ಲಿ ಒಟ್ಟು 3000 ಕೋಟಿ ರೂ. ವೆಚ್ಚದಲ್ಲಿ ಬಿಡಿಎ ಅಭಿವೃದ್ಧಿಗೊಳಿಸಲಿದೆ.
- ಬೆಂಗಳೂರು ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೈಸ್ಪೀಡ್ ರೈಲು ಯೋಜನೆ ಅನುಷ್ಠಾನ.
- ಮೆಟ್ರೋ ರೈಲಿಗೆ ಈ ವರ್ಷ 700 ಕೋಟಿ ರೂ. ಅನುದಾನ. 2 ನೇ ಹಂತದ ಯೋಜನೆ ತಯಾರಿಗೆ ಕ್ರಮ.
- ಬೆಂಗಳೂರಿನಲ್ಲಿ 40 ಸ್ಥಳಗಳಲ್ಲಿ ಖಾಸಗಿ ಸಾರ್ವಜನಿಕ ಸಹಭಾಗಿತ್ವದಲ್ಲಿ ಬಹುಮಹಡಿ ವಾಹನ ನಿಲುಗಡೆ ಸೌಲಭ್ಯ.

ಮೂಲಭೂತ ಸೌಕರ್ಯಗಳು :

- ಏಳು ನಗರಸಭೆಗಳ ಅಭಿವೃದ್ಧಿಗೆ 700 ಕೋಟಿ ರೂ. ವಿಶೇಷ ಅಭಿವೃದ್ಧಿ ಯೋಜನೆ. ಈ ವರ್ಷ ತಲಾ 50 ಕೋಟಿ ರೂ.ನಂತೆ 350 ಕೋಟಿ ರೂ. ಅನುದಾನ. ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಗುಲ್ಬರ್ಗಾ, ದಾವಣಗೆರೆ, ಬಳ್ಳಾರಿ, ಮೈಸೂರು ಮತ್ತು ಮಂಗಳೂರು ನಗರಗಳಿಗೆ ಪ್ರಯೋಜನ.
- ಹುಬ್ಬಳ್ಳಿ-ಧಾರವಾಡ ನಗರಗಳಿಗೆ ಕುಡಿಯುವ ನೀರು ಪೂರೈಸಲು 136 ಕೋಟಿ ರೂ. ನೆರವು.
- ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಕಾರವಾರ ಬಂದರು ಅಭಿವೃದ್ಧಿಗೆ ಕ್ರಮ.
- ಮಲ್ಪೆ ಮೀನುಗಾರಿಕಾ ಬಂದರು ಅಭಿವೃದ್ಧಿಗೆ 12 ಕೋಟಿ ರೂ.
- ಗ್ರಾಮೀಣ ಪ್ರದೇಶದ ಸಾರಿಗೆ ಸೌಕರ್ಯ ಉತ್ತಮ ಪಡಿಸಲು, ವಾಯುವ್ಯ ವಲಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 50 ಕೋಟಿ ರೂ.ಗಳ ನೆರವು.
- ಕರ್ನಾಟಕ ಮ್ಯಾರಿಟೈಮ್ ಮಂಡಳಿ ಸ್ಥಾಪನೆ.
- ಈ ವರ್ಷದಲ್ಲಿ 1000 ಮೆಗಾವ್ಯಾಟ್ ಹೆಚ್ಚುವರಿ ವಿದ್ಯುತ್ ಉತ್ಪಾದನೆ.
- ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ವಿಮಾನಯಾನ ಸೌಲಭ್ಯ. ಈಗಾಗಲೇ ವಾಯುಸಂಪರ್ಕ ಸೌಲಭ್ಯ ಹೊಂದಿರುವ ಹಾಗೂ ಹೊಂದುತ್ತಿರುವ 12 ಜಿಲ್ಲೆಗಳ ಜೊತೆಗೆ ಇನ್ನೂ 10 ಜಿಲ್ಲೆಗಳಲ್ಲಿ ತಲಾ 4 ಕೋಟಿ ರೂ.ನಂತೆ 40 ಕೋಟಿ ರೂ. ವೆಚ್ಚದಲ್ಲಿ ವಿಮಾನ ಇಳಿದಾಣಗಳ ನಿರ್ಮಾಣ.
- ಹುಬ್ಬಳ್ಳಿ ನಗರದಲ್ಲಿ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಾಪಿಸಲು 700 ಎಕರೆ ಮತ್ತು ಬೆಳಗಾವಿ ವಿಮಾನ ನಿಲ್ದಾಣ ಅಭಿವೃದ್ಧಿ ಪಡಿಸಲು 370 ಎಕರೆ ಭೂ ಸ್ವಾಧೀನ.

ರೈಲ್ವೆ :

- ಶಿವಮೊಗ್ಗ - ತಾಳಗುಪ್ಪ ರೈಲು ಮಾರ್ಗ ಗೇಜ್ ಪರಿವರ್ತನೆಗೆ 100 ಕೋಟಿ ರೂ.
- ಬೀದರ್ - ಗುಲ್ಬರ್ಗಾ ಹೊಸ ರೈಲ್ವೆ ಮಾರ್ಗ ನಿರ್ಮಾಣಕ್ಕೆ 20 ಕೋಟಿ ರೂ.
- ಸೊಲ್ಲಾಪುರ - ಬಾಗಲಕೋಟೆ - ಗದಗ ರೈಲು ಮಾರ್ಗ ಗೇಜ್ ಪರಿವರ್ತನೆಗೆ 137 ಕೋಟಿ ರೂ.
- ಬೆಂಗಳೂರು - ರಾಮನಗರ ರೈಲ್ವೆ ಜೋಡಿಮಾರ್ಗಕ್ಕೆ 30 ಕೋಟಿ ರೂ.

ವಾಣಿಜ್ಯ ಮತ್ತು ಕೈಗಾರಿಕೆ :

- ಸಿದ್ಧ ಉಡುಪು ಕೇಂದ್ರಿತ ಹೊಸ ಜವಳಿ ನೀತಿ ರೂಪಿಸುವುದು.
- ರಾಜ್ಯದ ಉದ್ದಗಲಕ್ಕೂ ಕೈಗಾರಿಕಾಭಿವೃದ್ಧಿಗೆ ಸುವರ್ಣ ಕರ್ನಾಟಕ ಅಭಿವೃದ್ಧಿ ಕಾರಿಡಾರ್ ಯೋಜನೆ. ಈ ಸಂಬಂಧ ಯೋಜನಾ ವರದಿ ಸಿದ್ಧಪಡಿಸಲು 10 ಕೋಟಿ ರೂ. ನಿಗದಿ.

ಉದ್ದೇಶಿತ ಕಾರಿಡಾರ್‌ಗಳು :

1) ಬೀದರ್ - ಬೆಂಗಳೂರು ವಯಾ ಚಿತ್ರದುರ್ಗ

2) ತುಮಕೂರು - ಹೊನ್ನಾವರ ವಯಾ ಶಿವಮೊಗ್ಗ

3) ಚಿತ್ರದುರ್ಗ - ಮಂಗಳೂರು ವಯಾ ಉಡುಪಿ

4) ಬೆಂಗಳೂರು - ಬೆಳಗಾವಿ ವಯಾ ಹುಬ್ಬಳ್ಳಿ

- ಹೊಸ ಕೈಗಾರಿಕಾ ನೀತಿ ರೂಪಿಸಲು ಕ್ರಮ.
- 2009 ರ ಜನವರಿಯಲ್ಲಿ "ಸಮೃದ್ಧ ಕರ್ನಾಟಕ" ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ ಆಯೋಜಿಸಲಾಗುವುದು.
- ಕೈಗಾರಿಕಾಭಿವೃದ್ಧಿಗಾಗಿ "ವಿಷನ್ ಗ್ರೂಪ್" ನೇಮಕ.
- ರಾಜ್ಯದಲ್ಲಿನ ನೈಸರ್ಗಿಕ ಸಂಪನ್ಮೂಲ ಆಧಾರದ ಮೇಲೆ ಉಕ್ಕು ವಲಯ, ಸಿಮೆಂಟ್ ವಲಯ, ಜವಳಿ ವಲಯಗಳನ್ನು ಅಭಿವೃದ್ಧಿ ಪಡಿಸಲು ಸೂಕ್ತ ಕ್ರಮಗಳ ಅನುಷ್ಠಾನ.

ಉದ್ಯೋಗ :

- ಮೊಟ್ಟ ಮೊದಲ ಬಾರಿಗೆ ರಾಜ್ಯದಲ್ಲಿ ಕೌಶಲ್ಯ ಆಯೋಗ ರಚನೆ.
- ಐದು ವರ್ಷಗಳಲ್ಲಿ 10 ಲಕ್ಷ ಮಂದಿಗೆ ಉದ್ಯೋಗ ಕಲ್ಪಿಸಲು ಕೌಶಲ್ಯ ತರಬೇತಿ. ಈ ವರ್ಷ ಒಂದು ಲಕ್ಷ ಉದ್ಯೋಗ ಸೃಜನೆ.

ಕಂದಾಯ :

- ಕಂದಾಯ ಇಲಾಖೆಯಲ್ಲಿ 25 ಲಕ್ಷ ಪೋಡಿ ಪ್ರಕರಣಗಳ ವಿಲೇವಾರಿಗೆ ತತ್ಕಾಲ್ ಯೋಜನೆ.
- ಮುಜರಾಯಿ ಮತ್ತು ವಕ್ಫ್ ಇಲಾಖೆಗಳಲ್ಲಿನ ಆಸ್ತಿಗಳ ವಾಸ್ತವಿಕ ಸ್ಥಿತಿ-ಗತಿಗಳ ಸಮೀಕ್ಷೆಗೆ ಮತ್ತು ಅವುಗಳ ಸಮರ್ಪಕ ಬಳಕೆಗೆ ಒಂದು ಸಮಿತಿ ರಚನೆ.
- ಬಸವಕಲ್ಯಾಣ ಅಭಿವೃದ್ದಿಗೆ 30 ಕೋಟಿ ರೂ.

- ಕಾಗಿನೆಲೆ ಕ್ಷೇತ್ರದ ಅಭಿವೃದ್ಧಿಗೆ 15 ಕೋಟಿ ರೂ.
- ಬಂಜಾರ ಸಮುದಾಯ ಅಭಿವೃದ್ಧಿಗೆ 25 ಕೋಟಿ ರೂ.
- ರಾಜ್ಯದಲ್ಲಿನ ಸರ್ಕಾರಿ ಭೂ ಪ್ರದೇಶಗಳ ಸಮಗ್ರ ಸಂರಕ್ಷಣೆ ಮತ್ತು ನಿರ್ವಹಣೆಗೆ ಪ್ರತ್ಯೇಕ ಪ್ರಾಧಿಕಾರದ ರಚನೆ.

ಕನ್ನಡ ಮತ್ತು ಸಂಸ್ಕೃತಿ :

- ಡಾ|| ರಾಜಕುಮಾರ್ ಸ್ಮಾರಕ ನಿರ್ಮಾಣಕ್ಕೆ 5 ಕೋಟಿ ರೂ.
- ಪ್ರಾದೇಶಿಕ ಮಟ್ಟದಲ್ಲಿ ನಾಲ್ಕು ಸುವರ್ಣ ಕರ್ನಾಟಕ ಭವನಗಳ ಸ್ಥಾಪನೆಗೆ 5 ಕೋಟಿ ರೂ.ನೆರವು.
- ಬೆಳಗಾವಿಯಲ್ಲಿ ಡಿಸೆಂಬರ್‌ನಲ್ಲಿ ನಡೆಸಲು ಉದ್ದೇಶಿಸಿರುವ ವಿಶ್ವಕನ್ನಡ ಸಮ್ಮೇಳನಕ್ಕೆ 25 ಕೋಟಿ ರೂ. ನೆರವು.
- ಬೆಳಗಾವಿಯಲ್ಲಿ ಸುವರ್ಣ ವಿಧಾನಸೌಧ ನಿರ್ಮಾಣಕ್ಕೆ ಚಾಲನೆ ಮತ್ತು ಶಾಸನಸಭಾ ಅಧಿವೇಶನಕ್ಕೆ ಸಿದ್ಧತೆ.
- ಅನಿವಾಸಿ ಕನ್ನಡಿಗರ ವಿಶೇಷ ಘಟಕ (ಎನ್‌ಆರ್‌ಐ ಸೆಲ್) ಸ್ಥಾಪನೆ.
- ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಸಂಶೋಧನಾ ಕೇಂದ್ರಕ್ಕೆ 1 ಕೋಟಿ ರೂ. ನೆರವು.
- ಶಿವಯೋಗಿ ಶಿಶುನಾಳ ಷರೀಫರ ಗದ್ದುಗೆ ಅಭಿವೃದ್ಧಿಗೆ 1 ಕೋಟಿ ರೂ.
- ಬೆಳಗಾವಿ ಜಿಲ್ಲೆಯ ಸಂಗೊಳ್ಳಿ ರಾಯಣ್ಣ ಸ್ಮಾರಕ ಅಭಿವೃದ್ಧಿಗೆ 1 ಕೋಟಿ ರೂ.
- ಕನಕದಾಸರ ಜನ್ಮಸ್ಥಳ ಹಾವೇರಿ ಜಿಲ್ಲೆ ಬಾಡ ಗ್ರಾಮಾಭಿವೃದ್ಧಿಗೆ 1 ಕೋಟಿ ರೂ.
- ಗುಲ್ಬರ್ಗಾ ಜಿಲ್ಲೆ ಮರ್ತೂರಿನಲ್ಲಿ ವಿಜ್ಞಾನೇಶ್ವರ ಉದ್ಯಾನವನ ಮತ್ತು ರಂಗಮಂದಿರ ಅಭಿವೃದ್ಧಿಗೆ 1 ಕೋಟಿ ರೂ.
- ಮೈಸೂರಿನಲ್ಲಿ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಕೇಂದ್ರ ಪ್ರಾರಂಭಿಸಲು 5 ಕೋಟಿ ರೂ.
- ಬೀದರ್‌ನಲ್ಲಿ ಗುರ್-ತಾ-ಗದ್ದಿ 300 ನೇ ಸಂಸ್ಮರಣಾ ಉತ್ಸವಕ್ಕೆ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ 25 ಕೋಟಿ ರೂ.

ದಸರಾ :

- ಮೈಸೂರು ದಸರಾ ಹಬ್ಬವನ್ನು ನಾಡಹಬ್ಬವಾಗಿ ವಿಜೃಂಭಣೆಯಿಂದ ಆಚರಿಸಲು 10 ಕೋಟಿ ರೂ. ನೆರವು ನೀಡಲಾಗುವುದು.

ಅರಣ್ಯ ಮತ್ತು ಪರಿಸರ :

- ಪಶ್ಚಿಮ ಘಟ್ಟಗಳ ಸಂರಕ್ಷಣೆಗೆ ವಿಶೇಷ ಕಾರ್ಯಪಡೆ (ಟಾಸ್ಕ್‌ಫೋರ್ಸ್)
- ಪ್ರಾಯೋಗಿಕವಾಗಿ ಹಲವು ಕಡೆ "ಸಮೃದ್ಧ ಹಸಿರು ಗ್ರಾಮ ಯೋಜನೆ".
- ರಾಜ್ಯದಲ್ಲಿ ಶ್ರೀಗಂಧದ ಮರಗಳನ್ನು ಹೆಚ್ಚು ಬೆಳೆಸಲು ನೂತನ ಯೋಜನೆ.

ಸರ್ಕಾರಿ ನೌಕರರು :

- ರಾಜ್ಯ ಸರ್ಕಾರಿ ನೌಕರರ ನಿವೃತ್ತಿ ವಯಸ್ಸು 58 ರಿಂದ 60 ಕ್ಕೆ ಹೆಚ್ಚಳ.

ಆಡಳಿತ ಸುಧಾರಣೆ :

- ರಾಜ್ಯ ಮಟ್ಟದಲ್ಲಿ ಹಾಗೂ ಬೆಂಗಳೂರು ಮತ್ತು ಇತರ ಏಳು ಪ್ರಮುಖ ನಗರಗಳಲ್ಲಿ ಸರ್ವಾಂಗೀಣ ಅಭಿವೃದ್ಧಿ ಬಗ್ಗೆ ಚಿಂತನೆ ಹಾಗೂ ನಿರಂತರ ಪರಿಶೀಲನೆ ನಡೆಸಲು ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಉನ್ನತ ಸಮಿತಿಗಳನ್ನು ರಚಿಸಲು ನಿರ್ಧಾರ.

ಮಾಹಿತಿ ಹೆದ್ದಾರಿ :

- ವಿಧಾನಸೌಧದೊಂದಿಗೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಕಛೇರಿಗಳ ಸಂಪರ್ಕವೇರ್ಪಡಿಸುವ "ಮಾಹಿತಿ ಹೆದ್ದಾರಿ" ಈ ವರ್ಷ ಪೂರ್ಣ.

ಕೃಷಿ ಅಭಿವೃದ್ಧಿಗೆ ಹೊಸ ಅಧ್ಯಾಯ

ಬಾಳಿ ನಮ್ಮೊಮ್ಮೀ, ನಾಗರಿಕತೆ ಸಿರಿ

ಮಣ್ಣುಣಿ ನೇಗಿಲನಾಶ್ರಯದಿ ;

ಒಕ್ಕಲುತನದ ಬಗ್ಗೆ ರಾಷ್ಟ್ರಕವಿ ಕುವೆಂಪು ಅವರ ಕವನದ ಸಾಲುಗಳು ಅರ್ಥಗರ್ಭಿತವಾಗಿವೆ.

ಕೃಷಿ ಮತ್ತು ತೋಟಗಾರಿಕೆ

21. ಇತ್ತೀಚಿನ ವರ್ಷಗಳಲ್ಲಿ ರಾಜ್ಯದ ಕೃಷಿ ಕ್ಷೇತ್ರದ ಬೆಳವಣಿಗೆ ಕುಂಠಿತವಾಗಿರುವುದು ಗಂಭೀರ ಪರಿಣಾಮಗಳಿಗೆ ಎಡೆ ಮಾಡಿಕೊಟ್ಟಿದೆ. ಇದು ರಾಜ್ಯದ ಆರ್ಥಿಕ ಬೆಳವಣಿಗೆಯನ್ನು ಮಂದಗೊಳಿಸುವುದಷ್ಟೇ ಅಲ್ಲದೆ ರೈತರಲ್ಲಿ ವ್ಯಾಪಕವಾಗಿ ಹತಾಶೆಯ ಮನೋಭಾವನೆಯನ್ನು ಮೂಡಿಸಿದೆ. ರಾಜ್ಯದಲ್ಲಿನ ರೈತರು ಸಹಕಾರಿ ಸಂಘ ಸಂಸ್ಥೆಗಳಿಂದ ಪಡೆದಿರುವ ಸಾಲವನ್ನು ಮನ್ನಾ ಮಾಡುವ ಮೂಲಕ ರೈತರಿಗೆ ಗಣನೀಯ ಪ್ರಮಾಣದ ಪರಿಹಾರವನ್ನು ಕಳೆದ ವರ್ಷ ಒದಗಿಸಲಾಗಿತ್ತು. ಈ ಸಂಬಂಧ ಸರ್ಕಾರವು 2006-07 ಮತ್ತು 2007-08ನೇ ಸಾಲಿನಲ್ಲಿ ಸಹಕಾರಿ ಸಂಸ್ಥೆಗಳಿಗೆ ಒಟ್ಟಾರೆ 1750 ಕೋಟಿ ರೂ.ಗಳನ್ನು ಪರಿಹಾರವಾಗಿ ವಿತರಿಸಿತ್ತು. ಇದರ ಜೊತೆಗೆ ಪ್ರಧಾನ ಮಂತ್ರಿಗಳ ಪ್ಯಾಕೇಜ್ ಯೋಜನೆಯಡಿ ರಾಜ್ಯದ ಆರು ಜಿಲ್ಲೆಗಳಲ್ಲಿನ ರೈತರಿಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ರಾಜ್ಯದ ಪಾಲಿನ ಬಡ್ಡಿ ಮನ್ನಾ ಪರಿಹಾರಕ್ಕಾಗಿ 335 ಕೋಟಿ ರೂ.ಗಳನ್ನು ಸಹ ವಿತರಿಸಲಾಗಿದೆ.

22. ಸಣ್ಣ ಮತ್ತು ಅತಿಸಣ್ಣ ರೈತರು ವಾಣಿಜ್ಯ ಬ್ಯಾಂಕುಗಳಿಂದ ಪಡೆದಿರುವ ಸಾಲವನ್ನು ಪೂರ್ಣವಾಗಿ ಹಾಗೂ ಇತರೆ ರೈತರು ಪಡೆದಿರುವ ಸಾಲಗಳನ್ನು ಭಾಗಶಃ ಮನ್ನಾ ಮಾಡಲು ಕೇಂದ್ರ ಸರ್ಕಾರವು ಕೈಗೊಂಡಿರುವ ಕ್ರಮಗಳು ಸಂತಸ ತರುವ ವಿಷಯವಾಗಿದೆ. ಈಗಾಗಲೇ ರಾಜ್ಯ ಸರ್ಕಾರದ ಸಾಲ ಮನ್ನಾ ಯೋಜನೆಗೆ ಹಲವಾರು ರೈತರು ಒಳಪಟ್ಟಿರುವುದರಿಂದ ಈ ಹಣವು ಕೇಂದ್ರ ಸರ್ಕಾರಕ್ಕೆ ಉಳಿತಾಯವಾಗಿದೆ. ಆದ್ದರಿಂದ ರಾಜ್ಯ ಸರ್ಕಾರವು ಸಾಲ ಮನ್ನಾ ಯೋಜನೆಗಾಗಿ ಭರಿಸಿರುವ 1750 ಕೋಟಿ ರೂ.ಗಳನ್ನು ಕೇಂದ್ರವು ರಾಜ್ಯಕ್ಕೆ ತುಂಬಿಸಿಕೊಡಬೇಕೆಂದು ಮನವಿ ಸಲ್ಲಿಸಲಾಗಿದೆ. ಕೇಂದ್ರವು ಈ ವಿಷಯದಲ್ಲಿ ಅಗತ್ಯ ನಿರ್ಣಯವನ್ನು ತೆಗೆದುಕೊಳ್ಳಲು ವಿವರವಾದ ಮನವಿ ಪತ್ರವನ್ನು ಸದ್ಯದಲ್ಲಿಯೇ ಸಲ್ಲಿಸಲಾಗುವುದು.

23. ಸಾಲಮನ್ನಾ ಯೋಜನೆಗಳಿಂದ ರೈತರಿಗೆ ಸ್ವಲ್ಪಮಟ್ಟಿನ ಪ್ರಯೋಜನ ಆಗಿದೆಯಾದರೂ ಈ ವರ್ಷದ ಮುಂಗಾರು ಮಳೆಯ ವೈಫಲ್ಯದಿಂದಾಗಿ ರಾಜ್ಯದ ರೈತರು ಕಂಗೆಟ್ಟಿದ್ದಾರೆ. ವಿಶೇಷವಾಗಿ ಮಳೆಯನ್ನೇ ನಂಬಿರುವ ಖುಷ್ಕಿ ಪ್ರದೇಶಗಳ ರೈತರು ತೀವ್ರವಾದ ಸಂಕಷ್ಟಕ್ಕೆ ಒಳಗಾಗುವ ಸಂದರ್ಭ ಉಂಟಾಗಿದೆ. ಈಗಾಗಲೇ ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳನ್ನು ರೈತರು ಕಳೆದುಕೊಂಡಿರುತ್ತಾರೆ. ಖುಷ್ಕಿ ಬೇಸಾಯವನ್ನು ಅವಲಂಬಿಸಿರುವ ಸುಮಾರು 50 ಲಕ್ಷ ರೈತರು ಮುಂಬರುವ ಮಳೆ ನಿರೀಕ್ಷೆಯಲ್ಲಿ ಬೀಜ, ಗೊಬ್ಬರ ಮುಂತಾದವುಗಳನ್ನು ಮತ್ತೆ ಹೊಂದಿಸಿಕೊಳ್ಳಬೇಕಾಗಿದೆ. ಆದ್ದರಿಂದ ಈ ವರ್ಷಕ್ಕೆ ಅನ್ವಯಿಸಿದಂತೆ ಸಂಪೂರ್ಣವಾಗಿ ಖುಷ್ಕಿ ಬೇಸಾಯವನ್ನು ಅವಲಂಬಿಸಿರುವ ಪ್ರತಿ ಸಣ್ಣ ಮತ್ತು ಅತಿ ಸಣ್ಣ ರೈತ ಕುಟುಂಬಕ್ಕೆ 1000 ರೂ.ಗಳಂತೆ ಸಹಾಯಧನವನ್ನು ಅವರ ಬ್ಯಾಂಕ್ ಖಾತೆಗಳ ಮೂಲಕ ವಿತರಿಸಲು ನಿರ್ಧರಿಸಲಾಗಿದೆ. ಈ ಉದ್ದೇಶಕ್ಕಾಗಿ 500 ಕೋಟಿ ರೂ.ಗಳು ವೆಚ್ಚವಾಗುವ ನಿರೀಕ್ಷೆ ಇದೆ. ಬಡ ರೈತರ ಕಣ್ಣೀರನ್ನು ಒರೆಸಲು ಇದು ಅಲ್ಪ ಕಾಣಿಕೆಯಾದರೂ ಇದೊಂದು ಪ್ರಾಮಾಣಿಕ ಪ್ರಯತ್ನವೆಂಬುದನ್ನು ನಾಡಿನ ಜನತೆಯಲ್ಲಿ ವಿನಮ್ರತೆಯಿಂದ ಅರಿಕೆ ಮಾಡಿಕೊಳ್ಳುತ್ತೇನೆ.

24. ಕೃಷಿ, ಪಶುಸಂಗೋಪನೆ, ತೋಟಗಾರಿಕೆ, ರೇಷ್ಮೆ ಮತ್ತು ಪೂರಕ ಚಟುವಟಿಕೆಗಳ ಕಾರ್ಯಕ್ರಮಗಳನ್ನು ನಿರ್ದೇಶಿಸಲು ಮತ್ತು ಸಮನ್ವಯಗೊಳಿಸಲು ರಾಷ್ಟ್ರದಲ್ಲಿಯೇ ಪ್ರಪ್ರಥಮ ಬಾರಿಗೆ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಪ್ರತ್ಯೇಕವಾಗಿ **"ಕರ್ನಾಟಕ ಕೃಷಿ ಮಿಷನ್"** ಸ್ಥಾಪಿಸಲಾಗುತ್ತಿದೆ. (Karnataka Agriculture Mission) ಮಿಷನ್‌ನ ಉನ್ನತ ಸಮಿತಿಯಲ್ಲಿ ಕೃಷಿ ವಿಜ್ಞಾನಿಗಳು, ಪ್ರಗತಿಪರ ರೈತರು ಮತ್ತು ಸ್ವಯಂಸೇವಾ ಸಂಸ್ಥೆಗಳ ಜೊತೆಗೆ ಸಚಿವರುಗಳು ಹಾಗೂ ಸಂಬಂಧಿಸಿದ ಇಲಾಖೆಗಳ ಹಿರಿಯ ಅಧಿಕಾರಿಗಳು ಇರುತ್ತಾರೆ.

25. ರಾಜ್ಯದಲ್ಲಿ ರೈತರು ಎದುರಿಸುತ್ತಿರುವ ಸಮಸ್ಯೆಗಳ ವಿರುದ್ಧ ಹೋರಾಡಲು ಮತ್ತು ರೈತರ ರಕ್ಷಣೆಗೆ ಅತೀ ಹೆಚ್ಚಿನ ಆದ್ಯತೆ ನೀಡುವಲ್ಲಿ ಸರ್ಕಾರವು ತಳೆದಿರುವ ದೃಢ ಸಂಕಲ್ಪಕ್ಕೆ ಈ "ಕೃಷಿ ಮಿಷನ್"ನ ಸ್ಥಾಪನೆಯೇ ಸಾಕ್ಷಿಯಾಗಿದೆ.

26. ರಾಜ್ಯದ 2008-09 ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಕೃಷಿಗೆ ಸಂಬಂಧಿಸಿದ ಕಾರ್ಯಕ್ರಮಗಳಿಗಾಗಿ ಒಟ್ಟಾರೆ 1974 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ. ಈ ಅನುದಾನವು

2007-08 ನೇ ಸಾಲಿನಲ್ಲಿ ಒದಗಿಸಲಾಗಿದ್ದ ಅನುದಾನಕ್ಕಿಂತ ಶೇ.64 ರಷ್ಟು ಹೆಚ್ಚಿಗೆ ಇರುತ್ತದೆ. ಇದರಲ್ಲಿ ಕೃಷಿ ಹಾಗೂ ತೋಟಗಾರಿಕೆಗೆ 1603 ಕೋಟಿ ರೂ.ಗಳನ್ನು, ಪಶು ಸಂಗೋಪನೆ, ಮೀನುಗಾರಿಕೆ ಮತ್ತು ಹೈನುಗಾರಿಕೆ ಅಭಿವೃದ್ಧಿಗೆ 319 ಕೋಟಿ ರೂ.ಗಳನ್ನು ಮತ್ತು ರೇಷ್ಮೆ ಚಟುವಟಿಕೆಗಳಿಗೆ 52 ಕೋಟಿ ರೂ.ಗಳನ್ನು ನೀಡಿದ್ದು ಇದು ಕೃಷಿ ವಲಯದ ಉತ್ಪಾದಕತೆ ಹೆಚ್ಚಿಸಲು ನೆರವಾಗಲಿದೆ.

27. ಇದಲ್ಲದೆ ನೀರಾವರಿ ಸೌಲಭ್ಯಗಳಿಗಾಗಿ ರೈತರು ಬಳಸುವ ವಿದ್ಯುತ್ ಸಹಾಯಾನುಧನವಾಗಿ 2050 ಕೋಟಿ ರೂ.ಗಳನ್ನು ಹಾಗೂ ಒಣಬೇಸಾಯವನ್ನು ಅವಲಂಬಿಸಿರುವ ರೈತರಿಗೆ ನೀಡಲಿರುವ ಸಹಾಯಾನುಧನವಾದ 500 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ನೀರಾವರಿಗೆ ಯೋಜನೆಯಲ್ಲಿ ಒದಗಿಸಿರುವ 3468 ಕೋಟಿ ರೂ.ಗಳನ್ನು ಸೇರಿಸಿದಲ್ಲಿ, ಕೃಷಿ ಸಂಬಂಧಿತ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಮೀಸಲಾದ ಅನುದಾನವು ಸುಮಾರು 8,000 ಕೋಟಿ ರೂ. ಆಗುತ್ತದೆ. ಈ ಆಯವ್ಯಯದಲ್ಲಿ ಕೃಷಿ ವಲಯಕ್ಕಾಗಿ ಅಳವಡಿಸಲು ರೂಪಿಸಿರುವ ಕೆಲವು ನಿಗದಿತ ಪ್ರಸ್ತಾವಗಳು ಇಂತಿವೆ.

- ರೈತರ ನೀರಾವರಿ ಪಂಪ್‌ಸೆಂಟ್‌ಗಳಿಗೆ ಉಚಿತ ವಿದ್ಯುತ್ ಒದಗಿಸಲಾಗುತ್ತಿದ್ದು, 15 ಲಕ್ಷ ರೈತರು ಇದರ ಅನುಕೂಲ ಪಡೆಯಲಿದ್ದಾರೆ. ವಿದ್ಯುತ್ ಸರಬರಾಜು ನಿಗಮಗಳ ವೆಚ್ಚದಲ್ಲಿ ಪ್ರತಿ ಪಂಪ್‌ಸೆಟ್‌ಗೂ ಮೀಟರ್ ಅಳವಡಿಸಲು ನಿರ್ಧರಿಸಲಾಗಿದ್ದು, ಇದರಿಂದ ರೈತರು ಬಳಕೆ ಮಾಡುತ್ತಿರುವ ಒಟ್ಟಾರೆ ವಿದ್ಯುಚ್ಛಕ್ತಿಯ ಪ್ರಮಾಣವನ್ನು ತಿಳಿಯಲು ಸಾಧ್ಯವಾಗುತ್ತದೆ. ಈ ಸಂಬಂಧ ಸರ್ಕಾರವು ಈಗಾಗಲೇ ವಿದ್ಯುತ್ ಸಂಸ್ಥೆಗಳಿಗೆ ನೀಡುತ್ತಿರುವ 1550 ಕೋಟಿ ರೂ.ಗಳಲ್ಲದೇ ಹೆಚ್ಚುವರಿಯಾಗಿ ಪ್ರತಿವರ್ಷ 750 ಕೋಟಿ ರೂ.ಗಳ ಹೆಚ್ಚುವರಿ ಸಹಾಯಧನವನ್ನು ನೀಡಬೇಕಾಗಿದೆ. ಈ ವರ್ಷ ಉಳಿದ ಎಂಟು ತಿಂಗಳಿಗೆ ಈ ಹೆಚ್ಚುವರಿ ಸಹಾಯಧನದ ಮೊತ್ತವು 500 ಕೋಟಿ ರೂ. ಆಗುವುದೆಂದು ಅಂದಾಜಿಸಲಾಗಿದೆ.

- ಕನಿಷ್ಠ ಒಂದು ಸಾವಿರ ಗ್ರಾಮಗಳಲ್ಲಿ ಸಾವಯುವ ಗೊಬ್ಬರ ತಯಾರಿಕೆ ಮತ್ತು ಸಾವಯವ ಬೇಸಾಯ ಪದ್ಧತಿಯ ಅಳವಡಿಕೆಯನ್ನು ಉತ್ತೇಜಿಸುವ ಬೃಹತ್ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು. ಸಾವಯವ ಕೃಷಿಯನ್ನು ಅವಲಂಬಿಸುವ ಪ್ರತಿ ಕುಟುಂಬಕ್ಕೆ ಸಾವಯವ ಗೊಬ್ಬರ ಗುಂಡಿಗಳನ್ನು ನಿರ್ಮಿಸಲು 2000 ರೂ.ಗಳ ಸಹಾಯಧನವನ್ನು ನೀಡಲಾಗುವುದು. ಸಾವಯವ ಕೃಷಿ ಆಂದೋಲನ ಯೋಜನೆಗೆ 100 ಕೋಟಿ ರೂ.ಗಳ ಹಂಚಿಕೆಯನ್ನು ಒದಗಿಸಲಾಗುವುದು.

- ಬೆಲೆ ಕುಸಿತದ ಸಂದರ್ಭದಲ್ಲಿ ಮಾರುಕಟ್ಟೆ ಮಧ್ಯಪ್ರವೇಶದ ಮೂಲಕ ಆಯ್ದ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಒದಗಿಸಲು ರಾಜ್ಯಮಟ್ಟದಲ್ಲಿ 500 ಕೋಟಿ ರೂ.ಗಳ ಆವರ್ತ ನಿಧಿಯನ್ನು ಸ್ಥಾಪಿಸಲಾಗುವುದು.

- ಸಹಕಾರಿ ಸಂಸ್ಥೆಗಳ ಮೂಲಕ ಶೇ.3 ರ ಬಡ್ಡಿ ದರದಲ್ಲಿ ರೈತರು ಕೃಷಿ ಸಾಲ ಪಡೆಯಲು ಅನುಕೂಲವಾಗುವಂತೆ ಕೃಷಿ ಸಾಲದ ಮೇಲಿನ ಬಡ್ಡಿ ಸಹಾಯಧನದ ಮೊತ್ತವನ್ನು ಹೆಚ್ಚಿಸಲಾಗುವುದು. ಇದೇ ಸವಲತ್ತನ್ನು ಮೀನುಗಾರರು ಮತ್ತು ನೇಕಾರರಿಗೂ ವಿಸ್ತರಿಸಲಾಗುವುದು.
- ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಬೆಳೆಗಳಿಗೆ ಹನಿ ನೀರಾವರಿ ಅಳವಡಿಸಲು ರೈತರಿಗೆ ಶೇ.75 ರಷ್ಟು ಸಹಾಯಧನವನ್ನು ಒಂದೇ ಸಂಸ್ಥೆಯಡಿಯಲ್ಲಿ ವಿತರಿಸಲು ವ್ಯವಸ್ಥೆ ಮಾಡಲಾಗುವುದು. ಈ ಯೋಜನೆಯಡಿ ರೈತರಿಗೆ 175 ಕೋಟಿ ರೂ.ಗಳ ಸಹಾಯಧನವನ್ನು ವಿತರಿಸಲಾಗುವುದು.
- ಸೈಬರ್ ಕೇಂದ್ರದ ಮಾದರಿಯಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಮಾಹಿತಿ ಕಿಯೋಸ್ಕ್‌ಗಳನ್ನು ಸ್ಥಾಪಿಸಿ ರೈತರಿಗೆ ಮಾರುಕಟ್ಟೆಯ ತಾಜಾ ಮಾಹಿತಿಯನ್ನು ಒದಗಿಸಲಾಗುವುದು.
- ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಉತ್ಪನ್ನಗಳನ್ನು ಸಂಗ್ರಹಿಸುವ ಗೋದಾಮುಗಳು, ಶೈತ್ಯಾಗಾರಗಳು ಮತ್ತು ಕೃಷಿ ಆಹಾರ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವವರಿಗೆ ಶೇ.25 ರಷ್ಟು ಸಹಾಯಧನವನ್ನು ಸರ್ಕಾರವು ಒದಗಿಸಲಿದೆ.
- ರಾಯಚೂರಿನಲ್ಲಿ ಐದು ಕೋಟಿ ರೂ.ಗಳ ವೆಚ್ಚದಲ್ಲಿ ಕೃಷಿ ವಿಶ್ವವಿದ್ಯಾಲಯವನ್ನು ಈ ವರ್ಷ ಆರಂಭಿಸಲಾಗುವುದು.
- ಬಾಗಲಕೋಟೆಯಲ್ಲಿ ತೋಟಗಾರಿಕೆಗೆ ಆದ್ಯತೆ ನೀಡುವ ಕೃಷಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗುವುದು.

ಪಶುಸಂಗೋಪನೆ ಮತ್ತು ಹೈನುಗಾರಿಕೆ ಅಭಿವೃದ್ಧಿ

28. ನಮ್ಮ ರಾಜ್ಯದ ಗ್ರಾಮೀಣ ಪ್ರದೇಶದ ಕುಟುಂಬಗಳಲ್ಲಿ ವಾಸಿಸುತ್ತಿರುವ ಬಹುಪಾಲು ಜನರು ಸಣ್ಣ ಮತ್ತು ಅತೀ ಸಣ್ಣ ರೈತರು ಹಾಗೂ ಕೃಷಿ ಕಾರ್ಮಿಕರಾಗಿರುತ್ತಾರೆ. ಪಶು ಸಾಕಾಣಿಕೆ ಇವರ ಉಪಕಸುಬಾಗಿರುತ್ತದೆ. ಹೈನುಗಾರಿಕೆ ಸಹಕಾರಿ ಸಂಘಗಳಿಗೆ ಹಾಲು ಮಾರಾಟ ಮಾಡುವ ಮೂಲಕ ಇವರು ಪೂರಕ ಆದಾಯ ಗಳಿಸಿಕೊಳ್ಳುತ್ತಾರೆ.

29. ಗ್ರಾಮೀಣ ಕುಟುಂಬಗಳಿಗೆ ಅದರಲ್ಲೂ ವಿಶೇಷವಾಗಿ ಗ್ರಾಮೀಣ ಮಹಿಳೆಯರಿಗೆ ಹೈನುಗಾರಿಕೆಯನ್ನು ಹೆಚ್ಚು ಲಾಭದಾಯಕವಾಗುವಂತೆ ಮಾಡಲು ಸರ್ಕಾರವು ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ರೈತರು ಮಾರಾಟ ಮಾಡುವ ಪ್ರತಿ ಲೀಟರ್ ಹಾಲಿಗೆ ಎರಡು ರೂ. ಗಳ ಪ್ರೋತ್ಸಾಹಧನ ನೀಡಲು ಉದ್ದೇಶಿಸಿದೆ. ಈ ಪ್ರೋತ್ಸಾಹಧನವನ್ನು ಗ್ರಾಮಮಟ್ಟದ ಹೈನುಗಾರಿಕೆ ಸಹಕಾರ ಸಂಘಗಳಿಗೆ ನೇರವಾಗಿ ವಿತರಿಸಲಾಗುವುದು.

30. ಕುರಿ ಮತ್ತು ಮೇಕೆ ಸಾಕಾಣಿಕೆಯನ್ನು ವೈಜ್ಞಾನಿಕವಾಗಿ ಕೈಗೊಳ್ಳಲು ರೈತರಿಗೆ ತಾಂತ್ರಿಕ ನೆರವು ಹಾಗೂ ಪಶು ಔಷಧಿಗಳನ್ನು ವಿತರಿಸಲು 10 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಪ್ರತಿ ತಾಲ್ಲೂಕಿನಲ್ಲಿ ವಿದ್ಯಾವಂತ ಯುವಕರು ಹಾಗೂ ಸಣ್ಣ ರೈತರ ಮೂಲಕ ಕನಿಷ್ಟ 50 ಕೋಳಿ ಫಾರಂಗಳನ್ನು ಸ್ಥಾಪಿಸಲು ನೆರವು ನೀಡಲಾಗುವುದು.

31. ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ತಲಾ 50 ಕೋಟಿ ರೂ.ಗಳ ವೆಚ್ಚದಲ್ಲಿ ಪಶುವೈದ್ಯಕೀಯ ಕಾಲೇಜುಗಳನ್ನು ಅಭಿವೃದ್ಧಿಪಡಿಸಲಾಗುವುದು. ಈ ಉದ್ದೇಶಕ್ಕಾಗಿ ಪ್ರಸಕ್ತ ವರ್ಷ 28 ಕೋಟಿ ರೂ.ಗಳನ್ನು ಒದಗಿಸಲಾಗುವುದು.

32. ಮೈಸೂರಿನ ಪಿಂಜರಾಪೋಲ್ ಮತ್ತು ಇತರೆ ಕಡೆ ಇರುವ ಗೋಶಾಲೆಗಳಿಗೆ ಬೆಂಬಲ ನೀಡಲಾಗುವುದು.

ಮೀನುಗಾರಿಕೆ

33. ಕಳೆದ ವರ್ಷ ಸರ್ಕಾರ ಜಾರಿಗೆ ತಂದಿದ್ದ ಸಾಲಮನ್ನಾ ಯೋಜನೆಯ ಲಾಭವನ್ನು ಮಹಿಳೆಯರನ್ನೊಳಗೊಂಡಂತೆ ಸಾವಿರಾರು ಮೀನುಗಾರರು ಪಡೆದಿದ್ದರು. ಸಹಕಾರಿ ಸಂಘಗಳ ಮೂಲಕ ವಾರ್ಷಿಕವಾಗಿ ಶೇ.3 ರ ಬಡ್ಡಿ ದರದ ಸಾಲ ಯೋಜನೆಯು ಮೀನುಗಾರರಿಗೂ ಅನ್ವಯಿಸುತ್ತದೆ.

34. ಪ್ರಸಕ್ತ ವರ್ಷ 12 ಕೋಟಿ ರೂ.ಗಳ ವೆಚ್ಚದಲ್ಲಿ ಮಲ್ಪೆ ಮೀನುಗಾರಿಕೆ ಬಂದರನ್ನು ಅಭಿವೃದ್ಧಿಪಡಿಸಲಾಗುವುದು. ಇದರ ಜೊತೆಗೆ ಐದು ಕೋಟಿ ರೂ.ಗಳ ವೆಚ್ಚದಲ್ಲಿ ಇತರೆ ಮೀನುಗಾರಿಕೆ ಬಂದರುಗಳಲ್ಲಿ ಸಹ ಹೂಳು ತೆಗೆಯಲಾಗುವುದು.

35. ಮತ್ಸ್ಯ ಆಶ್ರಯ ಯೋಜನೆಯಡಿ 2500 ಮೀನುಗಾರರಿಗೆ ವಸತಿ ಸೌಲಭ್ಯ ಕಲ್ಪಿಸಲಾಗುವುದು. ಇದಕ್ಕಾಗಿ 5 ಕೋಟಿ ರೂ.ಗಳ ಅನುದಾನವನ್ನು ಈ ವರ್ಷದಲ್ಲಿ ಒದಗಿಸಲಾಗುವುದು. ಹಾಗೆಯೇ, ಮೀನುಗಾರರ ಬಳಕೆಗಾಗಿ ನೀಡಲಾಗುತ್ತಿದ್ದ ಮಾರಾಟ ತೆರಿಗೆ ರಹಿತ ಡೀಸೆಲ್ ಪ್ರಮಾಣವನ್ನು ಹಾಲಿ 70,000 ಕಿಲೋ ಲೀಟರ್‌ಗಳಿಂದ 75,000 ಕಿಲೋ ಲೀಟರ್‌ಗಳಿಗೆ ಹೆಚ್ಚಿಸಲಾಗುವುದು.

36. ಮೀನುಗಾರಿಕೆ ರಸ್ತೆಗಳ ಅಭಿವೃದ್ಧಿಗಾಗಿ 10 ಕೋಟಿ ರೂ.ಗಳನ್ನು ಒದಗಿಸಿದೆ. ಮೀನುಗಳನ್ನು ಶೇಖರಿಸಲು ಬಳಸುವ ಮಂಜುಗಡ್ಡೆಗಳಿಗೆ ಸಂಪೂರ್ಣವಾಗಿ ವ್ಯಾಟ್‌ನಿಂದ ವಿನಾಯ್ತಿ ನೀಡಲಾಗುವುದು.

ರೇಷ್ಮೆ ಸಾಕಾಣಿಕೆ

37. ರೇಷ್ಮೆ ಸಾಕಾಣಿಕೆ ಕರ್ನಾಟಕದ ಸಣ್ಣ ರೈತರುಗಳ ಮತ್ತೊಂದು ಪ್ರಮುಖವಾದ ಪಾರಂಪಾರಿಕ ಉದ್ಯೋಗ. ಬೈವೋಲ್ಟೀನ್ ರೇಷ್ಮೆ ಕೃಷಿಗಾಗಿ ಸರ್ಕಾರ ಬೆಂಬಲವನ್ನು ವಿಸ್ತರಿಸಲಿದ್ದು, ಸಂಪೂರ್ಣ ಸ್ವಯಂಚಾಲಿತ ಮತ್ತು ಅರೆ ಸ್ವಯಂಚಾಲಿತ ನೂಲು ಘಟಕಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು.

38. ರಾಜ್ಯದಲ್ಲಿ ನೂಲು ತೆಗೆಯಲು ಚರಕಗಳನ್ನು ಬಳಕೆ ಮಾಡಲಾಗುತ್ತಿದೆ. ಇದರ ಬದಲು ಯಾಂತ್ರೀಕೃತ ಚರಕಗಳ ನೆರವಿನಿಂದ ರೇಷ್ಮೆನೂಲು ಉತ್ಪಾದಿಸಲು ನೂಲು ಘಟಕಗಳ ವೆಚ್ಚದ ಶೇ.25 ರಷ್ಟನ್ನು ಸಹಾಯಧನವಾಗಿ ನೀಡಲಾಗುವುದು.

ಸಹಕಾರ

39. ಕೃಷಿ ಸಹಕಾರಿ ಸಾಲಪದ್ಧತಿಯನ್ನು ಪುನರ್‌ರಚಿಸುವ ಬಗ್ಗೆ ವೈದ್ಯನಾಥನ್ ಸಮಿತಿಯು ನೀಡಿರುವ ಶಿಫಾರಸ್ಸನ್ನು ರಾಜ್ಯಸರ್ಕಾರವು ಈಗಾಗಲೇ ಒಪ್ಪಿಕೊಂಡಿದೆ. ಈ ವರ್ಷ ಅನುಷ್ಠಾನಗೊಳ್ಳಲಿರುವ ಈ ಯೋಜನೆಯಿಂದಾಗಿ, ಆರ್ಥಿಕವಾಗಿ ನಷ್ಟದಲ್ಲಿರುವ ಹಲವಾರು ಸಹಕಾರ ಸಂಘಗಳು ಮತ್ತು ಬ್ಯಾಂಕುಗಳು ಪುನಶ್ಚೇತನಗೊಳ್ಳಲಿವೆ.

ಗ್ರಾಮೀಣಾಭಿವೃದ್ಧಿ

40. ಗ್ರಾಮೀಣ ಅಭಿವೃದ್ಧಿಗೆ ಹಂಚಿಕೆಯಾಗಿರುವ ಅನುದಾನವು ಕಳೆದ ಸಾಲಿನ 3064 ಕೋಟಿ ರೂ.ಗಳಿಂದ ಈ ಸಾಲಿನಲ್ಲಿ 3359 ಕೋಟಿ ರೂ.ಗಳಿಗೆ ಏರಿಕೆಯಾಗಿದೆ. ಇದಲ್ಲದೇ, ಸುಮಾರು 1100 ಕೋಟಿ ರೂ.ಗಳ ವೆಚ್ಚದಲ್ಲಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳನ್ನು ಕೈಗೊಳ್ಳಲು ಅಗತ್ಯವಿರುವ ಶೇ.10 ರಷ್ಟು ರಾಜ್ಯದ ಪಾಲಿನ ಅನುದಾನವನ್ನು ಒದಗಿಸಲಾಗುವುದು. ಈ ಬೃಹತ್ ಕಾರ್ಯಕ್ರಮವನ್ನು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗುವಂತೆ ಪ್ರತಿ ಗ್ರಾಮ ಪಂಚಾಯತಿಗೆ ಒಬ್ಬ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯನ್ನು ನೇಮಿಸಲು ತೀರ್ಮಾನಿಸಿದೆ. ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಅನುದಾನವನ್ನು ಬಳಸಿ ಕೃಷಿ, ತೋಟಗಾರಿಕೆ, ಸಣ್ಣ ನೀರಾವರಿ, ಜಲಾನಯನ ಪ್ರದೇಶಾಭಿವೃದ್ಧಿ, ಮತ್ತು ಅರಣ್ಯ ಅಭಿವೃದ್ಧಿ ಮುಂತಾದ ಕಾಮಗಾರಿಗಳನ್ನು ಎಲ್ಲ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಕೈಗೊಳ್ಳಲು ವ್ಯವಸ್ಥೆ ಮಾಡಲಾಗುವುದು.

41. ಗ್ರಾಮೀಣ ರಸ್ತೆಗಳ ಅಭಿವೃದ್ಧಿಗಾಗಿ ಈ ಬಾರಿ ಒಟ್ಟು 685 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದ್ದು ಪ್ರತಿ ತಾಲ್ಲೂಕಿನ ಗ್ರಾಮೀಣ ರಸ್ತೆಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಲು ಮತ್ತು ಅಭಿವೃದ್ಧಿಪಡಿಸಲು ಇದರಿಂದ ಸಾಧ್ಯವಾಗುವುದು. ಇದರಲ್ಲಿ 200 ಕೋಟಿ ರೂ.ಗಳ ಅನುದಾನವು ಹಿಂದುಳಿದಿರುವ ತಾಲ್ಲೂಕುಗಳಲ್ಲಿನ ರಸ್ತೆಗಳ ಅಭಿವೃದ್ಧಿಗಾಗಿ ಒದಗಿಸಲಾಗುವುದು. ಇದಲ್ಲದೆ, ಪ್ರಧಾನಮಂತ್ರಿ ಗ್ರಾಮಸಡಕ್ ಯೋಜನೆಯಲ್ಲಿ ಸುಮಾರು 800 ಕೋಟಿ ರೂ.ಗಳ ವೆಚ್ಚದಲ್ಲಿ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುವುದು.

42. ಗ್ರಾಮೀಣ ಕುಡಿಯುವ ನೀರು ಪೂರೈಕೆ ಯೋಜನೆಯಡಿಯಲ್ಲಿ 879 ಕೋಟಿ ರೂ.ಗಳ ಅನುದಾನವನ್ನು ಒದಗಿಸಿದ್ದು ಹಲವಾರು ಗುಂಪುಗ್ರಾಮಗಳ ನೀರು ಸರಬರಾಜು ಯೋಜನೆಗಳ ನಿರ್ಮಾಣವನ್ನು ಈ ವರ್ಷ ಕೈಗೊಳ್ಳಲಾಗುವುದು. ಇದಲ್ಲದೆ, ರಾಜ್ಯದ ನೀರಾವರಿ ಜಲಾಶಯಗಳಿಂದ ನಗರ ಹಾಗೂ ಗ್ರಾಮಗಳಿಗೆ ಕೊಳವೆ ನೀರು ಸರಬರಾಜು ಮಾಡಲು ಪ್ರಾಯೋಗಿಕ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುವುದು.

43. ಹಲವಾರು ದಶಕಗಳಿಂದ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಸಣ್ಣ ನೀರಾವರಿ ಕೆರೆಗಳ ನೀರು ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಸಲು 50 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುವುದು.

44. ಹಳ್ಳಿಗಳ ಸಮಗ್ರ ಅಭಿವೃದ್ಧಿಯ ಉದ್ದೇಶದ **'ಸುವರ್ಣ ಗ್ರಾಮೋದಯ ಯೋಜನೆ'**ಯು 1,200 ಹಳ್ಳಿಗಳಲ್ಲಿ ಮುಂದುವರಿಯಲಿದೆ. ಇದಕ್ಕಾಗಿ ಆಯವ್ಯಯದಲ್ಲಿ 300 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

45. ಅಧಿಕಾರ ವಿಕೇಂದ್ರೀಕರಣದ ಭವ್ಯ ಪರಂಪರೆಯನ್ನು ಹೊಂದಿರುವ ಕರ್ನಾಟಕದಲ್ಲಿ 5628 ಗ್ರಾಮ ಪಂಚಾಯಿತಿಗಳಿಗೆ ನೀಡುತ್ತಿರುವ ಮುಕ್ತ ವಾರ್ಷಿಕ ಅನುದಾನದ ಮೊತ್ತವನ್ನು 5 ಲಕ್ಷ ರೂ. ಗಳಿಂದ 6ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿದೆ. ಗ್ರಾಮ ಪಂಚಾಯಿತಿಗಳನ್ನು ಬಲಪಡಿಸುವ ಉದ್ದೇಶದಿಂದ ಡಾ|| ನಂಜುಂಡಪ್ಪ ಸಮಿತಿಯು ಗುರುತಿಸಿರುವ ರಾಜ್ಯದ ಅತಿ ಹಿಂದುಳಿದ 39 ತಾಲ್ಲೂಕುಗಳಲ್ಲಿನ 1341 ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮ ಸ್ವರಾಜ್ ಯೋಜನೆಯನ್ನು ಜಾರಿಗೊಳಿಸಲು 160 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

46. ಗ್ರಾಮೀಣ ಪ್ರದೇಶದ ಜನರ ಆದಾಯ ಮಟ್ಟವನ್ನು ಹೆಚ್ಚುಮಾಡಲು ಹಾಲಿನಂತೆ, ಗೋಮೂತ್ರ ಮತ್ತು ಗೋ ಸಗಣಿಗೂ ಸಹ ಮೌಲ್ಯ ದೊರಕಿಸಲು **"ಮಹಾತ್ಮಾಗಾಂಧಿ ಗೋವು ಆಧಾರಿತ ಗ್ರಾಮೋದ್ಯೋಗ"**ವನ್ನು ಮೈಸೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಆರಂಭಿಸಲಾಗುವುದು.

47. ನಕ್ಸಲ್ ಪೀಡಿತ ಗ್ರಾಮಗಳ ಮೂಲ ಸೌಕರ್ಯ ಅಭಿವೃದ್ಧಿಗೆ ಈಗಾಗಲೇ ಯೋಜನೆಗಳಿದ್ದು ಈ ವರ್ಷದಿಂದ ಈ ಪ್ರದೇಶಗಳಲ್ಲಿ ಯುವಕ-ಯುವತಿಯರಿಗೆ ತರಬೇತಿ ಕಾರ್ಯಕ್ರಮ, ಉದ್ಯೋಗದ ಮಾಹಿತಿ ಕಾರ್ಯಕ್ರಮಗಳಂತಹ ಮಾನವ ಅಭಿವೃದ್ಧಿ ಯೋಜನೆಗೆ ಆದ್ಯತೆ ನೀಡಲು ಸರ್ಕಾರ ಉದ್ದೇಶಿಸಿದೆ.

ಜಲ ಸಂಪನ್ಮೂಲ

48. ಕೃಷ್ಣಾ, ಕಾವೇರಿ ಮತ್ತು ಗೋದಾವರಿ ಜಲಾನಯನ ಪ್ರದೇಶಗಳಲ್ಲಿ ಕೈಗೊಂಡಿರುವ ನೀರಾವರಿ ಯೋಜನೆಗಳನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸಲು ಸರ್ಕಾರ ಉದ್ದೇಶಿಸಿದೆ. ಪ್ರಸಕ್ತ ವರ್ಷದಲ್ಲಿ ಈ ಉದ್ದೇಶಕ್ಕಾಗಿ ರಾಜ್ಯ ನೀರಾವರಿ ನಿಗಮಗಳಿಗೆ 3394 ಕೋಟಿ ರೂ.ಗಳ ಅನುದಾನವನ್ನು ನೀಡಲಾಗಿದೆ. ಈ ಯೋಜನೆಗಳಡಿ ಸುಮಾರು 73,000 ಹೆಕ್ಟೇರ್ ಪ್ರದೇಶವನ್ನು ಹೊಸದಾಗಿ ನೀರಾವರಿ ವ್ಯಾಪ್ತಿಗೆ ತರಲಾಗುವುದು.

49. ಬರಪೀಡಿತ ಪ್ರದೇಶಗಳಾದ ಚಿತ್ರದುರ್ಗ, ತುಮಕೂರು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಭದ್ರಾ ಮೇಲ್ದಂಡೆ ಯೋಜನೆಯ ಮೂಲಕ ನೀರಾವರಿ ಸೌಲಭ್ಯ ಮತ್ತು ಕುಡಿಯುವ ನೀರನ್ನು ಒದಗಿಸಲಾಗುವುದು. ಭದ್ರಾ ಮೇಲ್ದಂಡೆ ಯೋಜನೆಗಳಿಗೆ ನೀರನ್ನು ಹರಿಸುವ ಸಲುವಾಗಿ ಪ್ರಸಕ್ತ ವರ್ಷದಲ್ಲಿ ಭದ್ರಾ ಕಾಲುವೆ ಆಧುನೀಕರಣ ಕಾಮಗಾರಿಯನ್ನು ತೀವ್ರಗೊಳಿಸಲಾಗುವುದು.

50. ಕಳಸಾ ಬಂಡೂರಿ ನಾಲೆಗಳನ್ನು ನಿರ್ಮಿಸಿ ಆ ಮೂಲಕ ಹುಬ್ಬಳ್ಳಿ-ಧಾರವಾಡಕ್ಕೆ ಕುಡಿಯುವ ನೀರು ಪೂರೈಕೆ ಯೋಜನೆಯ ಕಾಮಗಾರಿಗೆ ಹೆಚ್ಚು ಒತ್ತು ನೀಡಲಾಗುವುದು.

51. ಕುಡಿಯುವ ನೀರಿನ ತೀವ್ರ ಕೊರತೆಯನ್ನು ಎದುರಿಸುತ್ತಿರುವ ಕೋಲಾರ ಜಿಲ್ಲೆಯಲ್ಲಿ 50 ಕೋಟಿ ರೂ.ಗಳ ವೆಚ್ಚದಲ್ಲಿ ಯರಗೋಳ್ ಕುಡಿಯುವ ನೀರು ಯೋಜನೆಗೆ ಈ ವರ್ಷ ಚಾಲನೆ ನೀಡಲಾಗುವುದು.

52. ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಡಿ ನಿರ್ಮಿಸಿರುವ ನಾಲೆಗಳಲ್ಲಿನ ನೀರಿನ ಸಮರ್ಥ ಬಳಕೆಗಾಗಿ ನೀರು ಬಳಕೆದಾರರ ಸಂಘಗಳನ್ನು ಸ್ಥಾಪಿಸಿ ಅದರ ನಿರ್ವಹಣೆಯ ಜವಾಬ್ದಾರಿಯನ್ನು ಅವರಿಗೇ ವಹಿಸಲಾಗುವುದು.

53. ಜಲ ಸಂವರ್ಧನೆ ಯೋಜನೆಯನ್ನು ಹಂತ ಹಂತವಾಗಿ ಎಲ್ಲಾ ಜಿಲ್ಲೆಗಳಲ್ಲಿರುವ ಕೆರೆಗಳಿಗೆ ವಿಸ್ತರಿಸಲಾಗುವುದು. ರಾಜ್ಯಾದ್ಯಂತ ಇರುವ ಸಣ್ಣ ನೀರಾವರಿ ಕೆರೆಗಳನ್ನು ಮರು ಭರ್ತಿ ಹಾಗೂ ಪುನಶ್ಚೇತನಕ್ಕಾಗಿ ಏಕರೂಪದ ಮಾದರಿಯೊಂದನ್ನು ಅಳವಡಿಸಿಕೊಳ್ಳಲಾಗುವುದು. ಭಾರೀ ನೀರಾವರಿ ಕೆರೆಗಳಿಂದ ನೀರನ್ನು ಹರಿಸಿ ಸಣ್ಣ ನೀರಾವರಿ ಕೆರೆಗಳನ್ನು ತುಂಬಿಸುವಂಥ ಪ್ರಾಯೋಗಿಕ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುವುದು.

54. ಅಂತರ್‌ಜಲ ಬಳಕೆ ಕುರಿತಂತೆ ಕಾನೂನನ್ನು ರೂಪಿಸಿ ರಾಜ್ಯದಾದ್ಯಂತ ಜಾರಿಗೊಳಿಸಲಾಗುವುದು. ನೀರು ಬಳಕೆ ಪರಿಣತಿ ಹೆಚ್ಚಿಸುವುದು ಮತ್ತು ಸಂಪನ್ಮೂಲ ನಿರ್ವಹಣೆ ಮತ್ತು ನೀತಿ ನಿರೂಪಣೆಗೆ ವಿಶೇಷ ಪ್ರಾಧಿಕಾರ ರಚಿಸಲಾಗುವುದು.

55. ಕರಾವಳಿ ಪ್ರದೇಶದಲ್ಲಿ ಪಶ್ಚಿಮಕ್ಕೆ ಹರಿಯುವ ನದಿಗಳ ನೀರಿನ ಬಳಕೆಯನ್ನು ತಜ್ಞರಿಂದ ಅಧ್ಯಯನ ಮಾಡಿಸಲು 1 ಕೋಟಿ ರೂ. ಒದಗಿಸಲಾಗುವುದು.

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ

56. ಉತ್ತಮ ಗುಣಮಟ್ಟದ ಶಿಕ್ಷಣ ಒದಗಿಸುವುದು ನಮ್ಮ ಸರ್ಕಾರದ ಪ್ರಮುಖ ಆದ್ಯತೆಯಾಗಿದೆ. ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಮಾಪನ ಸಂಸ್ಥೆಯು ಇತ್ತೀಚೆಗೆ ಹೊರತಂದಿರುವ ವರದಿಗೆ ಅನುಸಾರವಾಗಿ ಸುಧಾರಿತ ಶಿಕ್ಷಣ ಕ್ರಮದ ಬಗ್ಗೆ ವ್ಯಾಪಕ ಅರಿವು ಮೂಡಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು. ಸರ್ವಶಿಕ್ಷಣ ಅಭಿಯಾನದ ಅಂದಾಜು ವೆಚ್ಚವನ್ನು ಶೇ. 37ರಷ್ಟು ಹೆಚ್ಚಿಸಲಾಗಿದ್ದು ಈ ವರ್ಷ ರಾಜ್ಯದ ಪಾಲನ್ನು ಒಳಗೊಂಡಂತೆ ಇದು 958 ಕೋಟಿ ರೂ.ಗಳಾಗಿದೆ. ಈ ಕಾರ್ಯಕ್ರಮ ಅನುಷ್ಠಾನದಲ್ಲಿ ನಾವು ತೋರಿಸಿರುವ ಉತ್ತಮ ಪ್ರಗತಿಯಿಂದಾಗಿ ಈ ಹೆಚ್ಚಳ ಸಾಧ್ಯವಾಗಿದೆ.

57. ವಿದ್ಯಾರ್ಥಿಗಳು ಶಾಲೆಗೆ ಸುಲಭವಾಗಿ ಹೋಗಲು ಅನುಕೂಲವಾಗುವಂತೆ ನಗರಪಾಲಿಕೆ ಪ್ರದೇಶಗಳನ್ನು ಹೊರತುಪಡಿಸಿ ಉಳಿದೆಲ್ಲ ಕಡೆ ಇರುವ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 8ನೇ ತರಗತಿಯ ವಿದ್ಯಾರ್ಥಿಗಳಿಗೆ ಉಚಿತವಾಗಿ ಬೈಸಿಕಲ್ ಒದಗಿಸಲಾಗುವುದು. ಇದಕ್ಕಾಗಿ 140 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ.

58. ಮಧ್ಯಾಹ್ನದ ಬಿಸಿಯೂಟ ಯೋಜನೆಯಡಿ ಅಡುಗೆ ತಯಾರಿಸುವ ವೆಚ್ಚ ಮತ್ತು ಸಿದ್ಧತಾ ಸಿಬ್ಬಂದಿಯ ಸಂಭಾವನೆಯನ್ನು ಹೆಚ್ಚಿಸಲಾಗಿದೆ. ಇದರಿಂದ ಶಾಲಾ ಮಕ್ಕಳಿಗೆ ಉತ್ತಮ ಬಿಸಿಯೂಟ ದೊರೆಯಲಿದೆ. ಇದಕ್ಕಾಗಿ 30 ಕೋಟಿ ರೂ.ಗಳ ಹೆಚ್ಚುವರಿ ಅನುದಾನವನ್ನು ಒದಗಿಸಲಾಗುವುದು. ಕಳೆದ ಸಾಲಿನಲ್ಲಿ ಪಂಚಸೌಲಭ್ಯ ಯೋಜನೆಯಡಿ ನಿಗದಿಪಡಿಸಿದ್ದ 8.6 ಕೋಟಿ ರೂ.ಗಳ ಅನುದಾನವನ್ನು ಪ್ರಸಕ್ತ ಸಾಲಿನಲ್ಲಿ 97 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ. ಈ ಅನುದಾನದಿಂದ ಶಾಲೆಗಳಲ್ಲಿನ ಮೂಲ ಸೌಕರ್ಯಗಳನ್ನು ಸುಧಾರಿಸಲಾಗುವುದು.

59. ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳಿಗೆ ಕೊಠಡಿಗಳನ್ನು ಹಾಗೂ ಹೊಸ ಕಟ್ಟಡಗಳನ್ನು ನಿರ್ಮಿಸಲು 153 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

60. ಈವರೆಗೆ 1992ಕ್ಕೆ ಮುನ್ನ ಪ್ರಾರಂಭಿಸಿದ್ದ ಖಾಸಗಿ ಶಾಲೆಗಳಿಗೆ ನೀಡಲಾಗುತ್ತಿದ್ದ ಸಹಾಯಾನುದಾನವನ್ನು ಈ ಸಾಲಿನಲ್ಲಿ 1993 ಮತ್ತು 1994 ರ ಅವಧಿಯಲ್ಲಿ ತೆರೆಯಲಾದ ಖಾಸಗಿ ಪ್ರೌಢಶಾಲೆಗಳಿಗೆ ಅರ್ಹತೆಯ ಆಧಾರದ ಮೇಲೆ ಸಹಾಯಾನುದಾನಕ್ಕೆ ಒಳಪಡಿಸಲಾಗುವುದು.

ಉನ್ನತ ಶಿಕ್ಷಣ

61. ಬಡಕುಟುಂಬದ ಹಿನ್ನೆಲೆಯ ವಿದ್ಯಾರ್ಥಿಗಳು ಉನ್ನತ ವೃತ್ತಿ ಶಿಕ್ಷಣ ಸೌಲಭ್ಯದಿಂದ ವಂಚಿತರಾಗುವುದನ್ನು ತಪ್ಪಿಸಲು ನನ್ನ ಸರ್ಕಾರವು ಯೋಜನೆಯೊಂದನ್ನು ಹಮ್ಮಿಕೊಳ್ಳಲಿದೆ. ಈ ಯೋಜನೆಯನ್ವಯ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ವೃತ್ತಿಶಿಕ್ಷಣ ಕೋರ್ಸ್‌ಗಳಿಗೆ ಸೇರಲು ಶೇ.6ರ ಬಡ್ಡಿದರದಲ್ಲಿ ಸಾಲ ಪಡೆಯಲು ಸರ್ಕಾರದಿಂದ ಸಹಾಯಧನ ಒದಗಿಸಲಾಗುವುದು.

62. ವಿವಿಧ ವಿಶ್ವವಿದ್ಯಾಲಯಗಳಿಗೆ ನೀಡುವ ಯೋಜನೆ ಬೆಂಬಲವನ್ನು 17ಕೋಟಿ ರೂ.ಗಳಿಂದ 38 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ. ಕಳೆದ ವರ್ಷ ಆರಂಭಿಸಲಾದ ಪಾಲಿಟೆಕ್ನಿಕ್ ಮತ್ತು ಎಂಜಿನಿಯರಿಂಗ್ ಕಾಲೇಜುಗಳಿಗೆ ಮೂಲಸೌಕರ್ಯಗಳನ್ನು ನಿರ್ಮಿಸಲು 100 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

63. ಇದು ಜ್ಞಾನಯುಗ. ಜ್ಞಾನವೇ ಶಕ್ತಿ. ಜ್ಞಾನಾಧಾರಿತ ಉದ್ಯೋಗ ಮತ್ತು ಉದ್ದಿಮೆಗಳಿಗೆ ಉತ್ತಮ ಭವಿಷ್ಯವಿದೆ. ನಮ್ಮ ಯುವಜನರಿಗೆ ಉನ್ನತ ಶಿಕ್ಷಣದಲ್ಲಿ ಜ್ಞಾನತೃಷೆ ಮೂಡಿಸಿ ಜ್ಞಾನಾರ್ಜನೆಯತ್ತ ಆಕರ್ಷಿಸಲು ಕಾರ್ಯತಂತ್ರ ರೂಪಿಸಬೇಕಾಗಿದೆ. ಅದಕ್ಕಾಗಿ ದೇಶದಲ್ಲಿಯೇ ಮೊದಲ ಬಾರಿಗೆ ರಾಜ್ಯ ಮಟ್ಟದಲ್ಲಿ **"ಕರ್ನಾಟಕ ಜ್ಞಾನ ಮತ್ತು ಉನ್ನತ ಶಿಕ್ಷಣ"** ಆಯೋಗವನ್ನು ರಚಿಸಲಾಗುವುದು.

64. ಬೆಂಗಳೂರಿನಲ್ಲಿರುವ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆ ಸಂಸ್ಥೆಯ ಅಭಿವೃದ್ಧಿಗೆ 2 ಕೋಟಿ ರೂ.ಗಳ ನೆರವು ನೀಡಲಾಗುವುದು. ಬೆಂಗಳೂರಿನಲ್ಲಿರುವ ಗೋಖಲೆ ಸಾರ್ವಜನಿಕ ಸಂಸ್ಥೆಗೆ 1 ಕೋಟಿ ರೂ.ಗಳ ನೆರವನ್ನು ಕೊಡಲಾಗುವುದು. ರಾಜ್ಯದಲ್ಲಿ ಸಂಸ್ಕೃತ ಭಾಷೆಯ ಶಿಕ್ಷಣವನ್ನು ಅಭಿವೃದ್ಧಿಪಡಿಸಲು

ಪ್ರತ್ಯೇಕ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು 2 ಕೋಟಿ ರೂ. ಒದಗಿಸಲಾಗಿದೆ. ರಾಜ್ಯದಲ್ಲಿ ಖಾಸಗಿ ವಿಶ್ವವಿದ್ಯಾಲಯ ಸ್ಥಾಪನೆಗೆ ಪ್ರೋತ್ಸಾಹ ನೀಡಲಾಗುವುದು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ

65. ರಾಜ್ಯಾದ್ಯಂತ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಸರ್ಕಾರಿ ಆಸ್ಪತ್ರೆಗಳ ಸೇವೆಯನ್ನು ಉತ್ತಮಪಡಿಸಲು ಉದ್ದೇಶಿಸಲಾಗಿದೆ. ಈ ನಿಟ್ಟಿನಲ್ಲಿ ರಾಜ್ಯದಲ್ಲಿ ಖಾಲಿ ಇರುವ ಸುಮಾರು 5000 ವೈದ್ಯರು, ದಾದಿಯರು ಮತ್ತು ಪೂರಕ ಆರೋಗ್ಯ ಸಿಬ್ಬಂದಿಗಳನ್ನು ನೇಮಕ ಮಾಡಲು ಕ್ರಮ ಕೈಗೊಳ್ಳಲಾಗುವುದು. ಈಗಾಗಲೇ ನಿರ್ಧರಿಸಿರುವಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು, ತಾಲ್ಲೂಕು ಆಸ್ಪತ್ರೆಗಳು ಮತ್ತು ಜಿಲ್ಲಾ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು ಈ ವರ್ಷ 87 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

66. ಈಗಾಗಲೇ ಜಾರಿಯಲ್ಲಿರುವ **'ಮಡಿಲು'** ಮತ್ತು **'ಪ್ರಸೂತಿ ಆರೈಕೆ'** ಮುಂತಾದ ಯೋಜನೆಗಳನ್ನು ಒಳಗೊಂಡಂತೆ **'ತಾಯಿ ಭಾಗ್ಯ'** ಯೋಜನೆಯನ್ನು ರೂಪಿಸಿ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಉತ್ತಮ ಹೆರಿಗೆ ಸೌಲಭ್ಯವನ್ನು ಒದಗಿಸಲು 30 ಕೋಟಿ ರೂ. ಅನುದಾನವನ್ನು ನೀಡಲಾಗುವುದು.

67. ಗ್ರಾಮೀಣ ಪ್ರದೇಶಗಳಲ್ಲಿ ತುರ್ತು ಚಿಕಿತ್ಸೆಗಾಗಿ ರೋಗಿಗಳನ್ನು ಕೊಂಡೊಯ್ಯಲು ಅನುಕೂಲವಾಗುವಂತೆ ಆಂಬುಲೆನ್ಸ್ ವ್ಯವಸ್ಥೆಯ ಜಾಲವೊಂದನ್ನು ರೂಪಿಸುವುದರಿಂದ ಸಹಸ್ರಾರು ಅಕಾಲಿಕ ಮರಣಗಳನ್ನು ತಡೆಯಲು ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ವೈಯರ್‌ಲೆಸ್ ಸಂಪರ್ಕಹೊಂದಿರುವ ಸುಸಜ್ಜಿತ ಆಂಬುಲೆನ್ಸ್ ವ್ಯವಸ್ಥೆಯನ್ನು ತಾಲ್ಲೂಕು ಮಟ್ಟದಲ್ಲಿ ನಿರ್ವಹಿಸಲು **'ಆರೋಗ್ಯ ಕವಚ'** ಎಂಬ ಹೊಸ ಯೋಜನೆಯನ್ನು ಪ್ರಾರಂಭಿಸಲು ಉದ್ದೇಶಿಸಿದೆ. ಈ ವರ್ಷ ಖಾಸಗಿ ಸಹಭಾಗಿತ್ವದೊಂದಿಗೆ ಇದನ್ನು ಪ್ರಾಯೋಗಿಕವಾಗಿ ಪ್ರಾರಂಭಿಸಲು 10 ಕೋಟಿ ರೂ.ಗಳ ಅನುದಾನವನ್ನು ಒದಗಿಸಿದೆ.

68. ಬೆಂಗಳೂರು ನಗರದ ಪೂರ್ವಭಾಗದ ಜನರ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಇಂದಿರಾನಗರದಲ್ಲಿ ಬಹುವಿಶೇಷ ಸಾರ್ವಜನಿಕ ಆಸ್ಪತ್ರೆಯನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ ಪ್ರಸಕ್ತ ವರ್ಷದಲ್ಲಿ 8 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

69. ಬೆಂಗಳೂರಿನಲ್ಲಿ ವಿಕ್ಟೋರಿಯಾ ಆಸ್ಪತ್ರೆ ಹಾಗೂ ಬೌರಿಂಗ್ ಆಸ್ಪತ್ರೆಯ ತುರ್ತು ಚಿಕಿತ್ಸೆ ವಾರ್ಡ್ ಹಾಗೂ ಕಟ್ಟಡ ನಿರ್ಮಾಣ ಮತ್ತು ನಿರ್ವಹಣೆಗೆ 25 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ.

70. ಕರ್ನಾಟಕದ ಉತ್ತರ ಭಾಗದಲ್ಲಿ ಔಷಧ ಪರೀಕ್ಷಾ ಸೌಲಭ್ಯವನ್ನು ಕಲ್ಪಿಸಲು ನಮ್ಮ ಸರ್ಕಾರವು ಉದ್ದೇಶಿಸಿದ್ದು, ಹುಬ್ಬಳ್ಳಿ ಮತ್ತು ಬಳ್ಳಾರಿಗಳಲ್ಲಿ ಔಷಧ ಪರೀಕ್ಷಾ ಪ್ರಯೋಗಾಲಯಗಳನ್ನು ಸ್ಥಾಪಿಸಲಿದೆ. ಇದಕ್ಕಾಗಿ ಪ್ರಸಕ್ತ ವರ್ಷದಲ್ಲಿ 5 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ವೈದ್ಯಕೀಯ ಶಿಕ್ಷಣ

71. ಮಾನ್ಯ ಸದಸ್ಯರಿಗೆ ತಿಳಿದಿರುವಂತೆ ನಮ್ಮ ರಾಜ್ಯದಲ್ಲಿ ಆರು ನೂತನ ಸರ್ಕಾರಿ ವೈದ್ಯಕೀಯ ಕಾಲೇಜುಗಳು ಆರಂಭಗೊಂಡಿವೆ. ಈ ನೂತನ ವೈದ್ಯಕೀಯ ಕಾಲೇಜುಗಳಿಗೆ ಕಟ್ಟಡ ಹಾಗೂ ಇನ್ನಿತರ ಮೂಲ ಸೌಕರ್ಯಗಳನ್ನು ಒದಗಿಸಲು 120 ಕೋಟಿ ರೂ.ಗಳನ್ನು ಒದಗಿಸಲಾಗುವುದು.

72. ಶಿವಮೊಗ್ಗ ನಗರದಲ್ಲಿ ನೂತನ ಆಯುರ್ವೇದ ಕಾಲೇಜು ಮತ್ತು ನೂರು ಹಾಸಿಗೆಗಳ ಸಾಮರ್ಥ್ಯದ ಆಯುರ್ವೇದ ಆಸ್ಪತ್ರೆಯನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

73. ಹುಬ್ಬಳ್ಳಿಯ ಪ್ರಖ್ಯಾತ 'ಕಿಮ್ಸ್' ಆಸ್ಪತ್ರೆಯ ಅಭಿವೃದ್ಧಿಗಾಗಿ 36.5 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಇದರಿಂದಾಗಿ ಉತ್ತರ ಕರ್ನಾಟಕದ ಬಡಜನರಿಗೆ ಬಹಳ ಅನುಕೂಲವಾಗಲಿದೆ ಎಂದು ಭಾವಿಸಿದ್ದೇನೆ.

ಸಮಾಜ ಕಲ್ಯಾಣ

74. ಪರಿಶಿಷ್ಟ ಜಾತಿ / ಪಂಗಡ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ 2007-08ನೇ ಸಾಲಿನಲ್ಲಿ 662 ಕೋಟಿ ರೂ.ಗಳ ಅನುದಾನ ನೀಡಲಾಗಿತ್ತು. 2008-09ನೇ ಸಾಲಿನಲ್ಲಿ ಈ ಅನುದಾನವು 925 ಕೋಟಿ ರೂ.ಗಳಿಗೆ ಏರಿಕೆಯಾಗಿದೆ. ಈ ಸಮುದಾಯಕ್ಕೆ ಸೇರಿದ ಮೆಟ್ರಿಕ್ ಪೂರ್ವ ವಸತಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ಭೋಜನ ವೆಚ್ಚವನ್ನು ಮಾಸಿಕ 450 ರೂ.ಗಳಿಂದ 600 ರೂ.ಗಳಿಗೆ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ 500ರೂ.ಗಳಿಂದ 650 ರೂ.ಗಳಿಗೆ ಹೆಚ್ಚಿಸಲಾಗಿದೆ.

75. ಗಂಗಾ ಕಲ್ಯಾಣ ಯೋಜನೆಗೆ 2008-09ನೇ ಸಾಲಿನಲ್ಲಿ 157 ಕೋಟಿ ರೂ.ಗಳ ಅನುದಾನವನ್ನು ನೀಡಲಾಗಿದೆ. ಕುಂಬಾರ, ಉಪ್ಪಾರ, ಸವಿತಾ, ಕ್ಷತ್ರಿಯ, ಮಡಿವಾಳ, ಕಂಬಾರ ಇತ್ಯಾದಿ ಅತೀ ಹಿಂದುಳಿದ ಸಮಾಜದ ಸಂಘ ಸಂಸ್ಥೆಗಳಿಗೆ ನೆರವು ನೀಡಲು 20 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು. ತಲಾ ಒಂದು ಕೋಟಿ ರೂ.ಗಳ ವೆಚ್ಚದಲ್ಲಿ ಐದು 'ವಾಲ್ಮೀಕಿ ಸಮುದಾಯ ಭವನ' ಗಳನ್ನು ನಿರ್ಮಿಸಲಾಗುವುದು.

76. ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ವಿಶೇಷ ಘಟಕ ಯೋಜನೆಗೆ 2831 ಕೋಟಿ ರೂ.ಗಳನ್ನು ಮತ್ತು ಗಿರಿಜನ ಉಪಯೋಜನೆಗೆ 1104 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ.

ಅಲ್ಪಸಂಖ್ಯಾತರ ಕಲ್ಯಾಣ

77. ನಮ್ಮ ಸರ್ಕಾರವು ಸಮಾಜದ ಎಲ್ಲಾ ಸಮುದಾಯಗಳಿಗೂ ಸಮಾನ ಆದ್ಯತೆ ನೀಡುತ್ತದೆ. ಈ ನಿಟ್ಟಿನಲ್ಲಿ 2008-09ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲು 2007-08 ರಲ್ಲಿದ್ದ 97 ಕೋಟಿ ರೂ.ಗಳಿಂದ 143 ಕೋಟಿ ರೂ.ಗಳಷ್ಟು ಅಂದರೆ ಸುಮಾರು ಶೇಕಡಾ 47 ರಷ್ಟು ಹೆಚ್ಚುವರಿ ಅನುದಾನವನ್ನು ನಿಗದಿ ಪಡಿಸಲಾಗಿದೆ. ಶಾದಿ ಮಹಲ್‌ಗಳ

ನಿರ್ಮಾಣಕ್ಕಾಗಿ 2007-08 ರಲ್ಲಿ 6.50 ಕೋಟಿ ರೂ.ಗಳನ್ನು ನೀಡಲಾಗಿತ್ತು. ಈ ಅನುದಾನವನ್ನು 2008-09 ರಲ್ಲಿ 15 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.

ಮಹಿಳೆ ಮತ್ತು ಮಕ್ಕಳ ಕಲ್ಯಾಣ

78. ಎರಡು ವರ್ಷಗಳ ಹಿಂದೆ ಜಾರಿಗೊಳಿಸಿದ್ದ **'ಭಾಗ್ಯಲಕ್ಷ್ಮಿ'** ಯೋಜನೆಗೆ ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಈ ಯೋಜನೆಯ ಫಲಾನುಭವಿಗಳಾಗಿರುವ ಸುಮಾರು ಎರಡು ಲಕ್ಷ ಹೆಣ್ಣು ಮಕ್ಕಳಿಗೆ ಬಾಂಡ್ ವಿತರಿಸಲು 266 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಸರ್ಕಾರವು ಈ ಯೋಜನೆಗೆ ನೀಡುತ್ತಿದ್ದ ಕೊಡುಗೆಯನ್ನು ದ್ವಿಗುಣಗೊಳಿಸಲಿದೆ. ಇದರಿಂದ ಈ ಯೋಜನೆಯ ಫಲಾನುಭವಿ ಹೆಣ್ಣುಮಗುವು ತನ್ನ 18ನೇ ವಯಸ್ಸಿಗೆ ಬಂದಾಗ ಒಂದು ಲಕ್ಷ ರೂ.ಗಳನ್ನು ಪಡೆಯಲಿದೆ.

79. ರಾಜ್ಯಾದ್ಯಂತ ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕಾಗಿ 2008-09ನೇ ಸಾಲಿನಲ್ಲಿ 50 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

80. ಸ್ತ್ರೀಶಕ್ತಿ ಗುಂಪುಗಳನ್ನು ಬಲಪಡಿಸಲು ತಾಲ್ಲೂಕು ಕೇಂದ್ರಗಳಲ್ಲಿ **'ಸ್ತ್ರೀಶಕ್ತಿ ಭವನ'**ಗಳ ನಿರ್ಮಾಣಕ್ಕೆ 7.5 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ. ಒಂದು ಲಕ್ಷ ರೂ.ಗಳ ಮಿತಿಯ ವರೆಗೆ ಸಾಲ ಪಡೆದ ಸ್ತ್ರೀಶಕ್ತಿ ಗುಂಪುಗಳಿಗೆ ಶೇ.6ರ ದರದಲ್ಲಿ ಬಡ್ಡಿ ಸಹಾಯಧನವನ್ನು ಒದಗಿಸಲಾಗುವುದು.

81. ಉದ್ಯೋಗಸ್ಥ ಮಹಿಳೆಯರಿಗೆ ಪ್ರತಿ ಜಿಲ್ಲೆಯ ಜಿಲ್ಲಾ ಕೇಂದ್ರಗಳಲ್ಲಿ ವಸತಿ ನಿಲಯಗಳನ್ನು ಸ್ಥಾಪಿಸಲು ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು.

82. ಮಕ್ಕಳ ಸರ್ವಾಂಗೀಣ ವ್ಯಕ್ತಿತ್ವ ವಿಕಾಸಕ್ಕೆ ರಾಜ್ಯಮಟ್ಟದಲ್ಲಿ **'ಬಾಲ ವಿಕಾಸ ಅಕಾಡೆಮಿ'**ಯನ್ನು ಸ್ಥಾಪನೆ ಮಾಡಲಾಗವುದು.

ಅಂಗವಿಕಲರ ಕಲ್ಯಾಣ

83. ಶೇ.75ಕ್ಕೂ ಹೆಚ್ಚಿನ ಪ್ರಮಾಣದ ಅಂಗವಿಕಲತೆ ಹೊಂದಿದವರಿಗೆ ಪ್ರತಿ ತಿಂಗಳು 1,000 ರೂ. ಮಾಸಾಶನ ನೀಡಲಾಗುವುದು. ಅಂಗವಿಕಲ ವ್ಯಕ್ತಿಗಳಿಗೆ ಅಗತ್ಯವಿರುವ ಟ್ರೈಸಿಕಲ್ ಮುಂತಾದ ಉಪಕರಣಗಳ ಉಚಿತ ಸರಬರಾಜಿಗಾಗಿ 8 ಕೋಟಿ ರೂ.ಗಳನ್ನು ಒದಗಿಸಲಾಗುವುದು.

84. ಅಂಧ ಹಾಗೂ ವಿಕಲಾಂಗ ಮಕ್ಕಳ ಪೋಷಣೆಗಾಗಿ ಸ್ವಯಂ ಸೇವಾ ಸಂಸ್ಥೆಗಳಿಗೆ ನೀಡುವ ಅನುದಾನವನ್ನು ತಲಾ ಮಾಸಿಕ 400 ರೂ.ಗಳಿಂದ 600 ರೂ.ಗಳಿಗೆ ಹೆಚ್ಚಿಸಲಾಗುವುದು.

ವಸತಿ

85. ಸಮಾಜದಲ್ಲಿ ಅತೀ ಹಿಂದುಳಿದ ವರ್ಗದವರಿಗೆ ಸೂರು ಕಲ್ಪಿಸುವುದು ಸರ್ಕಾರದ ಪ್ರಮುಖ ಆದ್ಯತೆಯಾಗಿದೆ. ಈ ನಿಟ್ಟಿನಲ್ಲಿ ಕಡುಬಡತನದ ಕುಟುಂಬಗಳಿಗೆ 2008-09ನೇ ಸಾಲಿನಲ್ಲಿ ಮೂರು ಲಕ್ಷ ಮನೆಗಳನ್ನು ನಿರ್ಮಿಸಲಾಗುವುದು. ಕೊಳೆಗೇರಿ ನಿವಾಸಿಗಳಿಗಾಗಿ ಮನೆಗಳನ್ನು ನಿರ್ಮಿಸುವ ಜೊತೆಗೆ ನಗರ

ಗೃಹಯೋಜನೆಗಳಿಗೆ ಅಗತ್ಯ ಮೂಲ ಸೌಕರ್ಯಗಳಾದ ರಸ್ತೆ, ಚರಂಡಿ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗುವುದು.

86. ಗ್ರಾಮೀಣ ಆಶ್ರಯ ಯೋಜನೆಯಲ್ಲಿ ಈ ಸಾಲಿನಿಂದ ನಿರ್ಮಿಸಲಾಗುವ ಮನೆಗಳಿಗೆ ನಿರ್ಮಾಣವೆಚ್ಚದ ಮಿತಿಯನ್ನು 30,000 ರೂ.ಗಳಿಂದ 40,000 ಸಾವಿರ ರೂ.ಗಳಿಗೆ ಏರಿಸಲಾಗುವುದು. ಗ್ರಾಮೀಣ ಪ್ರದೇಶದಲ್ಲಿ ಆಶ್ರಯ ಕಾಲೋನಿಗಳನ್ನು ಸ್ಥಾಪಿಸಲು ಅಗತ್ಯವಿರುವ ಜಮೀನನ್ನು ಖರೀದಿಸಿ ಅಲ್ಲಿ ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗುವುದು.

87. ವಸತಿ ಕಾರ್ಯಕ್ರಮಗಳಿಗಾಗಿ 2007-08ರಲ್ಲಿ ನೀಡಿದ್ದ 727ಕೋಟಿ ರೂ.ಗಳ ಅನುದಾನವನ್ನು 2008-09ರಲ್ಲಿ 821 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.

ನಗರಾಭಿವೃದ್ಧಿ

88. ರಾಜ್ಯದ ಶೇ.34 ರಷ್ಟು ಜನರು ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಈ ನಗರಪ್ರದೇಶಗಳು ರಾಜ್ಯದ ಆರ್ಥಿಕ ಚಟುವಟಿಕೆಯಲ್ಲಿ ಶೇ.80 ರಷ್ಟನ್ನು ಉತ್ಪಾದಿಸುತ್ತಿದ್ದು ಬೆಳವಣಿಗೆಯ ಚಾಲನಾಕೇಂದ್ರಗಳಾಗಿವೆ. ಆದಾಗ್ಯೂ ನಗರ ಪ್ರದೇಶಗಳಲ್ಲಿನ ಮೂಲ ಸೌಕರ್ಯಗಳು ನಗರದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಯ ಪ್ರಮಾಣ ಮತ್ತು ಆರ್ಥಿಕ ಚಟುವಟಿಕೆಗಳ ವೇಗಕ್ಕೆ ಅನುಗುಣವಾಗಿ ಬೆಳೆಯುತ್ತಿಲ್ಲ. ಈ ನಿಟ್ಟಿನಲ್ಲಿ ಸರ್ಕಾರವು ನಗರಾಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲು ಉದ್ದೇಶಿಸಿದೆ. ಈ ವಲಯಕ್ಕೆ ಹಂಚಿಕೆಯಾಗಿರುವ ಅನುದಾನವನ್ನು ಕಳೆದ ಸಾಲಿನ 2214 ಕೋಟಿ ರೂ.ಗಳಿಂದ ಈ ಸಾಲಿನಲ್ಲಿ 4574 ಕೋಟಿ ರೂ.ಗಳಿಗೆ ಹೆಚ್ಚಿಸಿದೆ. ಇದರ ಜೊತೆಗೆ ರಾಜ್ಯ ಹಣಕಾಸು ಆಯೋಗದ ಅನುದಾನಗಳ ಮೂಲಕ 2419 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಈ ಮೊತ್ತವು ಕಳೆದ ವರ್ಷ ಒದಗಿಸಿದ್ದ ಅನುದಾನಕ್ಕಿಂತ 500 ಕೋಟಿ ರೂ.ಗಳಷ್ಟು ಅಧಿಕವಾಗಿದೆ.

89. ನಗರಗಳಲ್ಲಿನ ಕುಡಿಯುವ ನೀರಿನ ಪೂರೈಕೆ ಮತ್ತು ಒಳಚರಂಡಿ ವ್ಯವಸ್ಥೆಯನ್ನು ಸುಧಾರಿಸಲು ಕರ್ನಾಟಕ ನಗರ ನೀರು ಪೂರೈಕೆ ಮತ್ತು ಒಳಚರಂಡಿ ಮಂಡಳಿಗೆ ನೀಡುವ ಅನುದಾನವನ್ನು 231 ಕೋಟಿ ರೂ.ಗಳಿಂದ 380 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ. ಹುಬ್ಬಳ್ಳಿ-ಧಾರವಾಡ ನಗರಗಳಿಗೆ ಕುಡಿಯುವ ನೀರು ಪೂರೈಕೆ ವ್ಯವಸ್ಥೆಯನ್ನು ಸುಧಾರಿಸುವ ಯೋಜನೆಯನ್ನು 136 ಕೋಟಿ ರೂ.ಗಳ ವೆಚ್ಚದಲ್ಲಿ ಈ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗುವುದು.

90. ಕರ್ನಾಟಕ ಪೌರಾಡಳಿತ ಸುಧಾರಣೆ ಯೋಜನೆಯಡಿ ನಗರ ಮತ್ತು ಪಟ್ಟಣಗಳ ಆಡಳಿತ ವ್ಯವಸ್ಥೆಯನ್ನು ಸುಧಾರಿಸಲು 250 ಕೋಟಿ ರೂ.ಗಳನ್ನು ಒದಗಿಸಿದೆ. ಉತ್ತರ ಕರ್ನಾಟಕದ ನಗರ ಮತ್ತು ಪಟ್ಟಣಗಳ ಮೂಲ ಸೌಕರ್ಯಗಳನ್ನು ಸುಧಾರಿಸಲು 100 ಕೋಟಿ ರೂ.ಗಳ ನೆರವನ್ನು ನೀಡಲಾಗುವುದು. ಕರಾವಳಿ ಕರ್ನಾಟಕದ ಪಟ್ಟಣಗಳಿಗೆ ಕುಡಿಯುವ ನೀರಿನ ಪೂರೈಕೆ ಹಾಗೂ ರಸ್ತೆ ಮತ್ತು ಒಳಚರಂಡಿ ವ್ಯವಸ್ಥೆಯನ್ನು ಸುಧಾರಿಸಲು 161 ಕೋಟಿ ರೂ. ಗಳನ್ನು ಒದಗಿಸಿದೆ.

91. ರಾಜ್ಯದ ಎರಡನೇ ಹಂತದ ನಗರಗಳಾದ ಮೈಸೂರು, ಮಂಗಳೂರು, ಬೆಳಗಾವಿ, ಹುಬ್ಬಳ್ಳಿ-ಧಾರವಾಡ, ದಾವಣಗೆರೆ, ಬಳ್ಳಾರಿ ಮತ್ತು ಗುಲ್ಬರ್ಗಾ ನಗರ ಪಾಲಿಕೆಗಳಿಗೆ ನಿರ್ದಿಷ್ಟ ಅಭಿವೃದ್ಧಿ ಯೋಜನೆಗಳಿಗಾಗಿ ತಲಾ 100 ಕೋಟಿ ರೂ.ಗಳ ವಿಶೇಷ ಅನುದಾನವನ್ನು ಎರಡು ವರ್ಷಗಳ ಅವಧಿಯಲ್ಲಿ ಒದಗಿಸಲು ನಿರ್ಧರಿಸಿದೆ. ಪ್ರಸಕ್ತ ಸಾಲಿನಲ್ಲಿ ಈ ನಗರಗಳಿಗೆ ತಲಾ 50 ಕೋಟಿ ರೂ.ಗಳವರೆಗೆ ಅನುದಾನ ಬಿಡುಗಡೆ ಮಾಡಲಾಗುವುದು.

92. ನಗರ ಪ್ರದೇಶಗಳ ವಾಹನ ದಟ್ಟಣೆಯನ್ನು ಕಡಿಮೆ ಮಾಡಲು ಕ್ಷಿಪ್ರ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಈಗಾಗಲೇ ಬೆಂಗಳೂರಿನಲ್ಲಿ ಕಲ್ಪಿಸಲಾಗುತ್ತಿದ್ದು, ಮೈಸೂರು, ಮಂಗಳೂರು ಮತ್ತು ಉಡುಪಿ ನಗರಗಳಲ್ಲಿ ಮೊನೊ ರೈಲು ವ್ಯವಸ್ಥೆಯನ್ನು ಅಳವಡಿಸಲು ಯೋಜನೆಯನ್ನು ತಯಾರಿಸುವ ಸಲುವಾಗಿ 2 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

93. ಕರಾವಳಿ ಪ್ರದೇಶದ ಸಮಗ್ರ ಅಭಿವೃದ್ಧಿಗಾಗಿ ಸಮಗ್ರ ಕರಾವಳಿ ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಗುವುದು.

ಬೆಂಗಳೂರು ಅಭಿವೃದ್ಧಿ

94. ಬೆಂಗಳೂರು ನಗರವು ಎದುರಿಸುತ್ತಿರುವ ವಿವಿಧ ಮೂಲ ಸೌಕರ್ಯ ಸಮಸ್ಯೆಗಳ ನಿವಾರಣೆಗೆ ಮುಂದಿನ ಐದು ವರ್ಷಗಳಲ್ಲಿ 36,000 ಕೋಟಿ ರೂ.ಗಳ ಹೂಡಿಕೆ ಅಗತ್ಯವಿದೆಯೆಂದು ಅಂದಾಜು ಮಾಡಲಾಗಿದೆ. ಈ ಬೃಹತ್ ಪ್ರಮಾಣದ ಬಂಡವಾಳ ಹೂಡಿಕೆಯನ್ನು ರಾಜ್ಯ ಸರ್ಕಾರ ಮತ್ತು ಖಾಸಗಿ ವಲಯಗಳ ಸಹಭಾಗಿತ್ವದೊಂದಿಗೆ ಹಾಗೂ ಬೆಂಗಳೂರಿನ ನಾಗರೀಕರ ಬೆಂಬಲದಿಂದ ಸಾಕಾರಗೊಳಿಸಬಹುದಾಗಿದೆ.

95. ಬೆಂಗಳೂರು ನಗರದಲ್ಲಿ ನಾಡಪ್ರಭು ಕೆಂಪೇಗೌಡರ ಹೆಸರಿನಲ್ಲಿ 60,000 ನಿವೇಶನಗಳ ಬಡಾವಣೆಯನ್ನು ನಿರ್ಮಿಸಲಾಗುವುದು. ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಶೇ. 20ರಷ್ಟು ಮನೆ ಮತ್ತು ನಿವೇಶನಗಳಿಗೆ ಇಲ್ಲಿ ಅವಕಾಶ ಕಲ್ಪಿಸಲಾಗುವುದು.

96. ಬೆಂಗಳೂರು ನಗರದಲ್ಲಿ ಅಂದಾಜು 3000 ಕೋಟಿ ರೂ.ಗಳ ವೆಚ್ಚದ 65 ಕಿ.ಮೀ. ಉದ್ದದ ಹೊರವಲಯ ವರ್ತುಲ ರಸ್ತೆಯನ್ನು ನಿರ್ಮಾಣ, ಒಡೆತನ, ವರ್ಗಾವಣೆ (BOT) ಆಧಾರದಲ್ಲಿ ಅಭಿವೃದ್ಧಿ ಪಡಿಸಲಾಗುವುದು. ಹಾಲಿ ಬಳಕೆಯಲ್ಲಿರುವ ಬೆಂಗಳೂರು ಹೊರವರ್ತುಲ ರಸ್ತೆಯಲ್ಲಿ ಸುಗಮ ವಾಹನ ಸಂಚಾರಕ್ಕಾಗಿ 350 ಕೋಟಿ ರೂ.ಗಳ ವೆಚ್ಚದಲ್ಲಿ 10 ಫ್ಲೈ ಓವರ್ ಮತ್ತು ಅಂಡರ್‌ಪಾಸ್‌ಗಳನ್ನು ನಿರ್ಮಿಸಲಾಗುವುದು.

97. ಈ ಸಾಲಿನಲ್ಲಿ ಬೆಂಗಳೂರು ನಗರದ ಅಭಿವೃದ್ಧಿಗಾಗಿ ಒಟ್ಟು 1800 ಕೋಟಿ ರೂ.ಗಳ ಹಂಚಿಕೆಯನ್ನು ಪ್ರಮುಖವಾಗಿ ಈ ಕೆಳಗಿನಂತೆ ಒದಗಿಸಲಾಗಿದೆ.

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಬೆಂಬಲ ಅನುದಾನವಾಗಿ 300 ಕೋಟಿ ರೂ.

- ಬೆಂಗಳೂರು ನಗರಕ್ಕೆ ನೂತನವಾಗಿ ಸೇರ್ಪಡೆಯಾಗಿರುವ ಪ್ರದೇಶಗಳಿಗೆ ಕೊಳವೆ ಬಾವಿಗಳ ಮೂಲಕ ನೀರು ಪೂರೈಸಲು ಬಿಡಬ್ಲ್ಯೂಎಸ್‌ಎಸ್‌ಬಿ ಗೆ 100 ಕೋಟಿ ರೂ.
- ಬೆಂಗಳೂರು ಮೆಟ್ರೋ ಯೋಜನೆಗೆ 2007-08ರಲ್ಲಿ ನೀಡಿದ್ದ 173 ಕೋಟಿ ರೂ.ಗಳ ಅನುದಾನ 2008-09ನೇ ಸಾಲಿನಲ್ಲಿ 700 ಕೋಟಿ ರೂ.
- ಬೆಂಗಳೂರ ನಗರ ಹಾಗೂ ಸುತ್ತಮುತ್ತ ಗುರುತಿಸಿರುವ ರಸ್ತೆಗಳ ಅಭಿವೃದ್ಧಿಗೆ 240 ಕೋಟಿರೂ.
- ಬೆಂಗಳೂರು ನಗರದ ಸಂಚಾರ ನಿರ್ವಹಣೆ ಸುಧಾರಣೆಗಾಗಿ 25 ಕೋಟಿ ರೂ.

98. ಬೆಂಗಳೂರು ನಗರವು ಎದುರಿಸುತ್ತಿರುವ ವಾಹನಗಳ ನಿಲುಗಡೆ ಸಮಸ್ಯೆ ನಿವಾರಣೆಗೆ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಬಹುಮಹಡಿ ವಾಹನ ನಿಲ್ದಾಣಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

99. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬೃಹತ್ ಬೆಂಗಳೂರು ವ್ಯಾಪ್ತಿಗೆ ಹೊಸದಾಗಿ ಸೇರಿರುವ ಪ್ರದೇಶಗಳಲ್ಲಿ ರಸ್ತೆ, ಚರಂಡಿ, ಕುಡಿಯುವ ನೀರಿನ ಸೌಲಭ್ಯ ಒದಗಿಸಲು 700 ಕೋಟಿ ರೂ.ಗಳನ್ನು ವಿನಿಯೋಗಿಸಲಾಗುವುದು.

100. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕೆಲವು ಬೃಹತ್ ಮೂಲಸೌಕರ್ಯ ಯೋಜನೆಗಳನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಕೈಗೆತ್ತಿಕೊಳ್ಳುತ್ತಿದ್ದು ಇದರಲ್ಲಿ ಬೆಂಗಳೂರು ಹೊರವಲಯ ರಸ್ತೆ ನಿರ್ಮಾಣ, ಮೇಲ್ಸೇತುವೆಗಳ ನಿರ್ಮಾಣ ಹಾಗೂ ದುರ್ಬಲವರ್ಗಗಳ ಜನರಿಗಾಗಿ ವಸತಿ ನಿರ್ಮಾಣದಂತಹ ಯೋಜನೆಗಳು ಸೇರಿವೆ.

101. ಬೆಂಗಳೂರು ನಗರಕ್ಕೆ ನೂತನವಾಗಿ ಸೇರ್ಪಡೆಯಾಗಿರುವ ಪ್ರದೇಶಗಳಿಗೆ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆ ಒದಗಿಸುವ ಬಹಳ ದಿನಗಳ ಸಮಸ್ಯೆಯನ್ನು ಪರಿಹರಿಸಲು ವಿಶ್ವಬ್ಯಾಂಕ್ ನೆರವಿನ ಯೋಜನೆ ಹಾಗೂ ಮೆಗಾಸಿಟಿ ಯೋಜನೆಗಳನ್ನು ತ್ವರಿತವಾಗಿ ಕಾರ್ಯಗತಗಳಿಸಲಾಗುವುದು. ನಾಲ್ಕನೇ ಹಂತದ ನೀರು ಸರಬರಾಜು ಯೋಜೆಗೆ 3400 ಕೋಟಿ ರೂ.ಗಳ ಜಪಾನ್ ಬ್ಯಾಂಕ್ ನೆರವಿನ ಯೋಜನೆಯ ಅನುಷ್ಠಾನವನ್ನು ತೀವ್ರಗೊಳಿಸಲಾಗುವುದು.

ಮೂಲ ಸೌಕರ್ಯಗಳ ಅಭಿವೃದ್ಧಿ

102. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ರಾಜ್ಯ ಸರ್ಕಾರವು ತನ್ನ ಪಾಲಿನ 295 ಕೋಟಿ ರೂ.ಗಳ ನೆರವು ಮತ್ತು 48 ಕೋಟಿ ರೂ.ಗಳ ಷೇರು ಬಂಡವಾಳವನ್ನು ಒದಗಿಸಿದೆ. ನೂತನ ವಿಮಾನ ನಿಲ್ದಾಣಕ್ಕೆ ಶೀಘ್ರವಾಗಿ ಉತ್ತಮ ರಸ್ತೆ ಸಂಪರ್ಕ ಕಲ್ಪಿಸಲು ಅಗತ್ಯವಾದ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಸಾರ್ವಜನಿಕ - ಖಾಸಗಿ ಸಹಭಾಗಿತ್ವದಲ್ಲಿ ಕೈಗೆತ್ತಿಕೊಳ್ಳುತ್ತಿರುವ ಪ್ರತಿಷ್ಠಿತ "ಹೈಸ್ಪೀಡ್ ರೈಲು ಸಂಪರ್ಕ ಯೋಜನೆ" ಯನ್ನು ಕಾರ್ಯಗತಗೊಳಿಸಲು ದೆಹಲಿ ಮೆಟ್ರೋ ರೈಲು ನಿಗಮವನ್ನು ಸಲಹಾ ಸಂಸ್ಥೆಯನ್ನಾಗಿ ನಿಯೋಜಿಸಲಾಗಿದೆ.

103. ರಾಜ್ಯದ ಎಲ್ಲ ಭಾಗಗಳಲ್ಲಿ ಕೈಗಾರಿಕೆ ಮತ್ತು ಪ್ರವಾಸೋದ್ಯಮವನ್ನು ಅಭಿವೃದ್ಧಿಗೊಳಿಸಲು ಸರ್ಕಾರವು ಬದ್ಧವಾಗಿದ್ದು ಈ ನಿಟ್ಟಿನಲ್ಲಿ 2008-09ನೇ ಸಾಲಿನಲ್ಲಿ ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿಪಡಿಸಲು 150 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗಿದೆ.

104. ರಾಜ್ಯದಲ್ಲಿರುವ ಸಣ್ಣ ವಿಮಾನ ನಿಲ್ದಾಣಗಳ ಬಳಕೆಯನ್ನು ಉತ್ತೇಜಿಸುವ ಸಲುವಾಗಿ ಬೆಂಗಳೂರು ಮತ್ತು ಮಂಗಳೂರು ವಿಮಾನ ನಿಲ್ದಾಣಗಳನ್ನು ಹೊರತುಪಡಿಸಿ ರಾಜ್ಯದ ಇತರೆ ಸಣ್ಣ ವಿಮಾನ ನಿಲ್ದಾಣಗಳಲ್ಲಿ ತುಂಬಿಸಿಕೊಳ್ಳುವ ವೈಮಾನಿಕ ಇಂಧನದಿಂದ ಸಂಗ್ರಹಿಸುವ ತೆರಿಗೆಯನ್ನು ಭಾಗಶಃ ಹಿಂದಿರುಗಿಸುವ ಯೋಜನೆಯನ್ನು ರೂಪಿಸಲಾಗುವುದು.

- ಹುಬ್ಬಳ್ಳಿ ವಿಮಾನ ನಿಲ್ದಾಣವನ್ನು ಅಂತರ್‌ರಾಷ್ಟ್ರೀಯ ಮಟ್ಟಕ್ಕೆ ಮೇಲ್ದರ್ಜೆಗೇರಿಸಲು, ಬೆಳಗಾವಿ ಮತ್ತು ಮಂಗಳೂರು ವಿಮಾನ ನಿಲ್ದಾಣಗಳನ್ನು ವಿಸ್ತರಿಸಲು ಅಗತ್ಯವಾದ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ.
- ಪ್ರಗತಿಯಲ್ಲಿರುವ ಮೈಸೂರು ವಿಮಾನ ನಿಲ್ದಾಣದ ಕಾಮಗಾರಿಗಾಗಿ ಹೆಚ್ಚುವರಿ ಜಮೀನನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಹಾಗೆಯೇ ಬಿಜಾಪುರ, ಗುಲ್ಬರ್ಗಾ, ಶಿವಮೊಗ್ಗ ಮತ್ತು ಹಾಸನಗಳಲ್ಲಿ ಖಾಸಗಿ-ಸಾರ್ವಜನಿಕ ಸಹಭಾಗಿತ್ವದಲ್ಲಿ ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ.
- ರಾಜ್ಯದಲ್ಲಿ ಪ್ರವಾಸೋದ್ಯಮಕ್ಕೆ ಹೆಚ್ಚಿನ ಒತ್ತು ನೀಡಲು 10 ವಿಮಾನ ಇಳಿದಾಣಗಳನ್ನು ತಲಾ 4 ಕೋಟಿ ರೂ.ಗಳಂತೆ ಒಟ್ಟು 40 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ರೈಲ್ವೆ ಯೋಜನೆಗಳು

105. ಕೇಂದ್ರ ಸರ್ಕಾರದ ಜೊತೆ ವೆಚ್ಚ ಹಂಚಿಕೆ ಆಧಾರದಲ್ಲಿ ರಾಜ್ಯದಲ್ಲಿನ ರೈಲ್ವೆ ಯೋಜನೆಗಳನ್ನು ಅನುಷ್ಠಾನಗೊಳಿಸಲು 253 ಕೋಟಿ ರೂ.ಗಳನ್ನು ಒದಗಿಸಲಾಗುತ್ತಿದೆ. ಈ ಕೆಳಕಂಡ ಯೋಜನೆಗಳನ್ನು ಶೀಘ್ರವಾಗಿ ಪೂರ್ಣಗೊಳಿಸುವಂತೆ ರೈಲ್ವೇ ಮಂತ್ರಾಲಯದ ಮೇಲೆ ರಾಜ್ಯ ಸರ್ಕಾರವು ಆಗ್ರಹಪಡಿಸುತ್ತಿದೆ.

- ಬೀದರ್ - ಗುಲ್ಬರ್ಗಾ ನೂತನ ರೈಲ್ವೆ ಮಾರ್ಗ
- ಬೀದರ್ - ಮೈಸೂರು ಜೋಡಿ ಮಾರ್ಗ
- ಮುನಿರಾಬಾದ್ - ಮೆಹಬೂಬ್ ನಗರ ನೂತನ ರೈಲ್ವೆ ಮಾರ್ಗ
- ಸೋಲಾಪುರ - ಬಾಗಲಕೋಟೆ - ಗದಗ ಗೇಜು ಪರಿವರ್ತನೆ
- ಶಿವಮೊಗ್ಗ - ತಾಳಗುಪ್ಪ ಗೇಜು ಪರಿವರ್ತನೆ
- ಕೊಟ್ಟೂರು - ಹರಿಹರ ನೂತನ ರೈಲ್ವೆ ಮಾರ್ಗ

ಲೋಕೋಪಯೋಗಿ

106. ರಾಜ್ಯದಲ್ಲಿ ನೂತನ ರಸ್ತೆಗಳನ್ನು ನಿರ್ಮಿಸುವ ಜೊತೆ ಜೊತೆಯಲ್ಲೇ ಹಾಲಿ ರಸ್ತೆಗಳ ನಿರ್ವಹಣೆಗೂ ಸಹ ವಿಶೇಷ ಒತ್ತು ನೀಡಲಾಗುವುದು. ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ 250 ಕೋಟಿ ರೂ.ಗಳನ್ನು ವೆಚ್ಚಮಾಡಲು ಉದ್ದೇಶಿಸಲಾಗಿದೆ. ನಬಾರ್ಡ್ ನೆರವಿನಿಂದ 200 ಕೋಟಿ ರೂ.ಗಳ ವೆಚ್ಚದಲ್ಲಿ 1275 ಕಿ.ಮೀ. ಉದ್ದದ ರಸ್ತೆ ಮತ್ತು 35 ಸೇತುವೆಗಳನ್ನು ನಿರ್ಮಿಸಲಾಗುವುದು. ಹಿಂದುಳಿದಿರುವ ತಾಲ್ಲೂಕುಗಳಲ್ಲಿನ ರಸ್ತೆಗಳ ಅಭಿವೃದ್ಧಿಗಾಗಿ 200 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ.

- ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರು ಹೆಚ್ಚಾಗಿ ವಾಸಿಸುವ ಹಳ್ಳಿಗಳು ಮತ್ತು ಉಪಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ಜಿಲ್ಲಾ ರಸ್ತೆಗಳು ಮತ್ತು ಸಂಪರ್ಕ ರಸ್ತೆಗಳನ್ನು 76.30 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾಗುವುದು.
- ವಿಶ್ವಬ್ಯಾಂಕ್ ನೆರವಿನ ಕೇಶಿಪ್-II ಯೋಜನೆಯಡಿ 150 ಕೋಟಿ ರೂ.ಗಳ ವೆಚ್ಚದಲ್ಲಿ 584 ಕಿ.ಮೀ. ರಸ್ತೆ ನಿರ್ಮಿಸಲು ಉದ್ದೇಶಿಸಲಾಗಿದೆ.
- ಕೇಶಿಪ್-I ಯೋಜನೆಯಡಿ 3411 ಕಿ.ಮೀ. ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗಾಗಿ 100 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗಿದೆ.
- ಕೇಂದ್ರೀಯ ರಸ್ತೆ ನಿಧಿ ಯೋಜನೆಯಡಿ 71 ರಸ್ತೆಗಳು ಮತ್ತು 2 ಸೇತುವೆಗಳನ್ನು 650 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು. ಇದಲ್ಲದೆ ಪ್ರತಿ ತಾಲ್ಲೂಕು ಕೇಂದ್ರದಿಂದ ಜಿಲ್ಲಾ ಕೇಂದ್ರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು 500 ಕೋಟಿ ರೂ.ಗಳನ್ನು ವಿನಿಯೋಗಿಸಲಾಗುವುದು.

107. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮವು 200 ಕಿ.ಮೀ. ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸಲು ಹಾಗೂ 225 ಸೇತುವೆಗಳನ್ನು ನಿರ್ಮಿಸಲು ಯೋಜನೆ ರೂಪಿಸಿದೆ. ಈ ಯೋಜನೆಯಡಿ ಕಾವೇರಿ ನದಿಗೆ ಟಿ. ನರಸೀಪುರದ ಬಳಿ ಹಾಗೂ ಸಾಗರ ತಾಲ್ಲೂಕಿನ ಅಂಬರಗೋಡ ಗ್ರಾಮದ ಬಳಿ ಶರಾವತಿ ನದಿಯ ಹಿನ್ನೀರಿನಲ್ಲಿ ಸೇತುವೆಗಳನ್ನು ನಿರ್ಮಿಸಲಾಗುವುದು.

108. ರಸ್ತೆಗಳ ಗುಣಮಟ್ಟ ಮತ್ತು ಅವುಗಳ ಬಾಳಿಕೆಯನ್ನು ನಿರ್ಧರಿಸಲು ಸಹಾಯಕವಾಗುವ ವಿನೂತನ ರಸ್ತೆ ನಿರ್ವಹಣೆ ಗುತ್ತಿಗೆ ವಿಧಾನವನ್ನು ಪರಿಚಯಿಸಲಾಗುತ್ತಿದ್ದು ಕೇಶಿಪ್-I ಯೋಜನೆಯ ಅಡಿಯಲ್ಲಿ ನಿರ್ಮಿಸಿರುವ 1780 ಕಿ.ಮೀ. ರಸ್ತೆಗಳ ನಿರ್ವಹಣೆಯನ್ನು ಗುತ್ತಿಗೆಗೆ ನೀಡಲಾಗುವುದು. ಈ ಉದ್ದೇಶಕ್ಕಾಗಿ 50 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ.

109. ತುಮಕೂರು-ಹೊನ್ನಾವರ ರಾಷ್ಟ್ರೀಯ ಹೆದ್ದಾರಿಗೆ ಭೂಸ್ವಾಧೀನ ಪಡಿಸಿಕೊಳ್ಳಲು 15 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ. ಅಲ್ಲದೆ ರಾಜ್ಯದ ಮುಖ್ಯ ನಗರಗಳಿಗೆ ವರ್ತುಲ ರಸ್ತೆಗಳನ್ನು ನಿರ್ಮಿಸಲು ಭೂಸ್ವಾಧೀನಕ್ಕಾಗಿ 20 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ಕಟ್ಟಡಗಳು

110. ಧಾರವಾಡ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಸಂಚಾರಿ ಹೈಕೋರ್ಟ್ ಪೀಠಗಳ ಉದ್ಘಾಟನೆಯೊಂದಿಗೆ ಉತ್ತರ ಕರ್ನಾಟಕದ ಜನತೆಯ ಬಹುದಿನಗಳ ಕನಸು ನನಸಾಗಿದೆ. ಈ ಎರಡೂ ಯೋಜನೆಗಳನ್ನು ಪೂರ್ಣಗೊಳಿಸಲು ಅಗತ್ಯವಾದ ಅನುದಾನವನ್ನು ಒದಗಿಸಲಾಗುವುದು. ದಾವಣಗೆರೆ, ಉಡುಪಿ, ಚಿಕ್ಕಬಳ್ಳಾಪುರ ಮತ್ತು ಮಡಿಕೇರಿಗಳಲ್ಲಿ ಜಿಲ್ಲಾ ಕಛೇರಿಗಳ ನಿರ್ಮಾಣಕ್ಕಾಗಿ 9 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಹಾಗೆಯೇ ತಾಲ್ಲೂಕು ಕೇಂದ್ರಗಳಲ್ಲಿ ಮಿನಿ ವಿಧಾನಸೌಧಗಳ ನಿರ್ಮಾಣಕ್ಕಾಗಿ 23 ಕೋಟಿ ರೂ.ಗಳ ಅನುದಾನ ಒದಗಿಸಲಾಗುವುದು.

ಬಂದರು

111. ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಕಾರವಾರ ಬಂದರನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದೆ. ಉಳಿದ ಇತರೆ ಬಂದರುಗಳ ನಿರ್ವಹಣೆಗಾಗಿ 10 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಕಡಲು ಕೊರೆತವನ್ನು ತಡೆಗಟ್ಟಲು 4.00 ಕೋಟಿ ರೂ.ಗಳನ್ನು ವಿನಿಯೋಗಿಸಲಾಗುವುದು. ಬಂದರುಗಳಿಗೆ ರಸ್ತೆ ಸಂಪರ್ಕ ಕಲ್ಪಿಸಲು 5 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ಇಂಧನ

112. ರಾಜ್ಯದ ವಿದ್ಯುಚ್ಛಕ್ತಿಯ ಬೇಡಿಕೆ ದಿನೇ ದಿನೇ ಏರುತ್ತಿದೆ. ಆದರೆ ಪೂರೈಕೆ ಸಾಮರ್ಥ್ಯ ಮಾತ್ರ ನಿರೀಕ್ಷಿತ ಪ್ರಮಾಣದಲ್ಲಿ ಸುಧಾರಿಸುತ್ತಿಲ್ಲ. ಈ ನಿಟ್ಟಿನಲ್ಲಿ ಸರ್ಕಾರವು ವಿದ್ಯುತ್ ಉತ್ಪಾದನೆಯನ್ನು ಪ್ರಮುಖ ಆದ್ಯತೆಯನ್ನಾಗಿ ಪರಿಗಣಿಸಿದೆ.

113. ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯಗಳ ದೀರ್ಘಾವಧಿಯ ಸಮಗ್ರ ಅಭಿವೃದ್ಧಿ ಸಾಧಿಸಲು ನಾವು ಮುಂದಿನ ಐದು ವರ್ಷಗಳಲ್ಲಿ 5000 ಮೆಗಾವ್ಯಾಟ್ ವಿದ್ಯುತ್‌ನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಪಡೆದುಕೊಳ್ಳುವ ಮೂಲಕ ಕರ್ನಾಟಕದ ವಿದ್ಯುತ್ ಚಿತ್ರಣವನ್ನೇ ಬದಲಾಯಿಸುವ ಮುನ್ನೋಟವನ್ನು ಇಟ್ಟುಕೊಳ್ಳಬೇಕು. ಈ ಉದ್ದೇಶದಿಂದ 2008-09ನೇ ಸಾಲಿನಲ್ಲಿ 1,000 ಮೆಗಾವ್ಯಾಟ್ ವಿದ್ಯುತ್‌ನ್ನು ರಾಜ್ಯದ ವಿದ್ಯುತ್ ಜಾಲಕ್ಕೆ ಸೇರಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

114. ವಿದ್ಯುತ್ ಪ್ರಸರಣಾ ನಿರ್ವಹಣೆಯನ್ನು ಸುಧಾರಿಸುವ ದೃಷ್ಟಿಯಿಂದ ಹೊಸ ಉಪವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸುವ ಜೊತೆಗೆ 33 ಕೆ.ವಿ. ಸಾಮರ್ಥ್ಯದ 50 ಉಪ ಕೇಂದ್ರಗಳನ್ನು 2008-09ನೇ ಸಾಲಿನಲ್ಲಿ ಸಜ್ಜುಗೊಳಿಸಲಾಗುವುದು. ಗ್ರಾಮೀಣ ವಿದ್ಯುತ್ ಬಳಕೆದಾರರಿಗೆ ಉತ್ತಮ ಗುಣಮಟ್ಟದ

ವಿದ್ಯುತ್‌ನ್ನು ಒದಗಿಸಲು ಗ್ರಾಮೀಣ ವಿದ್ಯುತ್ ನಿರ್ವಹಣಾ ವ್ಯವಸ್ಥೆಯನ್ನು (Rural Load Management System) ಜಾರಿಗೊಳಿಸಲಾಗುವುದು.

115. ಹತ್ತು ಅಶ್ವಶಕ್ತಿವರೆಗಿನ 15 ಲಕ್ಷ ನೀರಾವರಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಒದಗಿಸುವ ಮೂಲಕ ನಾವು ನಮ್ಮ ಭರವಸೆ ಮತ್ತು ವಚನವನ್ನು ಉಳಿಸಿಕೊಳ್ಳುತ್ತಿದ್ದೇವೆ. ರಾಜ್ಯದಲ್ಲಿನ ಒಟ್ಟು ವಿದ್ಯುತ್ ಬಳಕೆಯಲ್ಲಿ ಕೃಷಿ ವಲಯವು ಶೇ.37 ರಷ್ಟು ವಿದ್ಯುತ್‌ನ್ನು ಬಳಸಿಕೊಳ್ಳುತ್ತಿದೆ ಎಂದು ಹೇಳಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ರೈತರಿಗೆಂದು ಮೀಸಲಿಟ್ಟ ಅನುಕೂಲಗಳನ್ನು ರೈತರಿಗೆ ಮಾತ್ರವೇ ತಲುಪಿಸುವುದು ನಮ್ಮ ಜವಾಬ್ದಾರಿಯಾಗಿದೆ.

116. ಪುನರ್ ನವೀಕರಣ ಇಂಧನವು ಪರಿಸರ ಸಂರಕ್ಷಣೆಗೆ ಸಹಕಾರಿಯಾಗಿದೆ. ಹೀಗಾಗಿ ಪುನರ್ ನವೀಕರಣ ಇಂಧನ ಕಾರ್ಯಕ್ರಮಕ್ಕೆ ಸರ್ಕಾರವು ಹೆಚ್ಚಿನ ಒತ್ತು ನೀಡುತ್ತಿದ್ದು 220 ಮೆಗಾವ್ಯಾಟ್ ಸಾಮರ್ಥ್ಯದ ಗಾಳಿಯಂತ್ರ ಮತ್ತು 50 ಮೆಗಾವ್ಯಾಟ್ ಸಾಮರ್ಥ್ಯದ ಕಿರು ವಿದ್ಯುತ್ ಉತ್ಪಾದನಾ ಘಟಕಗಳನ್ನು ರಾಜ್ಯದಲ್ಲಿ ಸ್ಥಾಪಿಸಲಾಗುವುದು.

ಕೈಗಾರಿಕೆ ಮತ್ತು ವಾಣಿಜ್ಯ

117. ಕೈಗಾರಿಕಾ ಅಭಿವೃದ್ಧಿಯು ಆರ್ಥಿಕ ಬೆಳವಣಿಗೆಯ ದ್ಯೋತಕವಾಗಿದೆ. ಕೈಗಾರಿಕೆಗಳು ಆರ್ಥಿಕ ವೃದ್ಧಿದರ ಏರಿಕೆಗೆ ಕಾರಣವಾಗುವುದರ ಜೊತೆಗೆ ಅಧಿಕ ಸಂಖ್ಯೆಯಲ್ಲಿ ಉದ್ಯೋಗ ಸೃಷ್ಟಿಗೆ ಕಾರಣವಾಗಲಿವೆ. ಹೀಗಾಗಿ ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳನ್ನು ಉತ್ತೇಜಿಸುವಂತಹ ಹೂಡಿಕೆಗೆ ಸ್ನೇಹಪರವಾದ ಪರಿಸರವನ್ನು ಕಲ್ಪಿಸುವ ಅಗತ್ಯವಿದೆ. ಇದಕ್ಕಾಗಿ ನಮ್ಮ ಕೈಗಾರಿಕಾ ನೀತಿಯನ್ನು ಮರು ಪರಿಷ್ಕರಿಸಲಾಗುವುದು.

118. ಇದೇ ರೀತಿ ಅಧಿಕ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಸಿದ್ಧ ಉಡುಪು ತಯಾರಿಕೆಗೆ ಉತ್ತೇಜನ ನೀಡುವ **'ಹೊಸ ಜವಳಿ ನೀತಿ'** ಘೋಷಿಸಿ ಜಾರಿಗೊಳಿಸಲಾಗುವುದು.

119. ರಾಜ್ಯದ ನೈಸರ್ಗಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಗಮನದಲ್ಲಿರಿಸಿಕೊಂಡು 6 ವಿಶೇಷ ಕೈಗಾರಿಕಾ ವಲಯಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ರೂಪಿಸಲಾಗುವುದು.

- ಬಳ್ಳಾರಿ, ಕೊಪ್ಪಳ, ರಾಯಚೂರು, ಬಾಗಲಕೋಟೆ, ಹಾವೇರಿ ಮತ್ತು ಗದಗ ಜಿಲ್ಲೆಯಲ್ಲಿ ಉಕ್ಕು ವಲಯವನ್ನು ಸ್ಥಾಪಿಸಲಾಗುವುದು.
- ಗುಲ್ಬರ್ಗಾ, ಬಾಗಲಕೋಟೆ, ಚಿತ್ರದುರ್ಗ, ಬೆಳಗಾವಿ ಮತ್ತು ಇತರೆ ಜಿಲ್ಲೆಗಳಲ್ಲಿ ಸಿಮೆಂಟ್ ವಲಯವನ್ನು ಸ್ಥಾಪಿಸಲಾಗುವುದು.
- ಬೆಂಗಳೂರು ಗ್ರಾಮಾಂತರ, ಕೋಲಾರ, ಶಿವಮೊಗ್ಗ, ಬಾಗಲಕೋಟೆ, ವಿಜಾಪುರ, ದಾವಣಗೆರೆ ಮತ್ತು ಇತರೆ ಜಿಲ್ಲೆಗಳಲ್ಲಿ ಆಹಾರ ವಲಯವನ್ನು ಸ್ಥಾಪಿಸಲಾಗುವುದು.
- ಮೈಸೂರು, ಮಂಗಳೂರು, ಹುಬ್ಬಳ್ಳಿ - ಧಾರವಾಡ, ಬೆಳಗಾವಿ, ಶಿವಮೊಗ್ಗ ಮತ್ತು ಗುಲ್ಬರ್ಗಾಗಳಲ್ಲಿ ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ವಲಯವನ್ನು ಸ್ಥಾಪಿಸಲಾಗುವುದು.

- ರಾಮನಗರ, ಶಿವಮೊಗ್ಗ ಮತ್ತು ಹುಬ್ಬಳ್ಳಿ - ಧಾರವಾಡ ವಲಯಗಳಲ್ಲಿ ಆಟೋಮೊಬೈಲ್ ವಲಯವನ್ನು ಮತ್ತು ಬೆಂಗಳೂರು ಗ್ರಾಮಾಂತರ, ತುಮಕೂರು, ಕೋಲಾರ, ಮಂಡ್ಯ, ಬೆಳಗಾವಿ, ಬೀದರ್, ಧಾರವಾಡ ಮತ್ತು ಇತರೆ ಜಿಲ್ಲೆಗಳಲ್ಲಿ ಸಿದ್ಧಪಡಿಸಿದ ಉಡುಪುಗಳ ವಲಯವನ್ನು ಸ್ಥಾಪಿಸಲಾಗುವುದು. ಇದಕ್ಕಾಗಿ 2008-09ನೇ ಸಾಲಿನಲ್ಲಿ 500 ಕೋಟಿ ರೂ.ಗಳನ್ನು ಕೆಐಎಡಿಬಿಯಿಂದ ವೆಚ್ಚ ಮಾಡಲಾಗುವುದು.

120. ರಾಜ್ಯದ ಉದ್ದಗಲಕ್ಕೂ ಕೈಗಾರಿಕಾಭಿವೃದ್ಧಿಗೆ ಸುವರ್ಣ ಕರ್ನಾಟಕ ಅಭಿವೃದ್ಧಿ ಕಾರಿಡಾರ್ ಯೋಜನೆಯನ್ನು ಜಾರಿಗೊಳಿಸಲಾಗುವುದು. ಈ ಸಂಬಂಧ ಪ್ರಸಕ್ತ ವರ್ಷದಲ್ಲಿ ಯೋಜನಾ ವರದಿ ತಯಾರಿಸಲು 10 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ.

- ಬೀದರ್ - ಬೆಂಗಳೂರು ವಯಾ ಚಿತ್ರದುರ್ಗ
- ತುಮಕೂರು - ಹೊನ್ನಾವರ ವಯಾ ಶಿವಮೊಗ್ಗ
- ಚಿತ್ರದುರ್ಗ - ಮಂಗಳೂರು ವಯಾ ಶಿವಮೊಗ್ಗ - ಉಡುಪಿ
- ಬೆಂಗಳೂರು - ಬೆಳಗಾವಿ ವಯಾ ದಾವಣಗೆರೆ - ಹುಬ್ಬಳ್ಳಿಗಳಲ್ಲಿ ಉದ್ದೇಶಿತ ಕಾರಿಡಾರ್ ಯೋಜನೆಯನ್ನು ಜಾರಿಗೆ ತರಲಾಗುವುದು.

121. ರಾಜ್ಯದಲ್ಲಿ ಅಧಿಕ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು 2009ರ ಜನವರಿಯಲ್ಲಿ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ (ಗ್ಲೋಬಲ್ ಇನ್‌ವೆಸ್ಟರ್ ಮೀಟ್) ಆಯೋಜಿಸಲು ನಿರ್ಧರಿಸಲಾಗಿದೆ.

122. ಗಣಿ ಪ್ರದೇಶಗಳಿಗೆ ತಲುಪಲು ರಸ್ತೆಗಳನ್ನು ಅಭಿವೃದ್ಧಿಪಡಿಸಿ ಇಂತಹ ರಸ್ತೆಗಳ ಮೇಲೆ ಚಲಿಸುವ ವಾಹನಗಳಿಂದ ಟೋಲ್ ಫೀ ವಸೂಲು ಮಾಡಲಾಗುವುದು.

123. ಶಿವಮೊಗ್ಗದಲ್ಲಿ ಆಹಾರ ಸಂಸ್ಕರಣ ಪಾರ್ಕ್‌ನ್ನು ಸ್ಥಾಪಿಸಲು ಎರಡು ಕೋಟಿ ರೂ. ಒದಗಿಸಲಾಗಿದೆ. ಇದೇ ಮಾದರಿಯ ಪಾರ್ಕ್‌ಗಳನ್ನು ಮಾಲೂರು, ಬಾಗಲಕೋಟೆ, ಹಿರಿಯೂರು ಮತ್ತು ಜೇವರ್ಗಿಗಳಲ್ಲಿ ಕೂಡ ಸ್ಥಾಪಿಸಲಾಗುವುದು. ಹುಬ್ಬಳ್ಳಿಯಲ್ಲಿ ಆಮದು ಮತ್ತು ರಫ್ತು ಕಛೇರಿಯನ್ನು ಸ್ಥಾಪಿಸಲಾಗುವುದು.

124. ಕರ್ನಾಟಕ ಚರ್ಮ ಕೈಗಾರಿಕೆ ಅಭಿವೃದ್ಧಿ ನಿಗಮಕ್ಕೆ (LIDKAR) ಹೆಚ್ಚಿನ ಬಂಡವಾಳವನ್ನು ನೀಡಿ ಪುನಃಶ್ಚೇತನಗೊಳಿಸಲಾಗುವುದು.

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ

125. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಉದ್ಯಮವು ಬಹುತೇಕವಾಗಿ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲೇ ಕೇಂದ್ರೀಕೃತವಾಗಿದೆ. ಈ ಉದ್ಯಮವು ಬೃಹತ್ ಉದ್ಯೋಗಾವಕಾಶಗಳನ್ನು

ಒದಗಿಸುವ ಸಾಮರ್ಥ್ಯ ಹೊಂದಿದೆ. ಐಟಿ ಮತ್ತು ಬಿಟಿ ಕಂಪನಿಗಳು ರಾಜ್ಯದ ಇತರೆ ಪ್ರದೇಶಗಳಿಗೂ ಹೋಗುವಂತೆ ಉತ್ತೇಜನ ನೀಡುವ ಸಲುವಾಗಿ ಸರ್ಕಾರವು ವಲಯ-1 ಮತ್ತು ವಲಯ-2ರಲ್ಲಿ ಸೇರಿರುವ ತಾಲ್ಲೂಕುಗಳಲ್ಲಿ ಸ್ಥಾಪಿಸುವ ಐಟಿ ಮತ್ತು ಬಿಟಿ ಘಟಕಗಳಿಗೆ ಮುದ್ರಾಂಕ ಶುಲ್ಕದಿಂದ ವಿನಾಯಿತಿ ಮತ್ತು ನೋಂದಣಿ ದರಗಳಲ್ಲಿ ರಿಯಾಯಿತಿ ಹಾಗೂ ಕೈಗಾರಿಕಾ ನೀತಿ 2006-2011ರಲ್ಲಿ ಹೇಳಿರುವಂತೆ ಪರಿವರ್ತನಾ ಶುಲ್ಕ ಮನ್ನಾ ಸೌಲಭ್ಯಗಳನ್ನು ಒದಗಿಸಲಿದೆ.

- ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಕ್ಷೇತ್ರಕ್ಕೆ ಉತ್ತೇಜನ ನೀಡಲು ಐಬಿಎಬಿ ಸಂಸ್ಥೆಗೆ 5 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಬೆಂಗಳೂರಿನಲ್ಲಿ ಬಯೋ-ಐಟಿ ಪಾರ್ಕ್ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು.
- ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಗುಲ್ಬರ್ಗಾ, ಶಿವಮೊಗ್ಗ, ದಾವಣಗೆರೆ, ಮಂಗಳೂರು ಮುಂತಾದ ನಗರಗಳಲ್ಲಿ ಖಾಸಗಿ ಸಹಭಾಗಿತ್ವದೊಡನೆ ಹಾಗೂ ಸರ್ಕಾರಿ ಸಂಸ್ಥೆಯಾದ ಕೆಐಡಿಬಿ ಜೊತೆಗೂಡಿ ಐಟಿ ಬಿಟಿ ಪಾರ್ಕ್‌ಗಳನ್ನು ಸ್ಥಾಪಿಸಲು ಉದ್ದೇಶಿಸಿದೆ. ಕಿಯೋನಿಕ್ಸ್ ಸಂಸ್ಥೆಯು ಈ ಸಂಬಂಧ ಸೂಕ್ತ ಕ್ರಮಗಳನ್ನು ಆರಂಭಿಸಲಿದ್ದು. ಈ ಉದ್ದೇಶಕ್ಕಾಗಿ 10 ಕೋಟಿ ರೂ.ಗಳ ಬಂಡವಾಳವನ್ನು ಒದಗಿಸಲಾಗಿದೆ.
- ಹುಬ್ಬಳ್ಳಿಯಲ್ಲಿ 'ಆರ್ಯಭಟ' ಐಟಿ ಪಾರ್ಕ್‌ನ ಅಭಿವೃದ್ಧಿಗಾಗಿ 2 ಕೋಟಿ ರೂ.ಗಳನ್ನು ಒದಗಿಸಲಾಗಿದೆ.
- ಗ್ರಾಮೀಣ ಪ್ರದೇಶಗಳಲ್ಲಿ ಮಾಹಿತಿ ತಂತ್ರಜ್ಞಾನ ಆಧಾರಿತ ಉದ್ಯೋಗಗಳನ್ನು ಸೃಷ್ಟಿಸಲು ಗ್ರಾಮೀಣ ಮಾಹಿತಿ ತಂತ್ರಜ್ಞಾನ ಯೋಜನೆಯನ್ನು ಪ್ರಾರಂಭಿಸಲಾಗುವುದು. ಇದರಿಂದ ಗ್ರಾಮೀಣ ಕೇಂದ್ರಗಳಲ್ಲಿ ಬಿಪಿಓ ಸೇವೆಗಳನ್ನು ಪ್ರಾರಂಭಿಸಲು 5 ಕೋಟಿ ರೂ.ಗಳನ್ನು ನೀಡಲಾಗುವುದು.

ಮಾಹಿತಿ ತಂತ್ರಜ್ಞಾನದ ಮೂಲಕ ಆರ್ಥಿಕ ಸೇವೆಗಳು

126. ಅಲ್ಪ ವೆಚ್ಚದಲ್ಲಿ ಹಣಕಾಸು ಸೇವೆಗಳನ್ನು ಒದಗಿಸುವುದು ಅಭಿವೃದ್ಧಿಗೆ ಪೂರಕವಾಗಿರುತ್ತದೆ. ರಾಜ್ಯಸರ್ಕಾರ ಮತ್ತು ಬ್ಯಾಂಕುಗಳು ಮಾಹಿತಿ ತಂತ್ರಜ್ಞಾನವನ್ನು ಬಳಸಿ ಆರ್ಥಿಕ ಸೇವೆಗಳ ವ್ಯಾಪ್ತಿಯನ್ನು ವಿಸ್ತರಿಸುವ ಕಾರ್ಯವನ್ನು ಬಳ್ಳಾರಿ, ಚಿತ್ರದುರ್ಗ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಕೈಗೆತ್ತಿಕೊಳ್ಳಲಿವೆ. ಈ ಯೋಜನೆಯಲ್ಲಿ ಸಾಮಾಜಿಕ ಸುರಕ್ಷಾ ಪಿಂಚಣಿಗಳು, ರಾಷ್ಟ್ರೀಯ ಉದ್ಯೋಗ ಖಾತರಿ ಕಾರ್ಯಕ್ರಮದ ಅಡಿಯಲ್ಲಿ ವಿತರಿಸುವ ಕೂಲಿ ಹಣವನ್ನು ಸ್ಮಾರ್ಟ್‌ಕಾರ್ಡ್ ಬಳಸಿ ವಿತರಿಸಲು ಉದ್ದೇಶಿಸಲಾಗಿದೆ. ಇದರಿಂದಾಗಿ ಸುಮಾರು ಆರು ಲಕ್ಷ ಮಂದಿ ಫಲಾನುಭವಿಗಳು ತಮ್ಮ ಪಾಲಿನ ಹಣವನ್ನು ದಕ್ಷತೆಯಿಂದ ಸುರಕ್ಷಿತವಾಗಿ ಮತ್ತು ಸುಲಭ ವೆಚ್ಚದಲ್ಲಿ ಪಡೆಯಲಿದ್ದಾರೆ.

ಸಮಗ್ರ ಸೇವಾ ಸೈಬರ್ ಕೇಂದ್ರಗಳು

127. ಮಾಹಿತಿ ತಂತ್ರಜ್ಞಾನದ ಫಲಗಳು ಇನ್ನೂ ಸಮರ್ಥವಾಗಿ ಗ್ರಾಮೀಣ ಪ್ರದೇಶಕ್ಕೆ ತಲುಪಬೇಕಾಗಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಗ್ರಾಮೀಣ ಪ್ರದೇಶದಲ್ಲಿ ಪ್ರತಿ ಗ್ರಾಮ ಪಂಚಾಯಿತಿಗೆ ಒಂದರಂತೆ ಸುಮಾರು 5,000 ಸೈಬರ್ ಕೇಂದ್ರಗಳನ್ನು ಖಾಸಗಿ ಸಹಭಾಗಿತ್ವದೊಡನೆ ತೆರೆಯಲು ನೆರವು ನೀಡಲಿದೆ. ಈ ಕೇಂದ್ರಗಳು ಸರ್ಕಾರದಿಂದ ನಾಗರೀಕರಿಗೆ ದೊರೆಯುವ ಸೇವಾ ಸೌಲಭ್ಯಗಳನ್ನು ಹಾಗೆಯೇ ವಾಣಿಜ್ಯ ವಲಯದಿಂದ ನಾಗರೀಕರಿಗೆ ದೊರೆಯುವ ಸೌಲಭ್ಯಗಳನ್ನು ಸುಲಭ ದರದಲ್ಲಿ ಒದಗಿಸಲಿವೆ.

128. ಈ ಸೈಬರ್ ಕೇಂದ್ರಗಳ ಸ್ಥಾಪನೆಯಿಂದಾಗಿ ಗ್ರಾಮೀಣ ಪ್ರದೇಶದ ಜನರು ಸರ್ಕಾರಕ್ಕೆ ಸಂಬಂಧಿಸಿದ ವಿವಿಧ ಸೇವಾ ಸೌಲಭ್ಯಗಳನ್ನು ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಿಗೆ ಹೋಗಿ ಪಡೆಯುವ ಬದಲಿಗೆ ತಮ್ಮ ಹಳ್ಳಿಯಲ್ಲಿಯೇ ಪಡೆದುಕೊಳ್ಳಬಹುದಾಗಿದೆ.

ಉದ್ಯೋಗ ಮತ್ತು ತರಬೇತಿ

129. ಕೈಗಾರಿಕಾ ವಲಯಕ್ಕೆ ನುರಿತ ಮತ್ತು ಅನುಭವಿ ಮಾನವ ಸಂಪನ್ಮೂಲ ಲಭ್ಯವಾಗುವಂತೆ ತರಬೇತಿ ನೀಡುವ ಸಮಗ್ರ ಯೋಜನೆಯನ್ನು ಜಾರಿಗೆ ತರಲಾಗುವುದು.

130. ಪ್ರಸ್ತುತ ಐಟಿಐ ಕೇಂದ್ರಗಳನ್ನು ಹೊಂದಿಲ್ಲದಿರುವ 9 ತಾಲ್ಲೂಕುಗಳಲ್ಲಿ ಹೊಸದಾಗಿ ಐಟಿಐಗಳನ್ನು ಆರಂಭಿಸಲಾಗುವುದು. ಹಿಂದಿನ ವರ್ಷ ಆರಂಭವಾಗಿರುವ, ಹೊಸ ಐಟಿಐಗಳ ಕಟ್ಟಡ ನಿರ್ಮಾಣ, ಉಪಕರಣಗಳು ಮತ್ತು ಇತರ ಮೂಲ ಸೌಕರ್ಯಗಳ ಅಭಿವೃದ್ಧಿಗಾಗಿ 20 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ.

131. ಹತ್ತು ಲಕ್ಷ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಅನುಕೂಲವಾಗುವಂತೆ ಯುವ ಸಮೂಹದಲ್ಲಿ ಕೌಶಲ್ಯ ಹೆಚ್ಚಿಸಲು **'ಕೌಶಲ್ಯ ಆಯೋಗ'** ರಚಿಸಲಾಗುವುದು. ಇದರ ಮೂಲಕ ಈ ವರ್ಷದಲ್ಲಿ ಒಂದು ಲಕ್ಷ ಜನರಿಗೆ ತರಬೇತಿ ನೀಡಿ ಉದ್ಯೋಗ ಒದಗಿಸಲಾಗುವುದು.

ಕಣ್ಣೋ ಹಿಗ್ಗಿನಾ ಗೂಡು

ಮಣ್ಣೋ ಸುಗ್ಗಿಯಾ ಬೀಡು

ದುಡಿವುವೋ ಎಲ್ಲ ಕೈ ಎಲ್ಲಿ

ಬಿಡುಗಡೆಯು ಹಾಡುತಿದೆ ಅಲ್ಲಿ

ಕವಿ ಎನ್. ಎಸ್. ಲಕ್ಷ್ಮೀನಾರಾಯಣ ಭಟ್‌ರ ಈ ಕವನದಲ್ಲಿನ ಆಶಯದಂತೆ ದುಡಿಯುವವರ ಕೌಶಲ್ಯ ಹೆಚ್ಚಿಸಿ ಅವರನ್ನು ಮತ್ತಷ್ಟು ಸಮರ್ಥರನ್ನಾಗಿಸಲು ನಮ್ಮ ಸರ್ಕಾರ ಬದ್ಧವಾಗಿದೆ.

132. ವೃತ್ತಿ ಶಿಕ್ಷಣ ತರಬೇತಿ ಕೋರ್ಸುಗಳನ್ನು ಉದ್ಯೋಗ ಮತ್ತು ತರಬೇತಿ ಇಲಾಖೆಗೆ ವರ್ಗಾವಣೆ ಮಾಡಲಾಗುವುದು.

133. ಬೀಡಿ ಕಾರ್ಮಿಕರಿಗೆ, ದರ್ಜಿಗಳಿಗೆ ಮತ್ತು ಇತರೆ ಅಸಂಘಟಿತ ಕಾರ್ಮಿಕರಿಗೆ ಕಲ್ಯಾಣ ನಿಧಿ ಸ್ಥಾಪಿಸಲು ಹಾಗೂ ದಿನಗೂಲಿ ನೌಕರರಿಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ವೇತನ ನೀಡಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

134. ಅಸಂಘಟಿತ ಕಾರ್ಮಿಕರಾದ ದರ್ಜಿಗಳು, ಬೀಡಿ ಕಾರ್ಮಿಕರು ಹಾಗೂ ಮತ್ತಿತರ ಕಾರ್ಮಿಕರ ಕಲ್ಯಾಣಕ್ಕಾಗಿ 5 ಕೋಟಿ ರೂ.ಗಳ ವಿಶೇಷ ನೆರವನ್ನು ಒದಗಿಸಲಾಗುವುದು.

ಕಂದಾಯ

135. ಬೆಲೆ ಬಾಳುವ ಸರ್ಕಾರಿ ಜಮೀನುಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕವಾಗಿ ವಿಲೇ ಮಾಡಿ ಅದರಿಂದ ದೊರೆಯುವ ಸಂಪನ್ಮೂಲಗಳನ್ನು ಸಂಗ್ರಹಿಸಲು **'ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ'** ಸ್ಥಾಪಿಸಲಾಗುವುದು. 2008-09ನೇ ಸಾಲಿನಲ್ಲಿ ಬೆಂಗಳೂರು ನಗರ ಹಾಗೂ ನಗರದ ಸುತ್ತ ಮುತ್ತ ಲಭ್ಯವಿರುವ ಸರ್ಕಾರಿ ಜಮೀನುಗಳ ವಿಲೇವಾರಿಯಿಂದ ಸುಮಾರು, 3,000 ಕೋಟಿ ರೂ.ಗಳನ್ನು ಸಂಗ್ರಹಿಸಲು ಉದ್ದೇಶಿಸಲಾಗಿದೆ.

136. GIS ಆಧಾರಿತ ಭೂ ಮರುಉಪಯೋಗ ಸಮೀಕ್ಷೆಯನ್ನು ಖಾಸಗಿ ಸಹಭಾಗಿತ್ವದಿಂದ ಪ್ರಾಯೋಗಿಕ ಯೋಜನೆಯಾಗಿ 2 ಜಿಲ್ಲೆಗಳಲ್ಲಿ ಜಾರಿಗೊಳಿಸಲಾಗುವುದು.

137. ತಾಲ್ಲೂಕುಗಳ ಪುನರ್ ರಚನಾ ಸಮಿತಿಯ ಶಿಫಾರಸ್ಸಿನ ಮೇರೆಗೆ ನೂತನ ತಾಲ್ಲೂಕುಗಳನ್ನು ರಚಿಸಲಾಗುವುದು. ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗುವುದು.

138. ವಕ್ಫ್ ಮತ್ತು ಮುಜರಾಯಿ ಇಲಾಖೆಗಳಲ್ಲಿನ ಆಸ್ತಿಗಳ ವಾಸ್ತವಿಕ ಪರಿಸ್ಥಿತಿಯ ಸಮೀಕ್ಷೆ ಮತ್ತು ಸಮರ್ಪಕ ಉಪಯೋಗಕ್ಕಾಗಿ ಒಂದು ಸಮಿತಿಯನ್ನು ರಚಿಸಲಾಗುವುದು.

139. ವೃದ್ಧರು, ಅಂಗವಿಕಲರು ಮತ್ತು ಅಸಹಾಯಕ ವಿಧವೆಯರಿಗೆ ಸಾಮಾಜಿಕ ರಕ್ಷಣೆ ನೀಡುವುದು ಸರ್ಕಾರದ ಆದ್ಯತೆಯಾಗಿದೆ. ಕಳೆದ ವರ್ಷ **'ಸಂಧ್ಯಾ ಸುರಕ್ಷಾ'** ಯೋಜನೆಗೆ ಚಾಲನೆ ನೀಡಲಾಗಿತ್ತು. 65 ವರ್ಷ ಮೇಲ್ಪಟ್ಟ ಬಡಜನರಿಗೆ ಆರ್ಥಿಕ ಸದೃಢತೆ ನೀಡುವ ಈ ಯೋಜನೆಯ ಯಶಸ್ವಿ ಅನುಷ್ಠಾನ ಮತ್ತು ಸಮರ್ಪಕ ಜಾರಿಗಾಗಿ ಸರ್ಕಾರ ವಿಶೇಷ ಒತ್ತು ನೀಡಲಿದೆ.

ತತ್ಕಾಲ್ ಪೋಡಿ ಯೋಜನೆ

140. 'ಭೂಮಿ' ಯೋಜನೆಯಡಿ ಭೂದಾಖಲೆಗಳನ್ನು ಗಣಕೀಕರಿಸಿರುವ ಕಾರ್ಯಕ್ಕಾಗಿ ರಾಜ್ಯದ ಕಂದಾಯ ಇಲಾಖೆಯು ಸಾಕಷ್ಟು ಪ್ರಶಂಸೆ ಗಳಿಸಿದೆ. ಕಂದಾಯ ಇಲಾಖೆಯು ಇದೇ ಹಾದಿಯಲ್ಲಿ ಮುಂದುವರಿದು ರೈತಸ್ನೇಹಿಯಾದ **'ತತ್ಕಾಲ್ ಪೋಡಿ'** ಎನ್ನುವ ಇನ್ನೊಂದು ಯೋಜನೆಯನ್ನು ಜಾರಿಗೊಳಿಸಲು ಉದ್ದೇಶಿಸಿದೆ. ಈ ಯೋಜನೆಯಡಿ ರೈತರಿಂದ ನಿಗದಿತ ಶುಲ್ಕದೊಡನೆ ಸ್ವೀಕೃತವಾಗುವ ಪೋಡಿ ಅರ್ಜಿಗಳನ್ನು ಒಂದು ತಿಂಗಳಿನ ಒಳಗೆ ಮೋಜಣಿ ಮಾಡಿ ಪೋಡಿ ದಾಖಲೆಗಳನ್ನು ಒದಗಿಸಲಾಗುವುದು.

ಮುಜರಾಯಿ

141. ಆರಾಧನಾ ಮತ್ತು ಸಂಬಂಧಿತ ಯೋಜನೆಯಡಿ ಧಾರ್ಮಿಕ ಮತ್ತು ದತ್ತಿ ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ 2008-09ನೇ ಸಾಲಿನಲ್ಲಿ 29 ಕೋಟಿ ರೂ.ಗಳನ್ನು ಮೀಸಲಿಡಲು ಸರ್ಕಾರ ನಿರ್ಧರಿಸಿದೆ.

142. ತಿರುಪತಿಗೆ ತೆರಳುವ ಕರ್ನಾಟಕದ ಯಾತ್ರಾರ್ಥಿಗಳಿಗೆ ಒದಗಿಸುವ ವಸತಿ ಸೌಲಭ್ಯವನ್ನು ಸುಧಾರಿಸಲು 3 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಇದರ ಜೊತೆಗೆ ದಾನಿಗಳಿಂದ ಬರುವ ಹಣದಿಂದ ಹೆಚ್ಚುವರಿ ಕೊಠಡಿಗಳನ್ನು ಕಟ್ಟಲು ಉದ್ದೇಶಿಸಲಾಗಿದೆ.

143. ಮಾನಸ ಸರೋವರ ಯಾತ್ರೆಗಾಗಿ ನಿಗದಿಪಡಿಸಿರುವ ಮೊತ್ತವನ್ನು 1.75 ಕೋಟಿ ರೂ.ಗಳಿಂದ 2.75 ಕೋಟಿ ರೂ.ಗಳಿಗೆ ಹೆಚ್ಚಿಸಲಾಗುವುದು.

ಆಹಾರ

144. ಸಾರ್ವಜನಿಕ ವಿತರಣಾ ವ್ಯವಸ್ಥೆ ಅಡಿಯಲ್ಲಿ ಕೈಗೆಟುಕುವ ಬೆಲೆಯಲ್ಲಿ ಆಹಾರ ಧಾನ್ಯಗಳನ್ನು ವಿತರಿಸಲು ಸರ್ಕಾರವು ಬದ್ಧವಾಗಿದೆ. ಕಳೆದ ವರ್ಷ ಬಿಪಿಎಲ್ ಕಾರ್ಡುಗಳಿಗಾಗಿ ಸ್ವೀಕರಿಸಿರುವ ಅರ್ಜಿಗಳನ್ನು ಶೀಘ್ರವೇ ಇತ್ಯರ್ಥಗೊಳಿಸಲಾಗುವುದು. ಇದೇ ಸಮಯದಲ್ಲಿ ಅನರ್ಹ ಹಾಗೂ ನಕಲಿ ಕಾರ್ಡುದಾರರನ್ನು ಪತ್ತೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

145. ಕಾನೂನು ಮಾಪನ ಇಲಾಖೆಯನ್ನು ಪುನರ್‌ಸಂಘಟಿಸಿ ಗ್ರಾಹಕರ ಸಂರಕ್ಷಣ ಇಲಾಖೆ ಎಂದು ಹೆಸರಿಸಿ ಹಲವಾರು ಚಟುವಟಿಕೆಗಳ ಮೂಲಕ ಅದರ ಪ್ರಾಮುಖ್ಯತೆಯನ್ನು ಹೆಚ್ಚಿಸಲಾಗುವುದು.

ಗೃಹ ಇಲಾಖೆ

146. ರಾಜ್ಯವನ್ನು ಅಪರಾಧ ಹಾಗೂ ಭಯೋತ್ಪಾದನೆಯಿಂದ ಮುಕ್ತಗೊಳಿಸುವುದು ನಮ್ಮ ಸರ್ಕಾರದ ಆದ್ಯತೆಯಾಗಿದೆ. ಪೊಲೀಸು ಪಡೆಯ ಆಧುನೀಕರಣಕ್ಕಾಗಿ 97 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಪೊಲೀಸರ ಕುಟುಂಬಗಳಿಗಾಗಿ 45 ಕೋಟಿ ರೂ.ಗಳ ವೆಚ್ಚದಲ್ಲಿ ವಸತಿ ಸಮುಚ್ಛಯಗಳನ್ನು ನಿರ್ಮಿಸಲಾಗುವುದು. ಹಾಗೆಯೇ ಪೊಲೀಸು ವಸತಿ ಸಮುಚ್ಛಯಗಳ ವಿಶೇಷ ದುರಸ್ತಿಗಾಗಿ 10 ಕೋಟಿ ರೂ.ಗಳನ್ನು ಒದಗಿಸಿದೆ. ಇಲಾಖೆಯಲ್ಲಿನ ಗಣಕೀಕರಣ ಮತ್ತು ನಿರ್ವಹಣೆಗಾಗಿ ಆರು ಕೋಟಿ ರೂ.ಗಳನ್ನು ಒದಗಿಸಿದೆ.

147. ಬೆಂಗಳೂರಿನ ಸುಗಮ ಸಂಚಾರ ವ್ಯವಸ್ಥೆಗಾಗಿ 25 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಸುಸಜ್ಜಿತ ಭಯೋತ್ಪಾದಕ ನಿಗ್ರಹ ಪಡೆಯು ಬೆಂಗಳೂರಿನಲ್ಲಿ ಕಾರ್ಯಾರಂಭ ಮಾಡಲಿದೆ. ಹೊಸ ಅಗ್ನಿಶಾಮಕ ಠಾಣೆ ಮತ್ತು ಸಿಬ್ಬಂದಿ ವರ್ಗದವರ ವಸತಿ ಸಮುಚ್ಛಯಗಳಿಗಾಗಿ 35 ಕೋಟಿ ರೂ.ಗಳನ್ನು ನಿಗದಿ ಮಾಡಲಾಗಿದೆ. ಕರಾವಳಿ ಪ್ರದೇಶಗಳಲ್ಲಿ ಭದ್ರತೆಗಾಗಿ 2 ಕೋಟಿ ರೂ.ಗಳನ್ನು ಮೀಸಲಿಡಲಾಗುವುದು.

ಸಾರಿಗೆ

148. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳು ತಮ್ಮಲ್ಲಿರುವ ಬಸ್ಸುಗಳ ಜೊತೆಗೆ ಪ್ರಸಕ್ತ ವರ್ಷದಲ್ಲಿ 3500ರಷ್ಟು ಬಸ್ಸುಗಳನ್ನು ಸೇರಿಸಿಕೊಳ್ಳಲಿದ್ದಾರೆ. ಇದಕ್ಕಾಗಿ 549 ಕೋಟಿ ರೂ.ಗಳನ್ನು ಈ ಸಂಸ್ಥೆಗಳು ವೆಚ್ಚ ಮಾಡಲಿವೆ. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಬೆಂಬಲ ಒದಗಿಸಲು ಸರ್ಕಾರದಿಂದ 50 ಕೋಟಿ ರೂ.ಗಳನ್ನು ನೀಡಲಾಗುತ್ತಿದೆ.

149. ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ಸುಗಳಲ್ಲಿ ಪ್ರಯಾಣಿಸುವ 65 ವರ್ಷ ತುಂಬಿದ ಹಿರಿಯ ಎಲ್ಲಾ ನಾಗರೀಕರಿಗೂ ಪ್ರಯಾಣ ದರದಲ್ಲಿ ಶೇ. 25ರ ರಿಯಾಯಿತಿಯನ್ನು ನೀಡಲಾಗುವುದು.

150. ತರಬೇತಿ ಹೊಂದಿದ ಭಾರೀ ವಾಹನ ಚಾಲಕರ ಕೊರತೆಯನ್ನು ನಿವಾರಿಸಲು ಐದು ಕೋಟಿ ರೂ.ಗಳ ವೆಚ್ಚದಲ್ಲಿ ಭಾರೀ ವಾಹನಗಳ ನಾಲ್ಕು ಚಾಲನಾ ತರಬೇತಿ ಕೇಂದ್ರಗಳನ್ನು ಪ್ರತೀ ಕಂದಾಯ ವಿಭಾಗದಲ್ಲಿ ಸ್ಥಾಪಿಸಲಾಗುವುದು. ಮೈಸೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಮತ್ತು ಬಳ್ಳಾರಿಗಳಲ್ಲಿ ಖಾಸಗಿ-ಸಾರ್ವಜನಿಕ ಸಹಭಾಗಿತ್ವದಲ್ಲಿ ಟ್ರಕ್ ನಿಲ್ದಾಣಗಳನ್ನು ನಿರ್ಮಿಸಲಾಗುವುದು.

ಕನ್ನಡ ಮತ್ತು ಸಂಸ್ಕೃತಿ

151. ಕನ್ನಡ ಭಾಷೆಯ ಹಿರಿಮೆಯನ್ನು ರಕ್ಷಿಸಲು ಮತ್ತು ಬೆಳೆಸಲು ಸರ್ಕಾರವು ಕಂಕಣಬದ್ಧವಾಗಿದೆ. ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನವನ್ನು ಅಧಿಕೃತವಾಗಿ ಒದಗಿಸಬೇಕೆಂದು ಈಗಾಗಲೇ ಕೇಂದ್ರ ಸರ್ಕಾರವನ್ನು ನಾವು ಒತ್ತಾಯಿಸಿದ್ದೇವೆ. ಈ ವಿಷಯದಲ್ಲಿ ನಮ್ಮ ಪ್ರಯತ್ನವನ್ನು ಮುಂದುವರಿಸುವುದಲ್ಲದೆ, ಕನ್ನಡದ ವಾಙ್ಮಯ ಮತ್ತು ಸಂಸ್ಕೃತಿಯ ಅಭಿವೃದ್ಧಿಗಾಗಿ ಈ ಸಾಲಿನಲ್ಲಿ ಹಲವು ವಿಶೇಷ ಕಾರ್ಯಕ್ರಮಗಳನ್ನು ಕೈಗೊಳ್ಳಲಿದ್ದೇವೆ. ಇದಕ್ಕಾಗಿ ಪ್ರಸ್ತುತ ಆಯವ್ಯಯದಲ್ಲಿ 184 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

- ಬೆಳಗಾವಿಯಲ್ಲಿ ಪ್ರಸಕ್ತ ವರ್ಷ ವಿಶ್ವ ಕನ್ನಡ ಸಮ್ಮೇಳನವನ್ನು ಆಯೋಜಿಸಲು 25 ಕೋಟಿ ರೂ.ಗಳನ್ನು ಒದಗಿಸಲಾಗುವುದು.
- ಬೆಂಗಳೂರಿನಲ್ಲಿ ಅನಿವಾಸಿ ಕನ್ನಡಿಗರಿಗೆ ಅಗತ್ಯ ಮಾಹಿತಿ ಮತ್ತು ಸಹಕಾರವನ್ನು ಒದಗಿಸಿಕೊಡಲು ಅನಿವಾಸಿ ಕನ್ನಡಿಗರ ಕೋಶವನ್ನು (ಎನ್‌ಆರ್‌ಐ ಸೆಲ್) ಸ್ಥಾಪಿಸಲಾಗುವುದು.
- ಕನ್ನಡ ಪರಂಪರೆ ಹಾಗೂ ಸಂಸ್ಕೃತಿಯನ್ನು ಬಿಂಬಿಸುವ ಒಂದು ಉತ್ತಮ ವಸ್ತುಸಂಗ್ರಹಾಲಯವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು 5 ಕೋಟಿ ರೂ.ಗಳನ್ನು ಒದಗಿಸಲಾಗುವುದು.
- ಗಡಿನಾಡಿನ ಮುಖ್ಯ ಕೇಂದ್ರಗಳಲ್ಲಿಕನ್ನಡ ಸಾಂಸ್ಕೃತಿಕ ಭವನಗಳನ್ನು ನಿರ್ಮಿಸಲು 5 ಕೋಟಿ ರೂ.ಗಳನ್ನು ಒದಗಿಸಲಾಗುವುದು.
- ಕನ್ನಡ ಭಾಷೆ, ಕಲೆ ಮತ್ತು ಸಂಸ್ಕೃತಿಗೆ ದಿವಂಗತ ಡಾ|| ರಾಜ್‌ಕುಮಾರ್ ಅವರು ನೀಡಿರುವ ಕೊಡುಗೆ ಅಪಾರ ಹಾಗೂ ಅವಿಸ್ಮರಣೀಯ. ಹೊಸ ತಲೆಮಾರಿನವರಿಗೆ ಪ್ರೇರಕ ಶಕ್ತಿಯಾಗುವಂತೆ ಅವರ ಸ್ಮಾರಕವನ್ನು ಬೆಂಗಳೂರಿನಲ್ಲಿ ನಿರ್ಮಿಸಲು 5 ಕೋಟಿ ರೂ.ಗಳನ್ನು ಒದಗಿಸಲಾಗುವುದು.

- ಪ್ರತಿವರ್ಷ ಕನ್ನಡದಲ್ಲಿ ಪ್ರಕಟವಾಗುವ ಸುಮಾರು 3500 ಪುಸ್ತಕಗಳ ಪ್ರತಿಗಳನ್ನು ಗ್ರಂಥಾಲಯಗಳಿಗಾಗಿ ಖರೀದಿಸಲು 5 ಕೋಟಿ ರೂ.ಗಳನ್ನು ಮೀಸಲಿಡಲಾಗುವುದು. ಕನ್ನಡ ಸಾಹಿತ್ಯ ಕೃತಿಗಳನ್ನು ಇತರ ಭಾರತೀಯ ಹಾಗೂ ವಿದೇಶಿ ಭಾಷೆಗಳಿಗೆ ಭಾಷಾಂತರಿಸಿ ಪ್ರಕಟಿಸಲು 1ಕೋಟಿ ರೂ.ಗಳನ್ನು ಒದಗಿಸಲಾಗುವುದು.
- ಹಳೆ ಮೈಸೂರು ರಾಜ್ಯ ಮತ್ತು ರಾಜ್ಯದ ಇತರ ಸಂಸ್ಥಾನ ಆಡಳಿತಗಳಿಗೆ ಸಂಬಂಧಿಸಿದ ಐತಿಹಾಸಿಕ ದಾಖಲೆಗಳನ್ನು ಹಾಗೂ ಗ್ರಂಥಗಳನ್ನು ಪ್ರಾಚ್ಯವಸ್ತು ಇಲಾಖೆಯ ಮೂಲಕ ಪ್ರಕಟಿಸಲಾಗುವುದು. ಕನ್ನಡ ತಂತ್ರಾಂಶದ ಅಭಿವೃದ್ಧಿಗಾಗಿ 1 ಕೋಟಿ ರೂ.ಗಳನ್ನು ಒದಗಿಸಲಾಗುವದು.
- ಚಿತ್ರದುರ್ಗದಲ್ಲಿ ಈ ಬಾರಿ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನಕ್ಕಾಗಿ 1 ಕೋಟಿ ರೂ. ಮತ್ತು ಅಲ್ಲಮಪ್ರಭು ಸಾಹಿತ್ಯ ಸಂಶೋಧನ ಕೇಂದ್ರ ಸ್ಥಾಪನೆಗೆ 1 ಕೋಟಿ ರೂ. ಅನುದಾನ ನೀಡಲಾಗುವುದು.
- ಶಿಶುನಾಳ ಷರೀಫ್ ಶಿವಯೋಗಿಯವರ ಸಮಾಧಿ ಕೇಂದ್ರದ ಅಭಿವೃದ್ಧಿಗೆ, ಸಂಗೊಳ್ಳಿ ರಾಯಣ್ಣನವರ ಜನ್ಮ ಸ್ಥಳದ ಅಭಿವೃದ್ಧಿಗೆ, ಕನಕದಾಸರ ಜನ್ಮಸ್ಥಳ ಹಾವೇರಿ ಜಿಲ್ಲೆಯ ಬಾಡ ಗ್ರಾಮದ ಅಭಿವೃದ್ಧಿಗೆ, ಪೂರ್ಣಚಂದ್ರ ತೇಜಸ್ವಿ ಸಂಶೋಧನಾ ಕೇಂದ್ರಕ್ಕೆ ತಲಾ 1 ಕೋಟಿ ರೂ.ಗಳನ್ನು ನೀಡಲಾಗುವುದು.
- ಗಾನಯೋಗಿ ಪಂಚಾಕ್ಷರಿ ಗವಾಯಿಗಳ ಮಠದ ವಿವಿಧ ಶೈಕ್ಷಣಿಕ ದಾಸೋಹ ಕಾರ್ಯಕ್ರಮಗಳಿಗಾಗಿ 3 ಕೋಟಿ ರೂ.ಗಳನ್ನು ನೀಡಲಾಗುವುದು.
- ಮೈಸೂರಿನಲ್ಲಿ ಸ್ವಾಮಿ ವಿವೇಕಾನಂದರು ಪರಿವ್ರಾಜಕ ಸನ್ಯಾಸಿಗಳಾಗಿ 1892 ರಲ್ಲಿ ತಂಗಿದ್ದ ನಿರಂಜನ ಮಠದ ಸರ್ಕಾರಿ ಕಟ್ಟಡದ ಪುನರ್‌ನಿರ್ಮಾಣ ಮಾಡಿ ಅಲ್ಲಿ ಸಾಂಸ್ಕೃತಿಕ ಯುವ ಕೇಂದ್ರವೊಂದನ್ನು ತೆರೆಯಲು 5 ಕೋಟಿ ರೂ.ಗಳನ್ನು ಒದಗಿಸಲಾಗುವುದು.
- ಶತಮಾನದ ಭವ್ಯ ಪರಂಪರೆಯುಳ್ಳ ಹಾಗೂ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವವನ್ನು ಸಂಭ್ರಮ ಮತ್ತು ಸಡಗರಗಳಿಂದ ನಾಡ ಹಬ್ಬವಾಗಿ ಆಚರಿಸಲು 10 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.
- ಗುಲ್ಬರ್ಗಾ ನಗರದಲ್ಲಿ ರಂಗಮಂದಿರ ನಿರ್ಮಾಣಕ್ಕಾಗಿ 1 ಕೋಟಿ ರೂ. ಒದಗಿಸಲಾಗುವುದು ಮತ್ತು ದೃಶ್ಯ ಕಲಾ ಕಾಲೇಜಿಗೆ ಸಹಾಯಧನ ನೀಡಲಾಗುವುದು.

ಪ್ರವಾಸೋದ್ಯಮ

152. ರಾಜ್ಯದ ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಮೂಲಭೂತ ಸೌಕರ್ಯಗಳಾದ ಸಾರಿಗೆ ಹಾಗೂ ವಿಮಾನಯಾನ ಸೌಕರ್ಯಗಳನ್ನು ಹೆಚ್ಚಿಸಲು ಪ್ರತ್ಯೇಕವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಖ್ಯಾತ ಪ್ರವಾಸಿ ತಾಣಗಳಿಗೆ ಯಾತ್ರಿಗಳು ಸುಲಭವಾಗಿ ತಲುಪಲು ಉತ್ತಮ ರಸ್ತೆಗಳ ಅಭಿವೃದ್ಧಿ ಅವಶ್ಯಕವಾಗಿದೆ.

ಇದಕ್ಕಾಗಿ ಈ ಸಾಲಿನಲ್ಲಿ 30 ಕೋಟಿ ರೂ.ಗಳನ್ನು ಒದಗಿಸಲಾಗುವುದು. ವಿವಿಧ ಪ್ರವಾಸಿ ಕ್ಷೇತ್ರಗಳಲ್ಲಿ ಅಗತ್ಯವಿರುವ ಪ್ರವಾಸಿ ಸೌಕರ್ಯಗಳಾದ ಹೋಟೆಲ್‌ಗಳು ಮತ್ತು ಇತರ ಸೌಲಭ್ಯಗಳ ನಿರ್ಮಾಣಕ್ಕಾಗಿ ಖಾಸಗಿ ಬಂಡವಾಳವನ್ನು ತೊಡಗಿಸಲು ವಿಶೇಷ ಪ್ರಯತ್ನ ಮಾಡಲಾಗುವುದು.

153. 'ಗುರ್-ತಾ-ಗದ್ದಿ'ಯ 300ನೇ ಸ್ಮರಣೋತ್ಸವದ ಅಂಗವಾಗಿ ಈ ವರ್ಷ ಮಹಾರಾಷ್ಟ್ರದ ನಾಂದೇಡ್‌ನಲ್ಲಿ ಉತ್ಸವವನ್ನು ಆಯೋಜಿಸಲಾಗಿದೆ. ಈ ಸಂದರ್ಭದಲ್ಲಿ ಬೀದರ್‌ನ ಗುರುನಾನಕ್ ಜಿರಾ ಗುರುದ್ವಾರಕ್ಕೆ ಭೇಟಿ ನೀಡುವ ಯಾತ್ರಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗಲಿದೆ. ಈ ಹಿನ್ನೆಲೆಯಲ್ಲಿ ಬೀದರ್ ನಗರದಲ್ಲಿ ನಾಗರಿಕ ಸೇವಾ ಸೌಲಭ್ಯ ಸೇರಿದಂತೆ ಇನ್ನಿತರೆ ಅಗತ್ಯ ಮೂಲ ಸೌಲಭ್ಯಗಳಿಗಾಗಿ 25 ಕೋಟಿ ರೂ.ಗಳ ನೆರವನ್ನು ನೀಡಲಾಗುವುದು.

154. ಮಂಗಳೂರು ಕಾರ್ನಿಷ್ ಸುತ್ತಮುತ್ತಲಿನ ಪ್ರದೇಶದಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಖಾಸಗಿ ಸಹಭಾಗಿತ್ವದೊಂದಿಗೆ ಯೋಜನೆಯನ್ನು ರೂಪಿಸಲಾಗುವುದು.

- ಗುಲ್ಬರ್ಗಾ ಜಿಲ್ಲೆ ಮರ್ತೂರಿನಲ್ಲಿ ವಿಜ್ಞಾನೇಶ್ವರ ಉದ್ಯಾನವನ ಮತ್ತು ಸಾಂಸ್ಕೃತಿಕ ಕೇಂದ್ರವನ್ನು ಸ್ಥಾಪಿಸಲು 1 ಕೋಟಿ ರೂ. ವಿನಿಯೋಗಿಸಲಾಗುವುದು.
- ಮೈಸೂರಿನ ಕುಕ್ಕರಹಳ್ಳಿ ಕೆರೆಯನ್ನು ಅಭಿವೃದ್ಧಿಪಡಿಸಲು 1 ಕೋಟಿ ರೂ. ಅನುದಾನ ನೀಡಲಾಗುವುದು.

ಅರಣ್ಯ ಮತ್ತು ಪರಿಸರ

155. ಅರಣ್ಯ ಮತ್ತು ಪರಿಸರ ವಲಯಕ್ಕೆ 2008-09ನೇ ಸಾಲಿನಲ್ಲಿ 194 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ. ಪಶ್ಚಿಮಘಟ್ಟದಲ್ಲಿರುವ ಮಹತ್ವದ ಸಸ್ಯಸಂಪತ್ತು ಮತ್ತು ವನ್ಯ ಸಂಪತ್ತನ್ನು ಸಂರಕ್ಷಿಸಲು ವಿಶೇಷ ಕಾರ್ಯಪಡೆ ರಚಿಸಲು ಉದ್ದೇಶಿಸಲಾಗಿದೆ.

156. ದೇವರಕಾಡು, ನದಿ, ಕೆರೆ ಮತ್ತು ಪರ್ವತಗಳಲ್ಲಿರುವ ಪ್ರದೇಶಗಳನ್ನು ಗುರುತಿಸಿ ಜೀವವೈವಿಧ್ಯ ಕಾನೂನಿನಡಿಯಲ್ಲಿ ಅವುಗಳನ್ನು ಸಂರಕ್ಷಿಸಿ ನೈಸರ್ಗಿಕ ಪರಂಪರೆ ಪ್ರದೇಶವೆಂದು ಘೋಷಿಸಿ ಪರಿಸರಸ್ನೇಹಿ ಪ್ರವಾಸೋದ್ಯಮವನ್ನಾಗಿ ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ. ನದಿ ಮೂಲಗಳ ಸರಕ್ಷಣೆಗೆ ಒಂದು ವಿಶೇಷ ಯೋಜನೆಯನ್ನು ರೂಪಿಸಲಾಗುವುದು.

157. ಸ್ಥಳೀಯ ಆರೋಗ್ಯ ಪದ್ಧತಿಗಳ ಪುನರುತ್ಥಾನ ಪ್ರತಿಷ್ಠಾನದ ಸಹಯೋಗದೊಂದಿಗೆ ಇಲಾಖೆಯು ರಾಜ್ಯದ ವಿವಿಧೆಡೆಯಲ್ಲಿ 13 ಔಷಧಿಯ ಸಸ್ಯಗಳ ಸಂರಕ್ಷಣೆಗಾಗಿ 2731 ಹೆಕ್ಟೇರ್ ಪ್ರದೇಶವನ್ನು ಅಭಿವೃದ್ಧಿಗೊಳಿಸಲು ನಿರ್ಧರಿಸಿದೆ.

158. ಶ್ರೀಗಂಧ ಬೆಳೆಯುವುದನ್ನು ಉತ್ತೇಜಿಸಲು ಮತ್ತು ಸಂರಕ್ಷಿಸಲು ವಿಶೇಷ ಯೋಜನೆ ಆರಂಭಿಸಲು 2 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

159. ಗ್ರಾಮ ಅರಣ್ಯ ಸಮಿತಿಗಳನ್ನು ಪುನಶ್ಚೇತನಗೊಳಿಸಿ ಕನಿಷ್ಠ 1,000 ಗ್ರಾಮಗಳಿಗೆ ಇವುಗಳನ್ನು ವಿಸ್ತರಿಸುವ ಗುರಿ ಹೊಂದಲಾಗಿದೆ.

160. ಸಾಮಾಜಿಕ ಅರಣ್ಯ ಚಳುವಳಿಗೆ ಮತ್ತಷ್ಟು ಪ್ರಾಮುಖ್ಯತೆ ನೀಡಲು ರಾಜ್ಯಾದ್ಯಂತ ಜಾರಿಗೊಳಿಸಲು ಉದ್ದೇಶಿಸಿರುವ ಸಾಮಾಜಿಕ ಅರಣ್ಯ ಕಾಮಗಾರಿಗೆ ಮೀಸಲಿಟ್ಟಿರುವ ಎನ್‌ಆರ್‌ಇಜಿಪಿ ಅನುದಾನದ ಪೈಕಿ ಅಂದಾಜು 100 ಕೋಟಿ ರೂ.ಗಳನ್ನು ಬಳಕೆ ಮಾಡಲಾಗುವುದು. ಪರಿಸರ ಸಂರಕ್ಷಣೆಗೆ ನೆರವಾಗುವ ನಗರ ಅರಣ್ಯೀಕರಣವನ್ನು ಸಹ ಪ್ರೋತ್ಸಾಹಿಸಲಾಗುವುದು.

ವಾರ್ತಾ ಇಲಾಖೆ

161. ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಮಾಹಿತಿಯನ್ನು ಜನರಿಗೆ ಪರಿಣಾಮಕಾರಿಯಾಗಿ ತಲುಪಿಸಲು ವಾರ್ತಾ ಇಲಾಖೆಯನ್ನು ಬಲಪಡಿಸಲು ಉದ್ದೇಶಿಸಲಾಗಿದ್ದು 2008-09ನೇ ಸಾಲಿನಲ್ಲಿ ಇಲಾಖೆಗೆ ಹೆಚ್ಚುವರಿಯಾಗಿ 10 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

- ಕನ್ನಡದ ಪ್ರಪ್ರಥಮ ವಾಕ್ಚಿತ್ರ ಬಿಡುಗಡೆಯಾಗಿ 75 ವರ್ಷಗಳು ಸಂದಿರುವ ಈ ಸಂದರ್ಭದಲ್ಲಿ ರಾಷ್ಟ್ರ, ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲಿ **'ಕನ್ನಡ ಅಮೃತ ಚಲನಚಿತ್ರೋತ್ಸವ'**ಗಳನ್ನು ಚಿತ್ರೋದ್ಯಮದ ಸಹಯೋಗದೊಂದಿಗೆ ಸಂಘಟಿಸಲಾಗುವುದು.

ಯುವಜನ ಸೇವೆಗಳು

162. ಪ್ರಸಕ್ತ ವರ್ಷದಲ್ಲಿ ನಡೆಯಲಿರುವ ರಾಷ್ಟ್ರೀಯ ಯುವ ಕ್ರೀಡಾ ಕೂಟದ ಆತಿಥ್ಯವನ್ನು ಕರ್ನಾಟಕವು ಮೊತ್ತ ಮೊದಲ ಬಾರಿಗೆ ವಹಿಸಿಕೊಂಡಿದೆ. ಇದಕ್ಕಾಗಿ 5 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

163. ಕ್ರೀಡಾ ಸೌಲಭ್ಯಗಳು ಮತ್ತು ಮಲ್ಟಿ ಜಿಮ್‌ಗಳಿಗಾಗಿ 25 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ರಾಜ್ಯದ ಕ್ರೀಡಾಪಟುಗಳಿಗೆ ವಿಶೇಷ ತರಬೇತಿಗಳನ್ನು ಆಯೋಜಿಸಲು ಮತ್ತು ಕೋಚಿಂಗ್ ನೀಡಲು ಕರ್ನಾಟಕ ಕ್ರೀಡಾ ಅಕಾಡೆಮಿಗೆ ನೀಡಲಾಗುವ ಅನುದಾನವನ್ನು ಹೆಚ್ಚಿಸಲಾಗುವುದು.

164. ಯುವಜನ ಸೇವಾ ಇಲಾಖೆಯು ಕ್ರೀಡಾ ತರಬೇತಿದಾರರಿಗೆ ನೀಡುತ್ತಿರುವ ಮಾಸಿಕ ಸಂಭಾವನೆಯನ್ನು ಗಣನೀಯವಾಗಿ ಹೆಚ್ಚಿಸಲು ಅನುದಾನ ನೀಡಲಾಗುವುದು. ಕ್ರೀಡಾಪಟುಗಳಿಗೆ **'ಯುವ ಸಂಜೀವಿನಿ'** ಎಂಬ ನೂತನ ಯೋಜನೆಯ ಮೂಲಕ ವಿಮೆ ವ್ಯವಸ್ಥೆಯನ್ನು ಕಲ್ಪಿಸಲಾಗುವುದು. ರಾಜ್ಯದ ಯುವಜನಾಂಗದ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸಲು ರಾಜ್ಯ **'ಯುವ ನೀತಿ'**ಯನ್ನು ರಚಿಸಲಾಗುವುದು.

165. ದೊಡ್ಡಬಳ್ಳಾಪುರದ ಬಳಿ ಇರುವ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಕೇಂದ್ರದ ಅಭಿವೃದ್ಧಿಗಾಗಿ 2 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

ಕಾನೂನು

166. ಧಾರವಾಡ ಹಾಗೂ ಗುಲ್ಬರ್ಗಾದಲ್ಲಿ ಸ್ಥಾಪಿಸಿದ ಉಚ್ಚ ನ್ಯಾಯಾಲಯದ ಸಂಚಾರಿ ಪೀಠ ಕಟ್ಟಡಗಳಿಗೆ 50 ಕೋಟಿ ರೂ.ಗಳ ಅನುದಾನವನ್ನು ಕಲ್ಪಿಸಲಾಗಿದೆ. ಅಲ್ಲದೆ ಕಾನೂನು ಮಹಾವಿದ್ಯಾಲಯವನ್ನು ಸ್ಥಾಪಿಸಲು 4 ಕೋಟಿ ರೂ.ಗಳನ್ನು ಭೂಸ್ವಾಧೀನಕ್ಕಾಗಿ ಮೀಸಲಿಡಲಾಗಿದೆ.

ಸರ್ಕಾರಿ ನೌಕರರು

167. ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ ಐದನೇ ವೇತನ ಆಯೋಗದ ಪ್ರಥಮ ಭಾಗದ ಶಿಫಾರಸ್ಸುಗಳನ್ನು ಈಗಾಗಲೇ ಅನುಷ್ಠಾನಗೊಳಿಸಲಾಗಿದೆ. ವೇತನ ಆಯೋಗದ ಎರಡನೇ ಭಾಗದ ಬಹುತೇಕ ಶಿಫಾರಸ್ಸುಗಳನ್ನು ಸಹ ಅನುಷ್ಠಾನಗೊಳಿಸಲು ಸರ್ಕಾರವು ನಿರ್ಧರಿಸಿದೆ. ಇದರಲ್ಲಿ ಶಾಲಾ ಶಿಕ್ಷಕರುಗಳಿಗೆ 6,500 ರೂ.ಗಳ ಹೆಚ್ಚಿನ ವೇತನ ಶ್ರೇಣಿ ನೀಡುವ ಪ್ರಮುಖ ನಿರ್ಧಾರವನ್ನು ಕೈಗೊಳ್ಳುತ್ತಿದ್ದು ಶಿಕ್ಷಕರು ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡಲು ಇದರಿಂದ ಪ್ರೇರಣೆ ಪಡೆಯಲಿದ್ದಾರೆ.

168. ಅನುಭವಿ ಸಿಬ್ಬಂದಿಗಳು ಸರ್ಕಾರಕ್ಕೆ ಆಸ್ತಿಯಾಗಿದ್ದಾರೆ. ಜನರ ಜೀವಿತಾವಧಿಯು ಹೆಚ್ಚಳವಾಗಿರುವುದರ ಜೊತೆಗೆ ಆರೋಗ್ಯ ಸೂಚಕಗಳಲ್ಲಿ ಸುಧಾರಣೆಯಾಗಿರುವುದರಿಂದ ನೌಕರರು ಹೆಚ್ಚಿನ ಅವಧಿಯವರೆಗೆ ಸೇವೆಸಲ್ಲಿಸುವ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಈ ಹಿನ್ನೆಲೆಯಲ್ಲಿ ಸರ್ಕಾರವು ರಾಜ್ಯ ಸರ್ಕಾರಿ ನೌಕರರ ನಿವೃತ್ತಿಯ ವಯಸ್ಸನ್ನು 58 ರಿಂದ 60ಕ್ಕೆ ಹೆಚ್ಚಿಸಲು ನಿರ್ಧರಿಸಿದೆ.

ಆಡಳಿತ ಸುಧಾರಣೆ

169. ಸರ್ಕಾರಿ ವ್ಯವಸ್ಥೆಗೆ ಮತ್ತಷ್ಟು ಪಾರದರ್ಶಕತೆ ಮತ್ತು ದಕ್ಷತೆ ತರುವಲ್ಲಿ ತಂತ್ರಜ್ಞಾನದ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಸ್ಟೇಟ್ ವೈಡ್ ಏರಿಯಾ ನೆಟ್‌ವರ್ಕ್ (State Wide Area Net Work) ಮೂಲಕ ವಿಧಾನಸೌಧ ಮತ್ತು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿರುವ ಕಛೇರಿಗಳ ನಡುವೆ ಸಂಪರ್ಕ ಸಾಧಿಸುವ **'ಮಾಹಿತಿ-ಹೆದ್ದಾರಿ'** ಯನ್ನು ಈ ಸಾಲಿನಲ್ಲಿ ಸ್ಥಾಪಿಸಲಾಗುವುದು.

170. ಗ್ರಾಮೀಣ ಪ್ರದೇಶದಲ್ಲಿರುವ ಜನರ ಕುಂದುಕೊರತೆಗಳನ್ನು ಪರಿಹರಿಸಲು ಅಂತರ್ಜಾಲ ಆಧಾರಿತ ವಿದ್ಯುನ್ಮಾನ ಪರಿಹಾರ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲಾಗುವುದು. ಗ್ರಾಮೀಣ ಜನರು ತಮ್ಮ ದೂರುಗಳನ್ನು ಗ್ರಾಮ ಪಂಚಾಯಿತಿ ಕಛೇರಿ ಅಥವಾ ಯಾವುದೇ ಸೈಬರ್ ಕೆಫೆಗಳಲ್ಲಿ ದಾಖಲಿಸಬಹುದು. ದೂರಿನ ಬಗ್ಗೆ ವಿದ್ಯುನ್ಮಾನ ಮಾಧ್ಯಮಗಳ ಮೂಲಕವೇ ಮಾಹಿತಿ ಪಡೆಯಬಹುದು.

171. **'ಬೆಂಗಳೂರು ಒನ್'** ಸೇವಾ ಕೇಂದ್ರಗಳ ಸಂಖ್ಯೆಯನ್ನು 34 ರಿಂದ 75 ಕ್ಕೆ ಹೆಚ್ಚಿಸಲಾಗುವುದು. ಹುಬ್ಬಳ್ಳಿ, ಬಳ್ಳಾರಿ, ಗುಲ್ಬರ್ಗಾ, ಬೆಳಗಾವಿ, ಶಿವಮೊಗ್ಗ, ಮೈಸೂರು ಮತ್ತು ಮಂಗಳೂರು ನಗರಗಳಲ್ಲಿಯೂ ಸಹ ಇದೇ ಮಾದರಿಯಲ್ಲಿ ಸೇವೆ ನೀಡುವಂತಹ ಕೇಂದ್ರಗಳನ್ನು ಆರಂಭಿಸಲಾಗುವುದು.

172. ಬೆಂಗಳೂರು ಸೇರಿದಂತೆ ಇತರ ಏಳು ಪ್ರಮುಖ ನಗರಗಳಲ್ಲಿನ ಸರ್ವಾಂಗೀಣ ಅಭಿವೃದ್ಧಿಯ

ಬಗ್ಗೆ ಚಿಂತನೆ ಹಾಗೂ ನಿರಂತರ ಪರಿಶೀಲನೆ ನಡೆಸಲು ಮುಖ್ಯಮಂತ್ರಿಗಳ ನೇತೃತ್ವದಲ್ಲಿ ರಾಜ್ಯ ಮಟ್ಟದಲ್ಲಿ ವಿವಿಧ ತಜ್ಞರ ಸಮಿತಿಗಳನ್ನು ರಚಿಸಲು ನಿರ್ಧರಿಸಲಾಗಿದೆ.

173. ಬೆಳಗಾವಿಯಲ್ಲಿ ಸುವರ್ಣ ವಿಧಾನಸೌಧ ನಿರ್ಮಾಣಕ್ಕಾಗಿ ಈ ಹಿಂದೆಯೇ ಅಡಿಗಲ್ಲನ್ನು ಹಾಕಿದ್ದರೂ ನಿರ್ಮಾಣ ಕಾರ್ಯದಲ್ಲಿ ಯಾವುದೇ ಪ್ರಗತಿಯಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸುವರ್ಣ ವಿಧಾನಸೌಧ ನಿರ್ಮಾಣದ ಕಾಮಗಾರಿಗಳನ್ನು ಚುರುಕುಗೊಳಿಸಲು 50 ಕೋಟಿ ರೂ.ಗಳನ್ನು ಒದಗಿಸಲಾಗುತ್ತಿದೆ.

174. ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರದಲ್ಲಿ ನೂತನ ಕಛೇರಿಗಳ ನಿರ್ಮಾಣಕ್ಕಾಗಿ 20 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

ಆರ್ಥಿಕ ಅಭಿವೃದ್ಧಿಗೆ ಕಾರ್ಯತಂತ್ರಗಳು

175. ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡಾ 21 ರಷ್ಟನ್ನು ರಾಜ್ಯ ಸರ್ಕಾರವು ವೆಚ್ಚ ಮಾಡುತ್ತಿದೆ. ಇದರಲ್ಲಿ ಶೇ.15 ರಷ್ಟು ಅಭಿವೃದ್ಧಿ ವೆಚ್ಚವಾಗಿದ್ದು ಯಾವುದೇ ರಾಜ್ಯ ಸರ್ಕಾರಕ್ಕೆ ಹೋಲಿಸಿದರೆ ಇದು ಗರಿಷ್ಠ ಪ್ರಮಾಣದಲ್ಲಿರುತ್ತದೆ. ಅಭಿವೃದ್ಧಿಯೇತರ ವೆಚ್ಚವನ್ನು ನಾವು ಜಾಣ್ಮೆಯಿಂದ ನಿರ್ವಹಿಸಿರುವುದೇ ಇದಕ್ಕೆ ಕಾರಣವಾಗಿದೆ.

176. ಮೂಲ ಸೌಕರ್ಯಗಳ ಅಭಿವೃದ್ಧಿಗೆ ನಾಗರೀಕ ಸೇವೆಗಳನ್ನು ಒದಗಿಸಲು ಮತ್ತು ಮಾನವ ಸಂಪನ್ಮೂಲಗಳಲ್ಲಿ ಹೂಡಿಕೆ ಮಾಡಲು ಒಟ್ಟಾರೆಯಾಗಿ ನಮಗೆ ಅಗತ್ಯವಾಗಿ ಬೇಕಾಗಿರುವ ಹೂಡಿಕೆಯು ರಾಜ್ಯ ಸರ್ಕಾರದ ವಿತ್ತೀಯ ಸಾಮರ್ಥ್ಯವನ್ನು ಮೀರಿ ನಿಂತಿದೆ. ಈ ಹಿನ್ನೆಲೆಯಲ್ಲಿ ಈ ಕೊರತೆಯನ್ನು ತುಂಬುವುದರ ಜೊತೆಗೆ ಖಾಸಗಿಯವರು ಹೂಡಿಕೆ ಮಾಡುವ ಕೆಲವು ಕ್ಷೇತ್ರಗಳನ್ನು ಗುರುತಿಸಬಹುದಾಗಿದೆ. ಏಕೆಂದರೆ ಖಾಸಗಿಯವರು ದಕ್ಷತೆ, ಅರ್ಥಪೂರ್ಣ ಸಾಮರ್ಥ್ಯ ಮತ್ತು ಅಪಾಯವನ್ನು ತಡೆದುಕೊಳ್ಳುವ ಶಕ್ತಿಯಲ್ಲಿ ಸಾರ್ವಜನಿಕ ವಲಯವನ್ನು ಮೀರಿಸುವ ಸಾಮರ್ಥ್ಯವನ್ನು ಹೊಂದಿದ್ದಾರೆ.

177. ಈ ಹಿನ್ನೆಲೆಯಲ್ಲಿ ಅಭಿವೃದ್ಧಿಗೆ ಹಣ ಹೂಡಿಕೆ ನೀತಿಯಲ್ಲಿ ಗಮನಾರ್ಹ ಬದಲಾವಣೆಯ ಅಗತ್ಯವಿದೆ. ಸಾರ್ವಜನಿಕ ಮತ್ತು ಖಾಸಗಿ ಹೂಡಿಕೆಯನ್ನು ಆಯಾ ವಲಯಗಳ ಅನುಭವ ಮತ್ತು ಸಾಮರ್ಥ್ಯಕ್ಕೆ ಅನುಸಾರವಾಗಿ ಹಂಚಿಕೊಳ್ಳುವ ಮಾದರಿಯಲ್ಲಿ ರೂಪಿಸಿಕೊಳ್ಳಬಹುದಾಗಿದೆ. ಇಂತಹ ಖಾಸಗಿ-ಸಾರ್ವಜನಿಕ ಸಹಭಾಗಿತ್ವ ಮಾದರಿಯನ್ನು ಪ್ರೋತ್ಸಾಹಿಸುವ ವಾತಾವರಣ ನಿರ್ಮಿಸಲು ಅಗತ್ಯವಾದ ಸಾಂಸ್ಥಿಕ ಹಾಗೂ ಕಾನೂನು ನಿಯಮಾವಳಿಗಳ ಚೌಕಟ್ಟನ್ನು ಸರ್ಕಾರವು ರೂಪಿಸಿಕೊಡುತ್ತದೆ.

178. ಆರ್ಥಿಕವಾಗಿ ಅನುಕೂಲಕರವಾದ ಆದರೆ ಹಣಕಾಸಿನ ಹೂಡಿಕೆ ದೃಷ್ಟಿಯಿಂದ ಕೆಲವೊಮ್ಮೆ ಲಾಭದಾಯಕವಲ್ಲದಿರುವ ಯೋಜನೆಗಳನ್ನು ಖಾಸಗಿಯವರು ಕೈಗೆತ್ತಿಕೊಳ್ಳಲು ಅಗತ್ಯವಾದ ಬೆಂಬಲವನ್ನು ಸರ್ಕಾರ ನೀಡಲಿದೆ. ಇಂತಹ ಖಾಸಗಿ ಸಾರ್ವಜನಿಕ ಸಹಭಾಗಿತ್ವದ ಯೋಜನೆಗಳಿಗೆ ಸಾರ್ವಜನಿಕರೂ ಸಹ ಸೂಕ್ತ ಬಳಕೆದಾರರ ಶುಲ್ಕ ಪಾವತಿ ಮೂಲಕ ಸಹಕರಿಸಬೇಕಾಗಿದೆ.

ರಾಜ್ಯ ಯೋಜನೆ 2008-09

179. ಈ ಆಯವ್ಯಯದಲ್ಲಿ ರಾಜ್ಯದ ಯೋಜನಾ ಅಂದಾಜು 25,953 ಕೋಟಿ ರೂ.ಗಳಾಗಿದ್ದು (ಅನುಬಂಧ -I) ಇದು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇ. 10ಕ್ಕಿಂತ ಹೆಚ್ಚಾಗಿದೆ. ಇದು 2007-08ನೇ ಸಾಲಿನ ಯೋಜನಾ ವೆಚ್ಚದ ಪರಿಷ್ಕೃತ ಅಂದಾಜುಗಳಿಗಿಂತ ಶೇ. 46 ರಷ್ಟು ಅಧಿಕವಾಗಿದೆ. ಕೃಷಿ ಮತ್ತು ನಗರಾಭಿವೃದ್ಧಿ ವಲಯಗಳಿಗೆ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿರುವುದು ನಮ್ಮ ಸರ್ಕಾರದ ಆದ್ಯತೆಯನ್ನು ಬಿಂಬಿಸಲಿದೆ. ಇದು ನಮ್ಮ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಆದಾಗ್ಯೂ ಈ ಸದನದ ಬೆಂಬಲದೊಂದಿಗೆ ರಾಜ್ಯದ ಜನತೆಗೆ ನೀಡಿರುವ ಅಭಿವೃದ್ಧಿ ಆಶ್ವಾಸನೆಗಳನ್ನು ಈಡೇರಿಸಲು ಅಗತ್ಯವಾದ ಸಂಪನ್ಮೂಲಗಳನ್ನು ಸಂಗ್ರಹಿಸುವ ವಿಶ್ವಾಸ ನನಗಿದೆ.

ತೆರಿಗೆ ಪ್ರಸ್ತಾವನೆಗಳು

180. ರಾಜ್ಯವು ತೀವ್ರಗತಿಯಲ್ಲಿ ಅಭಿವೃದ್ಧಿ ಸಾಧಿಸಲೋಸುಗ ಅನಿವಾರ್ಯವಾಗಿ ಗಣನೀಯವಾಗಿ ಸಂಪನ್ಮೂಲಗಳನ್ನು ಕ್ರೋಢೀಕರಿಸಬೇಕಾಗುತ್ತದೆ. ಕಳೆದ ನಾಲ್ಕು ವರ್ಷಗಳಲ್ಲಿ ಕರ್ನಾಟಕದ ತೆರಿಗೆ ವ್ಯವಸ್ಥೆಯಲ್ಲಿ ಕೈಗೊಂಡ ಪ್ರಗತಿಶೀಲ ಸುಧಾರಣೆಯ ಪರಿಣಾಮವಾಗಿ ರಾಜ್ಯದಲ್ಲಿ ಮೌಲ್ಯವರ್ಧಿತ ತೆರಿಗೆ ಪದ್ಧತಿಯು ಉತ್ತಮವಾಗಿ ವ್ಯವಸ್ಥಿತಗೊಂಡಿರುತ್ತದೆ ಮತ್ತು ಅಂಗೀಕೃತವಾಗಿರುತ್ತದೆ. ರಾಷ್ಟ್ರಾದ್ಯಂತ ಮುಂದಿನ ಎರಡು ವರ್ಷಗಳಲ್ಲಿ ಸರಕು ಮತ್ತು ಸೇವೆಗಳಿಗೆ ಸಮಾನವಾಗಿ ಅನ್ವಯಿಸುವ ಒಂದು ತೆರಿಗೆ ಪದ್ಧತಿಯನ್ನು ಜಾರಿಗೆ ತರುವ ಸಾಧ್ಯತೆಯನ್ನು ರಾಜ್ಯ ಹಣಕಾಸು ಸಚಿವರುಗಳ ಅಧಿಕಾರಯುಕ್ತ ಸಮಿತಿಯಲ್ಲಿ ಈಗ ಗಂಭೀರವಾಗಿ ಪರಿಗಣಿಸಲಾಗುತ್ತಿದೆ. ಕೇಂದ್ರ ಸರ್ಕಾರದಿಂದ ಇತ್ತೀಚೆಗೆ ರಚಿತವಾದ 13ನೇ ಹಣಕಾಸು ಆಯೋಗ, ರಾಷ್ಟ್ರದಲ್ಲಿ ಹಣಕಾಸಿನ ಸಂಯುಕ್ತತೆ ಬಗ್ಗೆ ಈಗಾಗಲೇ ತನ್ನ ಚರ್ಚೆಗಳನ್ನು ಪ್ರಾರಂಭಿಸಿರುತ್ತದೆ. ನಾಗರಿಕರ ಬದುಕಿಗೆ ಸಂಬಂಧಿಸಿದ ಬಹು ಸಂಖ್ಯೆಯ ಸಮಸ್ಯೆಗಳನ್ನು ಪರಿಹರಿಸಬೇಕಾದ ರಾಜ್ಯ ಸರ್ಕಾರಗಳು ಸಾರ್ವಜನಿಕ ಖರ್ಚಿನ ಹೆಚ್ಚಿನ ಹೊರೆಯನ್ನು ಹೊರಬೇಕಾಗುತ್ತದೆ. ಇದರ ಜೊತೆಗೆ ಜನತೆಯ ಜೀವನಮಟ್ಟವನ್ನು ಸುಧಾರಿಸುವ ಹೊಣೆ ಹಾಗೂ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸುವ ಹೊಣೆ ಕೂಡ ರಾಜ್ಯ ಸರ್ಕಾರದ ಮೇಲಿರುತ್ತದೆ. ಈ ಹಿನ್ನೆಲೆಯಲ್ಲಿ ಒಂದಕ್ಕಿಂತ ಹೆಚ್ಚಿನ ಸಂದರ್ಭದಲ್ಲಿ, ರೈತರ ಸಾಲ ಮನ್ನಾ ಮಾಡುವ ಹೊರೆಯನ್ನು ಹೊರಲು, ಬೆಂಗಳೂರಿನಲ್ಲಿ ಮೂಲಭೂತ ಸೌಕರ್ಯಗಳನ್ನು ತೀವ್ರಗತಿಯಲ್ಲಿ ಅಭಿವೃದ್ಧಿಯಾಗುವಂತೆ ಮಾಡಲು ಮತ್ತು ಇತರೆ ಹಲವಾರು ವಿಷಯಗಳ ಬಗ್ಗೆ ರಾಜ್ಯಕ್ಕೆ ಧಾರಾಳವಾಗಿ ಆರ್ಥಿಕ ನೆರವು ನೀಡಲು ನಾನು ಕೇಂದ್ರ ಸರ್ಕಾರವನ್ನು ಕೋರಿರುತ್ತೇನೆ. ಕೇಂದ್ರ ಸರ್ಕಾರದಿಂದ ಹೆಚ್ಚಿನ ಬೆಂಬಲ ಕೋರುವುದರ ಜೊತೆಗೆಯೇ ನಾವು ನಮ್ಮ ಸಂಪನ್ಮೂಲ ಕ್ರೋಢೀಕರಿಸುವ ಇಲಾಖೆಗಳ ದಕ್ಷತೆಯನ್ನು ನಿರಂತರವಾಗಿ ಹೆಚ್ಚಿಸಬೇಕಾಗುತ್ತದೆ ಹಾಗೂ ಹೆಚ್ಚಿನ ಪ್ರಮಾಣದಲ್ಲಿ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಬಗ್ಗೆ ಗಮನ ನೀಡಬೇಕಾಗಿದೆ.

ವಾಣಿಜ್ಯ ತೆರಿಗೆಗಳು :

181. ರಾಜ್ಯದಲ್ಲಿ ಮೌಲ್ಯವರ್ಧಿತ ತೆರಿಗೆ ಮೂಲದಿಂದ ಬರುವ ಸಂಪನ್ಮೂಲಗಳು ಸದೃಢ ಬೆಳವಣಿಗೆಯ ಲಕ್ಷಣವನ್ನು ತೋರಿದರೂ ಕೂಡ, ಕೇಂದ್ರ ಮಾರಾಟ ತೆರಿಗೆಯನ್ನು ಶೇಕಡ 4 ರಿಂದ ಪ್ರಸ್ತುತ ಶೇಕಡ 2ಕ್ಕೆ ಇಳಿಸಿರುವುದರಿಂದ ರಾಜ್ಯ ತನ್ನ ತೆರಿಗೆ ಸಂಪನ್ಮೂಲಗಳ ಬೆಳವಣಿಗೆಯಲ್ಲಿ ಸ್ವಲ್ಪ ಮಟ್ಟಿನ ಇಳಿತವನ್ನು ಕಾಣಬೇಕಾಗುತ್ತದೆ. ಕಳೆದ ವರ್ಷ ಈ ತೆರಿಗೆಯನ್ನು ಶೇಕಡ 3ಕ್ಕೆ ಇಳಿಸಿದಾಗ ಕೇಂದ್ರದಿಂದ ರಾಜ್ಯ ಸರ್ಕಾರವು ಸ್ವಲ್ಪ ಮಟ್ಟಿನ ಪರಿಹಾರ ಪಡೆದಿದ್ದು, ನಂತರದ ಇಳಿತದ ಬಗ್ಗೆ ರಾಜ್ಯಕ್ಕೆ ಪೂರ್ಣವಾಗಿ ಪರಿಹಾರ ನೀಡಲು ಕೇಂದ್ರ ಇನ್ನೂ ಮುಂದೆ ಬಂದಿರುವುದಿಲ್ಲ. ಆದುದರಿಂದ ಅಧಿಕಾರಯುಕ್ತ ಸಮಿತಿ ಹಾಗೂ 13ನೇ ಹಣಕಾಸು ಆಯೋಗದ ಮೂಲಕ ತನ್ನ ಅಭಿವೃದ್ಧಿ ಹಣಕಾಸಿನ ಅವಶ್ಯಕತೆಗಳನ್ನು ಪೂರೈಸಲು ರಾಜ್ಯದ ಆರ್ಥಿಕ ಭದ್ರತೆಯನ್ನು ಸಂರಕ್ಷಿಸುವಂತೆ ಕೇಂದ್ರವನ್ನು ಕೋರುವುದನ್ನು ನಾವು ಮುಂದುವರೆಸುತ್ತೇವೆ.

ಪರಿಹಾರಗಳು

182. ಆಯವ್ಯಯವನ್ನು ಸಿದ್ಧಪಡಿಸುವ ಮುನ್ನ ಹಲವಾರು ವಾಣಿಜ್ಯ ಮತ್ತು ಉದ್ಯಮಗಳ ಸಂಸ್ಥೆಗಳೊಂದಿಗೆ ಸಂವಾದ ಮಾಡಿದ್ದು, ಮೌಲ್ಯವರ್ಧಿತ ಮತ್ತು ಇತರೆ ತೆರಿಗೆಗಳಡಿಯಲ್ಲಿ ಈ ಮುಂದೆ ಹೇಳುವ ಅಂಶಗಳ ಬಗ್ಗೆ ಪರಿಹಾರ ನೀಡಲು ನಾನು ಪ್ರಸ್ತಾಪಿಸುತ್ತೇನೆ.

ಮೌಲ್ಯವರ್ಧಿತ ತೆರಿಗೆ (VAT)

183. ಪ್ಯಾಕಿಂಗ್ ವಸ್ತುಗಳು ಸೇರಿದಂತೆ ಜವಳಿ ಉದ್ಯಮ ಬಳಸುವ ಎಲ್ಲಾ ತರಹದ ಬಿಡಿ ಭಾಗಗಳು ಮತ್ತು ಉಪ ಭಾಗಗಳನ್ನು ಶೇ.4ರ ಮೌಲ್ಯವರ್ಧಿತ ತೆರಿಗೆಗೆ ಒಳಪಡುವ ಕೈಗಾರಿಕಾ ಹೂಡುವಳಿಗಳು ಎಂದು ಅಧಿಸೂಚಿಸಲಾಗುವುದು.

184. ಸ್ಥಳೀಯವಾಗಿ ಸಿದ್ಧಪಡಿಸಿದ ಉಡುಪುಗಳ ತಯಾರಿಕೆಗೆ ಪ್ರೋತ್ಸಾಹ ನೀಡಲು ದೇಶದ ಹೊರಗಿನಿಂದ ಆಮದು ಮಾಡಿದ ಬಟ್ಟೆಯ ಮೇಲೆ ತೆರಿಗೆಯನ್ನು ತೆಗೆದು ಹಾಕಲಾಗುವುದು.

185. ಸಿದ್ಧಪಡಿಸಿದ ಉಡುಪುಗಳ ಮೇಲಿನ ಪ್ರವೇಶ ತೆರಿಗೆಯನ್ನು ರದ್ದುಪಡಿಸಲಾಗುವುದು.

186. ಉಪಯೋಗಿಸಿದ ಮೋಟಾರು ವಾಹನಗಳ ವ್ಯಾಪಾರಿಗಳು ಮಾರಾಟ ಮಾಡುವ ಮೋಟಾರು ವಾಹನಗಳು ಮತ್ತು ಮೋಟಾರು ಸೈಕಲ್‌ಗಳ ಮೇಲಿನ ಮೌಲ್ಯವರ್ಧಿತ ತೆರಿಗೆಯನ್ನು ಶೇ.4ಕ್ಕೆ ಇಳಿಸಲಾಗುವುದು.

187. ಸಾಗಣೆ ಮಾಡಲು ಅಥವಾ ಪ್ಯಾಕಿಂಗ್ ವಸ್ತುಗಳಾಗಿ ಉಪಯೋಗಿಸಲಾಗುವ ಪ್ಲಾಸ್ಟಿಕ್ ಪೆಟ್ಟಿಗೆಗಳು, ಕೇಸ್‌ಗಳು, ಕ್ರೇಟ್‌ಗಳು ಮತ್ತು ಅಂತಹದೇ ವಸ್ತುಗಳನ್ನು ಪೂರ್ವಾನ್ವಯವಾಗುವಂತೆ 1-5-2005 ರಿಂದ ಶೇ.4ರ ತೆರಿಗೆಗೆ ಒಳಪಡಿಸಲಾಗುವುದು.

188. ಶ್ಯಾವಿಗೆಯ ಮೇಲಿನ ಮೌಲ್ಯವರ್ಧಿತ ತೆರಿಗೆಯನ್ನು ಶೇ.4ಕ್ಕೆ ಇಳಿಸಲಾಗುವುದು.

189. ಕಾಳು ತೆಗೆದ ಮೆಕ್ಕೆ ಜೋಳದ ತೆನೆರಹಿತ ಬೆಂಡುಗಳು, ಅದರ ಪುಡಿ ಮತ್ತು ಚೂರುಗಳ ಮೇಲಿನ ಮೌಲ್ಯವರ್ಧಿತ ತೆರಿಗೆಯನ್ನು ಶೇಕಡ 4ಕ್ಕೆ ಇಳಿಸಲಾಗುವುದು.

190. ಹುಲ್ಲು ಮತ್ತು ಪ್ರಾಕೃತಿಕ ಕಡ್ಡಿಗಳಿಂದ ತಯಾರಿಸಲಾದ ಬ್ರಾಂಡ್ ಇರುವ ಕಸಪೊರಕೆಗಳ ಮೇಲಿನ ಮೌಲ್ಯವರ್ಧಿತ ತೆರಿಗೆಯನ್ನು ರದ್ದು ಮಾಡಲಾಗುವುದು.

191. ಒಬ್ಬ ನೋಂದಾಯಿತ ವ್ಯಾಪಾರಿಯಿಂದ ಇನ್ನೊಬ್ಬ ನೋಂದಾಯಿತ ವ್ಯಾಪಾರಿಗೆ ವ್ಯಾಪಾರವನ್ನು ಮಾರಾಟವಾದಾಗ ಕೊಂಡುಕೊಳ್ಳುವವನಿಗೆ ಹೂಡುವಳಿ ತೆರಿಗೆ ಜಮೆಯ (Input Tax Credit) ಲಾಭವನ್ನು ನೀಡಲಾಗುವುದು.

192. ಮೂಲದಲ್ಲಿಯೇ ತೆರಿಗೆ ಕಟಾಯಿಸುವ ವ್ಯವಸ್ಥೆಯನ್ನು ಕಾಮಗಾರಿ ಗುತ್ತಿಗೆದಾರರ ಕಬ್ಬಿಣ ಮತ್ತು ಉಕ್ಕು, ಕಬ್ಬಿಣದ ಸಾಮಾನು, ಪ್ಲೈವುಡ್ ಮತ್ತು ಮರ ಮುಟ್ಟುಗಳ ಖರೀದಿಗೆ ವಿಸ್ತರಿಸಲಾಗುವುದು.

193. ವಾಣಿಜ್ಯ ಮತ್ತು ಉದ್ಯಮಗಳಿಂದ ಸುಲಭ ಪರಿಪಾಲನೆಗೆ ಅನುವು ಮಾಡಿಕೊಡಲು ಹಲವಾರು ಕಾರ್ಯ ವಿಧಾನಗಳಲ್ಲಿ ಸುಧಾರಣೆ ತರಲು ನಾನು ಪ್ರಸ್ತಾವಿಸುತ್ತೇನೆ.

194. ವ್ಯಾಪಾರಿಗಳು ಮಾಸಿಕ ರಿಟರ್ನ್‌ಗಳ ಜೊತೆಗೆ ವಾರ್ಷಿಕ ಮೌಲ್ಯವರ್ಧಿತ ತೆರಿಗೆ ವಿವರ ಪಟ್ಟಿಗಳನ್ನು ಸಲ್ಲಿಸಬೇಕಾದ ಅವಶ್ಯಕತೆಯನ್ನು ರದ್ದುಮಾಡಲಾಗುವುದು.

195. ಮಾಸಿಕ ರಿಟರ್ನ್‌ಗಳನ್ನು ವಿಳಂಬವಾಗಿ ಸಲ್ಲಿಸಿದಲ್ಲಿ ವಿಧಿಸುವ ದಂಡವನ್ನು, ಅಂತಹ ವಿಳಂಬ ಹತ್ತು ದಿನಗಳು ಮೀರದಿದ್ದಲ್ಲಿ, ಶೇಕಡ 10 ರಿಂದ ಶೇಕಡ 5ಕ್ಕೆ ಇಳಿಸಲಾಗುವುದು.

196. ಜಂಟಿ ಆಯುಕ್ತರುಗಳ ಸ್ವಯಂ ಪರಿಷ್ಕರಣೆ ಆದೇಶಗಳ ವಿರುದ್ಧ ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದ ಮುಂದೆ ಮೇಲ್ಮನವಿ ಸಲ್ಲಿಸಲು ಅವಕಾಶ ಮಾಡಿಕೊಡಲಾಗುವುದು.

197. ಅರ್ಹತೆ ಮೀರಿ ಹೂಡುವಳಿ ತೆರಿಗೆ ಜಮೆ (Input Tax Credit) ಕೋರಿಕೆ ಮಾಡಿದ್ದಲ್ಲಿ ಇನ್ನು ಮುಂದೆ ದಂಡ ವಿಧಿಸಲಾಗುವುದು.

198. ಪ್ರಸ್ತುತ ವರ್ಷದಲ್ಲಿ ತೆರಿಗೆ ರಿಟರ್ನ್‌ಗಳನ್ನು ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಸಲ್ಲಿಸುವ ವ್ಯವಸ್ಥೆಯನ್ನು ಸೀಮಿತವಾಗಿ ಜಾರಿ ಮಾಡಲಾಗುವುದು.

199. ಕೀಟ ನಾಶಕಗಳ ವ್ಯಾಪ್ತಿಯಿಂದ ಸೊಳ್ಳೆ ರಿಪೆಲೆಂಟ್‌ಗಳನ್ನು ಮತ್ತು ಶೌಚಾಲಯ ಶುದ್ಧೀಕರಿಸುವ ದ್ರವಗಳನ್ನು ಹೊರಗಿಡಲಾಗುವುದು.

ಮಾರಾಟ ತೆರಿಗೆ

200. ರಾಜ್ಯದ ಸಣ್ಣಪುಟ್ಟ ನಗರಗಳಿಗೆ ವಿಮಾನಯಾನ ಸೌಕರ್ಯವನ್ನು ವಿಸ್ತರಿಸುವ ದೃಷ್ಟಿಯಿಂದ ಬೆಂಗಳೂರು ಹಾಗೂ ಮಂಗಳೂರು ನಗರಗಳನ್ನು ಹೊರತುಪಡಿಸಿ ಇತರ ಕೇಂದ್ರಗಳಲ್ಲಿ ಖರೀದಿಸುವ ವೈಮಾನಿಕ ಟರ್ಬೈನ್ ಇಂಧನದ ಮೇಲಿನ ಮಾರಾಟ ತೆರಿಗೆಯನ್ನು ಮರುಪಾವತಿ ಮಾಡಲು ಉದ್ದೇಶಿಸಿದೆ.

ವಿಲಾಸ ತೆರಿಗೆ

201. ಹೋಟೆಲ್‌ಗಳಲ್ಲಿ ಮತ್ತು ಕಲ್ಯಾಣಮಂಟಪಗಳಲ್ಲಿರುವ ಸಭಾ ಭವನಗಳ ಮೇಲಿನ ವಿಲಾಸ ತೆರಿಗೆಯನ್ನು ಸಮಾನವಾಗಿ ಶೇಕಡ 20ರಂತೆ ನಿಗದಿ ಮಾಡಲಾಗುವುದು.

202. ಸಂಪನ್ಮೂಲ ನಷ್ಟವನ್ನು ತಡೆಯಲು ವಾಸ್ತವಿಕ ಬಾಡಿಗೆಗಳ ಬದಲಾಗಿ ಘೋಷಿಸಿದ ದರಗಳ ಮೇಲೆ ವಿಲಾಸ ತೆರಿಗೆ ವಿಧಿಸುವ ವ್ಯವಸ್ಥೆಯನ್ನು ಪುನಃ ಜಾರಿಗೆ ತರಲಾಗುವುದು.

203. ಇತರೆ ತೆರಿಗೆ ಪ್ರಕರಣಗಳಲ್ಲಿರುವಂತೆ ಮೇಲ್ಮನವಿಯನ್ನು ಅಂಗೀಕರಿಸಲು ವಿವಾದಿತ ತೆರಿಗೆಯ ಶೇಕಡ 50ರ ಪಾವತಿಯನ್ನು ಕಡ್ಡಾಯ ಮಾಡಲಾಗುವುದು.

ಮನರಂಜನಾ ತೆರಿಗೆ

204. ಕನ್ನಡ ಚಲನಚಿತ್ರಗಳಿಗೆ ತೆರಿಗೆ ವಿನಾಯಿತಿ ನೀಡುತ್ತಿದ್ದು ರಿಮೇಕ್ ಚಿತ್ರಗಳನ್ನು ಈವರೆಗೆ ಹೊರತುಪಡಿಸಿದೆ. ಇದರಿಂದ ಉಂಟಾಗಿರುವ ಗೊಂದಲವನ್ನು ನಿವಾರಿಸಲು ಎಲ್ಲಾ ಕನ್ನಡ ಚಲನಚಿತ್ರಗಳಿಗೆ (ಡಬ್ಬಿಂಗ್ ಮಾಡಿದ ಅನ್ಯ ಭಾಷೆಯ ಚಿತ್ರಗಳನ್ನು ಹೊರತುಪಡಿಸಿ) ತೆರಿಗೆ ವಿನಾಯಿತಿ ನೀಡಲಾಗುವುದು.

205. ಇತರೆ ತೆರಿಗೆ ಪ್ರಕರಣಗಳಲ್ಲಿರುವಂತೆ ಮೇಲ್ಮನವಿಯನ್ನು ಅಂಗೀಕರಿಸಲು ವಿವಾದಿತ ತೆರಿಗೆಯ ಶೇಕಡ 50ರ ಪಾವತಿಯನ್ನು ಕಡ್ಡಾಯ ಮಾಡಲಾಗುವುದು.

ವೃತ್ತಿ ತೆರಿಗೆ

206. 1949 ರ ಬ್ಯಾಂಕಿಂಗ್ ರೆಗ್ಯುಲೇಷನ್ ಕಾಯ್ದೆಗೆ ಒಳಪಡುವ ವ್ಯವಹಾರ ಹೊಂದಿರುವ ಎಲ್ಲಾ ಬ್ಯಾಂಕಿಂಗ್ ಕಂಪನಿಗಳು ವೃತ್ತಿ ತೆರಿಗೆ ಪಾವತಿಸುವಂತೆ ತಿದ್ದುಪಡಿ ಮಾಡಲಾಗುವುದು.

207. ಸಂಬಳ ಪಡೆಯುವ ನೌಕರರ ವರಮಾನ ವಿನಾಯಿತಿ ಮಿತಿಯನ್ನು ಮಾಸಿಕ ರೂ.5000 ಗಳಿಗೆ ಏರಿಸಲಾಗುವುದು.

ರಾಜ್ಯ ಅಬಕಾರಿ

208. ಸಾರಾಯಿ ಮಾರಾಟ ನಿಷೇಧದಂಥ ಚಾರಿತ್ರಿಕ ನೀತಿಯನ್ನು ಕಳೆದ ವರ್ಷದ ಆಯವ್ಯಯದಲ್ಲಿ ಮಂಡಿಸಿದ್ದು ಮಾನ್ಯ ಸದಸ್ಯರಿಗೆ ತಿಳಿದಂತಹ ಅಂಶ. ಈ ನೀತಿ ಸಾಮಾಜಿಕ ಸ್ವಾಸ್ಥ್ಯತೆಗೆ ಪೂರಕವಾದಂತಹ ಹೆಜ್ಜೆ ಎಂದು ಸಾರ್ವತ್ರಿಕ ಮನ್ನಣೆ ದೊರೆತಿದ್ದು ಸಾರ್ವಜನಿಕರು, ಸಾಮಾಜಿಕ ಕಾರ್ಯಕರ್ತರು ಮತ್ತು ಮಹಿಳಾ ಸಂಘಟನೆಗಳು ಈ ಕ್ರಮವನ್ನು ಸ್ವಾಗತಿಸಿವೆ. ಇಂತಹ ಕ್ರಾಂತಿಕಾರಕ ಹೆಜ್ಜೆಯನ್ನು ಕಳೆದ ವರ್ಷ ಹೆಚ್ಚಿನ ಅಡೆತಡೆಗಳಿಲ್ಲದೆ ಜಾರಿಗೆ ತರಲಾಗಿದೆ. ಆದಾಗ್ಯೂ ಕೆಲವು ಸಮಾಜಘಾತುಕ ವ್ಯಕ್ತಿಗಳು ಅಕ್ರಮ ಸಾರಾಯಿ ಮತ್ತು ಇತರೆ ಅಪಾಯಕಾರಿ ವಸ್ತುಗಳನ್ನು ತಯಾರಿಸಿ ಸಾರ್ವಜನಿಕರ ಆರೋಗ್ಯವನ್ನು ಕೆಡಿಸುತ್ತಿದ್ದಾರೆ. ಇದನ್ನು ಹೋಗಲಾಡಿಸಲು ಅಬಕಾರಿ ಮತ್ತು ಪೊಲೀಸ್ ಇಲಾಖೆಯ ಜಾರಿ ಮತ್ತು ತನಿಖೆ ಸಾಮರ್ಥ್ಯವನ್ನು ಹೆಚ್ಚಿಸಿ ಇಂತಹ ಅಕ್ರಮ ಚಟುವಟಿಕೆಗಳನ್ನು ತೊಡೆದು ಹಾಕಲು ಪ್ರಸ್ತಾಪಿಸಿದ್ದೇನೆ.

209. ಸಾರಾಯಿ ಮಾರಾಟ ನಿಷೇಧವನ್ನು ಜಾರಿಗೆ ತಂದ ನಂತರ ಗ್ರಾಮಾಂತರ ಪ್ರದೇಶಗಳಲ್ಲಿ ಮದ್ಯದ ಬೇಡಿಕೆಯನ್ನು ಪೂರೈಸಿಕೊಳ್ಳಲು ಬಹಳ ದೂರದ ವರೆಗೆ ಹೋಗಬೇಕಾದಂತಹ ಪರಿಸ್ಥಿತಿ ಉಂಟಾಗಿದೆ. ಕೆಲವರು ಈ ಪರಿಸ್ಥಿತಿಯ ದುರುಪಯೋಗ ಮಾಡಿಕೊಂಡು ಅಕ್ರಮ ಮದ್ಯ ಮಾರಾಟ ಮಾಡುತ್ತಿರುವುದು ಕಂಡುಬಂದಿದೆ. ಈ ಸಮಸ್ಯೆಯ ನಿವಾರಣೆಗಾಗಿ 1000 ಚಿಲ್ಲರೆ (ಸಿ.ಎಲ್.2) ಮದ್ಯದಂಗಡಿ ಸನ್ನದುಗಳು ಹಾಗೂ 500 ಬಾರ್ ಮತ್ತು ರೆಸ್ಟೋರೆಂಟ್ (ಸಿ.ಎಲ್.9) ಸನ್ನದುಗಳನ್ನು ಹೊಸದಾಗಿ ನೀಡಲು ಉದ್ದೇಶಿಸಿದೆ. ಇಂತಹ ಸನ್ನದುಗಳನ್ನು ತೆರೆಯುವಾಗ ನಿಯಮಾನುಸಾರ ಜನಸಂಖ್ಯೆ ನಿರ್ಬಂಧವನ್ನು ಪರಿಗಣಿಸಲಾಗುವುದು. ಸರಕಾರೀ ಸ್ವಾಮ್ಯದ ಉದ್ದಿಮೆಗಳ ಮೂಲಕವೂ ಸಹ ಕೆಲವು ಚಿಲ್ಲರೆ ಮದ್ಯದ ಅಂಗಡಿಗಳನ್ನು ತೆರೆಯಲು ಸಹ ಅವಕಾಶ ಕಲ್ಪಿಸಲಾಗುವುದು.

210. ಹಾಲಿ ಇರುವ ಚಿಲ್ಲರೆ ಮದ್ಯದ ಅಂಗಡಿಗಳ (ಸಿ.ಎಲ್.2) ಸನ್ನದುಗಳನ್ನು ಪಟ್ಟಣ ಪ್ರದೇಶದಿಂದ ಗ್ರಾಮಾಂತರ ಪ್ರದೇಶಕ್ಕೆ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಜಿಲ್ಲೆಯ ಒಳಗೆ ಸ್ಥಳಾಂತರಿಸಿ, ಸನ್ನದುಗಳು ಇಲ್ಲದೇ ಇರುವ ಸ್ಥಳಗಳಲ್ಲಿ ಅಂಗಡಿ ತೆರೆಯಲು ಅವಕಾಶ ಕಲ್ಪಿಸಲು ಸಹ ಪ್ರಸ್ತಾಪಿಸಿದ್ದೇನೆ.

211. ಮದ್ಯ ಮಾರಾಟ ಮಾಡಲು ನಿಗದಿತ ಬೆಲೆಗಿಂತ ಹೆಚ್ಚಿನ ಬೆಲೆಯನ್ನು ಪಾನೀಕರಿಂದ ವಸೂಲು ಮಾಡುವ ದೂರುಗಳು ಬಂದಿವೆ. ಇದನ್ನು ನಿವಾರಿಸಲು ಅಬಕಾರಿ ಕಾಯ್ದೆಗೆ ತಿದ್ದುಪಡಿ ತಂದು ಇಂತಹ ಸನ್ನದುಗಳನ್ನು ರದ್ದುಗೊಳಿಸಲಾಗುವುದು.

212. ರಾಜ್ಯ ಸರ್ಕಾರವು ವೈನ್ ನೀತಿಯನ್ನು ಜಾರಿಗೆ ತರುವಂಥ ಪ್ರಮುಖ ನಿರ್ಧಾರವನ್ನು ಈಗಾಗಲೇ ಪ್ರಕಟಿಸಿದೆ. ವೈನರಿಗಳನ್ನು ತೆರೆಯಲು ಸನ್ನದು ಶುಲ್ಕವನ್ನು ವಾರ್ಷಿಕ ರೂ.50,000 ದಿಂದ ರೂ. 5,000 ಗಳಿಗೆ ಹಾಗೂ ವೈನ್ ಟ್ಯಾವರಿನ್ ತೆರೆಯಲು ಅತೀ ಕಡಿಮೆ ಸನ್ನದು ಶುಲ್ಕ ವಾರ್ಷಿಕ ರೂ.1,000 ಗಳಿಗೆ ನಿಗದಿಮಾಡಿದೆ. ಈ ಕ್ರಮಗಳಿಂದಾಗಿ ದ್ರಾಕ್ಷಿ ಬೆಳೆಗಾರರಿಗೆ ಹೆಚ್ಚಿನ ಲಾಭ ತಲುಪಿಸುವ ಸರ್ಕಾರದ ಧ್ಯೇಯವನ್ನು ಈಡೇರಿಸಲಾಗುವುದು.

ಮುದ್ರಾಂಕ ಮತ್ತು ನೋಂದಣಿ

213. ಮುದ್ರಾಂಕ ಮತ್ತು ನೋಂದಣಿ ಇಲಾಖೆಯಲ್ಲಿ ಇತ್ತೀಚೆಗೆ ಎಲೆಕ್ಟ್ರಾನಿಕ್ ಮುದ್ರಾಂಕಗಳ ಮೂಲಕ ಶುಲ್ಕವನ್ನು ವಸೂಲಿ ಮಾಡುವ ನೂತನ ಪ್ರಯೋಗವನ್ನು ಬೆಂಗಳೂರಿನಲ್ಲಿ ಪ್ರಾರಂಭಿಸಲಾಗಿದ್ದು ಇದನ್ನು ರಾಜ್ಯದ ಇತರ ಭಾಗಗಳಿಗೆ ವಿಸ್ತರಿಸುವ ಕ್ರಮವನ್ನು ಕೈಗೊಳ್ಳಲಾಗುವುದು. ಕಳೆದ ಸಾಲಿನಲ್ಲಿ ಬೆಂಗಳೂರು ಸುತ್ತಮುತ್ತ ಆಸ್ತಿಗಳ ನೋಂದಾವಣೆಯು ಇಳಿಮುಖಗೊಂಡಿದ್ದು ಇದರ ಕಾರಣಗಳನ್ನು ವಿಶ್ಲೇಷಿಸಿ ಸಾರ್ವಜನಿಕರ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಹೆಚ್ಚಿನ ಆದಾಯವನ್ನು ಪಡೆಯಲು ಕ್ರಮ ಕೈಗೊಳ್ಳಲಾಗುವುದು.

214. ವಾಣಿಜ್ಯ ಹಾಗೂ ಕೈಗಾರಿಕೋದ್ಯಮಿಗಳ ಜೊತೆ ನಡೆಸಿದ ಸಮಾಲೋಚನೆಯ ಸಂದರ್ಭದಲ್ಲಿ ರಾಜ್ಯದ ಉದ್ಯಮಿಗಳು ಮುದ್ರಾಂಕ ಶುಲ್ಕದ ವಿಷಯದಲ್ಲಿ ನೀಡಿರುವ ಕೆಲವು ಸಲಹೆಗಳನ್ನು ಪರಿಗಣಿಸಲಾಗಿದೆ. ಅಲ್ಲದೆ, ಸಾಲ ನೀಡುವ ಸಂಸ್ಥೆಗಳಿಂದ ಸ್ವೀಕರಿಸಲಾದ ಬೇಡಿಕೆಗಳನ್ನು ಪರಿಶೀಲಿಸಲಾಗಿದೆ. ರಾಜ್ಯದಲ್ಲಿ ಔದ್ಯಮಿಕ ವಾತಾವರಣವನ್ನು ಉತ್ತಮಗೊಳಿಸಲು ಮತ್ತು ಸಾಮಾನ್ಯ ಜನರ ಹಣಕಾಸಿನ ವ್ಯವಹಾರಗಳಿಗೆ ಅನುಕೂಲ ಮಾಡಲು ಮುದ್ರಾಂಕ ಮತ್ತು ನೋಂದಣಿ ಶುಲ್ಕಗಳ ಬಗ್ಗೆ ಈ ಕೆಳಕಂಡ ರಿಯಾಯಿತಿ ಹಾಗೂ ಸುಧಾರಣೆಗಳನ್ನು ಪ್ರಸ್ತಾಪಿಸುತ್ತೇನೆ.

- ಅನುಚ್ಛೇದ 6(1)ರಡಿಯಲ್ಲಿ ಹಕ್ಕುಪತ್ರಗಳನ್ನು ಠೇವಣಿ ಇಡುವ ಕರಾರು ಪತ್ರಗಳಿಗೆ ಸಂಬಂಧಿಸಿದಂತೆ ಹಾಲಿ ಇರುವ ಶುಲ್ಕವನ್ನು ಶೇ.0.5 ರಿಂದ ಶೇ.0.25ಗೆ ಇಳಿಸಿ ಗರಿಷ್ಠ ಮಿತಿಯನ್ನು ರೂ.5 ಲಕ್ಷಗಳಿಗೆ ನಿಗದಿ ಪಡಿಸಲು ಉದ್ದೇಶಿಸಿರುತ್ತೇನೆ.
- ಅನುಚ್ಛೇದ 20(4) ಕ್ಕೆ ಸಂಬಂಧಿಸಿದ ಕಂಪನಿಗಳ ಸಂಯೋಜನೆ, ಬೇರ್ಪಡೆ ಹಾಗೂ ಪುನರ್‌ರಚನೆಗೆ ಸಂಬಂಧಪಟ್ಟ ಆಸ್ತಿಗಳ ಮಾರುಕಟ್ಟೆ ಮೌಲ್ಯದ ಮೇಲಿನ ಮುದ್ರಾಂಕ ಶುಲ್ಕವನ್ನು ಶೇ.7.5 ರಿಂದ ಶೇ.5ಕ್ಕೆ ಇಳಿಸಲು ಉದ್ದೇಶಿಸಿರುತ್ತೇನೆ.
- ರೂ. 10,000 ಗಳ ಸಾಲದ ಮೊತ್ತದವರೆಗಿನ ಒಡವೆಗಳ ಮೇಲಿನ ಗಿರವಿಗೆ ಸಂಬಂಧಿಸಿದ ಮುದ್ರಾಂಕ ಶುಲ್ಕವನ್ನು ವಿನಾಯಿತಿ ನೀಡಲು ಉದ್ದೇಶಿಸಿರುತ್ತೇನೆ.
- ಗುತ್ತಿಗೆ ಪತ್ರ (ಲೀಸ್) ಕ್ಕೆ ಸಂಬಂಧಿಸಿದಂತೆ ಅನುಚ್ಛೇದ 30(1) (a) (iii) ರಲ್ಲಿನ ಲೋಪಗಳನ್ನು ಸರಿಪಡಿಸಲು ಮತ್ತು ಭದ್ರತಾ ಠೇವಣಿಗೆ ಸಂಬಂಧಿಸಿದಂತೆ ಅನುಚ್ಛೇದ 30(1) (c) ರ ನಂತರ ಹೊಸದಾಗಿ ವಿವರಣೆಯನ್ನು ಸೇರಿಸುವ ಮೂಲಕ ಸರಿಪಡಿಸಲು ಹಾಗೂ ಅನುಚ್ಛೇದ 30(1)(d) ಯನ್ನು ಕೈಬಿಡುವ ಮೂಲಕ ಸದರಿ ಅನುಚ್ಛೇದದ ತಪ್ಪು ವ್ಯಾಖ್ಯಾನ, ದುರ್ಬಳಕೆ, ಮುದ್ರಾಂಕ ಶುಲ್ಕದ ಸೋರಿಕೆಯನ್ನು ತಡೆಗಟ್ಟಲು ಮತ್ತು ಹೆಚ್ಚುವರಿ ರಾಜಸ್ವ ಸಂಗ್ರಹಣೆಗಾಗಿ ಅನುಚ್ಛೇದ 20ಕ್ಕೆ ಸೂಕ್ತ ತಿದ್ದುಪಡಿ ತರಲು ನಾನು ಉದ್ದೇಶಿಸಿದ್ದೇನೆ.
- ಮುದ್ರಾಂಕ ಹಾಗೂ ನೋಂದಣಿ ಇಲಾಖೆಯ ಕಾರ್ಯ ರಚನೆಯನ್ನು ಕಾರ್ಯಭಾರ ಆಧಾರದ ಮೇಲೆ ಪುನರ್ ರಚಿಸಲಾಗುವುದು. ಇ-ಗವರ್ನೆನ್ಸ್ ಯೋಜನೆಗಳನ್ನು ಅನುಷ್ಠಾನಗೊಳಿಸಲು ತಾಂತ್ರಿಕ ಕೋಶವನ್ನು ಸೃಷ್ಟಿಸಲಾಗುವುದು. ಮುದ್ರಾಂಕ ರಾಜಸ್ವ ಸೋರಿಕೆಯನ್ನು ತಡೆಗಟ್ಟುವ ದೃಷ್ಟಿಯಿಂದ ಇಲಾಖೆಯಲ್ಲಿ ಜಾಗೃತ ದಳವನ್ನು ಸೃಷ್ಟಿಸಲಾಗುವುದು.
- ಇಲಾಖೆಯ ಇ-ಗವರ್ನೆನ್ಸ್ ಪ್ರಯತ್ನವಾಗಿ ಎಲ್ಲಾ ದಾಖಲಾತಿಗಳನ್ನು ಗಣಕೀಕರಣ(Digitize) ಮಾಡಲಾಗುವುದು. ಇದರಿಂದ ಇಚ್ಛಿಸಿದ ಕಛೇರಿಯಲ್ಲಿ ದಸ್ತಾವೇಜು ನೋಂದಣಿ ಮಾಡಲು ಅನುಕೂಲವಾಗುವುದು. ಇದರಿಂದ ಸಾರ್ವಜನಿಕರ ಅನುಕೂಲಕ್ಕಾಗಿ ವಿದ್ಯುನ್ಮಾನ ಮಾಧ್ಯಮದ ಮೂಲಕ ಋಣಭಾರ ಪ್ರಮಾಣ ಪತ್ರ, ವಿವಾಹ ಪ್ರಮಾಣ ಪತ್ರ, ಇ-ಸ್ಟಾಂಪಿಂಗ್ ಹಾಗೂ ದೃಢೀಕೃತ ದಸ್ತಾವೇಜುಗಳ ನಕಲು ಪ್ರತಿಗಳನ್ನು ನೀಡಬಹುದಾಗಿರುತ್ತದೆ. ಮೇಲ್ಕಂಡ ಎಲ್ಲಾ

ಕಾರ್ಯ ಚಟುವಟಿಕೆಗಳನ್ನು ಈ ಆರ್ಥಿಕ ವರ್ಷದಲ್ಲಿ ಬೆಂಗಳೂರಿನ ಗಾಂಧಿನಗರ ನೋಂದಣಿ ಜಿಲ್ಲೆ ಇಲ್ಲಿ ಪ್ರಯೋಗಿಕವಾಗಿ ಪ್ರಾರಂಭಿಸಲು ಉದ್ದೇಶಿಸಿರುತ್ತೇನೆ.

215. ಪ್ರಸ್ತಾವಿತ ತಿದ್ದುಪಡಿಗಳ ವಿವರಗಳನ್ನು ಅನುಬಂಧ-II ರಲ್ಲಿ ನೀಡಲಾಗಿದೆ.

ಮೋಟಾರು ವಾಹನ ತೆರಿಗೆಗಳು

216. ಮಾನ್ಯ ಸದಸ್ಯರಿಗೆ ತಿಳಿದಿರುವಂತೆ ರಾಜ್ಯ ಸರ್ಕಾರವು ಪ್ರತಿ ವರ್ಷವೂ ರಾಜ್ಯದ ರಸ್ತೆ ಸಂಪರ್ಕ ಜಾಲವನ್ನು ಅಭಿವೃದ್ಧಿಗೊಳಿಸಲು ಮತ್ತು ನಿರ್ವಹಿಸಲು ಭಾರೀ ಪ್ರಮಾಣದ ವೆಚ್ಚವನ್ನು ಭರಿಸಬೇಕಾಗಿದೆ. ಆದ್ದರಿಂದ ಈ ವೆಚ್ಚದ ಗಣನೀಯ ಭಾಗವನ್ನು ಮೋಟಾರು ವಾಹನಗಳನ್ನು ಉಪಯೋಗಿಸುವ, ಅದರಲ್ಲಿಯೂ ವ್ಯಕ್ತಿಗತ ವಾಹನಗಳಾದ ಕಾರು, ಜೀಪ್, ದ್ವಿಚಕ್ರ ವಾಹನಗಳು, ಮುಂತಾದವುಗಳನ್ನು ಬಳಸುವವರು ಭರಿಸುವುದು ಸೂಕ್ತವಾಗಿರುತ್ತದೆ. ರಾಜ್ಯದ ನಗರ ಪ್ರದೇಶಗಳಲ್ಲಿ ವಾಹನಗಳ ಸಂಖ್ಯೆ ಅತಿ ವೇಗದಿಂದ ಬೆಳೆದು ರಸ್ತೆಗಳಲ್ಲಿ ವಾಹನ ದಟ್ಟಣೆ ಮತ್ತು ವಾಯುಮಾಲಿನ್ಯ ಹೆಚ್ಚುತ್ತಿರುವುದನ್ನು ತಡೆಯಲು ಸಹ ಇಂತಹ ಕ್ರಮದ ಅಗತ್ಯವಿದೆ. ಆದ್ದರಿಂದ ದ್ವಿಚಕ್ರ ವಾಹನಗಳನ್ನು ಹೊರತುಪಡಿಸಿ ಇತರ ವಾಹನಗಳ ಮೇಲಿನ ಜೀವಾವಧಿ ತೆರಿಗೆಯನ್ನು ಈ ಕೆಳಗಿನಂತೆ ಹೆಚ್ಚಿಸಲು ಪ್ರಸ್ತಾಪಿಸಿದ್ದೇನೆ.

217. ರೂ. 5 ಲಕ್ಷಕ್ಕಿಂತಲೂ ಕಡಿಮೆ ಬೆಲೆಯ ವಾಹನಗಳು - ಶೇ.10 ರಿಂದ 12ಕ್ಕೆ.

- ರೂ.5 ಲಕ್ಷ ಮೇಲ್ಪಟ್ಟು 10 ಲಕ್ಷದವರೆಗಿನ ಬೆಲೆಯ ವಾಹನಗಳು - ಶೇ.11 ರಿಂದ 13ಕ್ಕೆ
- ರೂ.10 ಲಕ್ಷಕ್ಕೆ ಮೇಲ್ಪಟ್ಟ ಬೆಲೆಯ ವಾಹನಗಳು - ಶೇ. 14 ರಿಂದ 16ಕ್ಕೆ

ಮೇಲ್ಕಂಡ ದರ ಪರಿಷ್ಕರಣೆಯ ವಿವರಗಳನ್ನು ಅನುಬಂಧ -III ರಲ್ಲಿ ತೋರಿಸಿದ್ದು ಇದರಿಂದ ಸುಮಾರು ವಾರ್ಷಿಕ ರೂ.100 ಕೋಟಿ ಹೆಚ್ಚುವರಿ ತೆರಿಗೆ ಸಂಗ್ರಹವಾಗುವ ನಿರೀಕ್ಷೆ ಇದೆ.

218. ಸಾರ್ವಜನಿಕ ಸಾರಿಗೆ ವಾಹನಗಳಾದ ಬಸ್ ಮುಂತಾದವುಗಳ ಬಳಕೆಯನ್ನು ಜನಪ್ರಿಯಗೊಳಿಸುವುದು ರಸ್ತೆಯಲ್ಲಿ ವಾಹನಗಳ ದಟ್ಟಣೆಯನ್ನು ಕಡಿಮೆ ಮಾಡಲು ಮತ್ತು ಅಪಘಾತಗಳನ್ನು ತಡೆಯಲು ಅಪೇಕ್ಷಣೀಯ ನೀತಿಯಾಗಿದೆ. ಸರ್ಕಾರಿ ಸ್ವಾಮ್ಯದ ರಾಜ್ಯ ರಸ್ತೆ ಸಾರಿಗೆ ನಿಗಮಗಳು ಸಾರ್ವಜನಿಕ ಸಾರಿಗೆ ಸೌಲಭ್ಯಗಳನ್ನು ಒದಗಿಸುವುದರಲ್ಲಿ ಮತ್ತು ಸಾರ್ವಜನಿಕರ ಬೆಂಬಲವನ್ನು ಪಡೆಯುವುದರಲ್ಲಿ ಬಹುಮಟ್ಟಿಗೆ ಸುಧಾರಣೆಗಳನ್ನು ಸಾಧಿಸಿವೆ. ಈ ಸಂಸ್ಥೆಗಳು ಮೋಟಾರು ವಾಹನ ತೆರಿಗೆಯನ್ನು ತಮ್ಮ ಒಟ್ಟು ವರಮಾನದ ಶೇಕಡಾ ಅಂಶವಾಗಿ ಪಾವತಿ ಮಾಡುವುದರಿಂದ ಪ್ರತಿಬಾರಿಯೂ ಪ್ರಯಾಣದ ದರವನ್ನು ಪರಿಷ್ಕರಿಸಿದಾಗ ತೆರಿಗೆ ಪ್ರಮಾಣವು ಹೆಚ್ಚಾಗುತ್ತಿದೆ. ಆದ್ದರಿಂದ, ಈ ಸಾರ್ವಜನಿಕ ವಾಹನಗಳ ಮೂಲಕ ಪ್ರಯಾಣ ಕೈಗೊಳ್ಳುವ ಜನರಿಗೆ ಅನುಕೂಲವಾಗಲು ಈ ಸಂಸ್ಥೆಗಳಿಗೆ ಸ್ವಲ್ಪಮಟ್ಟಿನ ರಿಯಾಯಿತಿ ನೀಡುವುದು ಅವಶ್ಯಕವಾಗಿದೆ. ಈಗ ಈ ಸಂಸ್ಥೆಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಮತ್ತು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳು ತಮ್ಮ ವಹಿವಾಟಿನ ಶೇ. 7ರಂತೆ

ತೆರಿಗೆಯನ್ನು ಪಾವತಿಸುತ್ತಿದ್ದು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ತನ್ನ ವಹಿವಾಟಿನ ಶೇ.5 ರಂತೆ ತೆರಿಗೆಯನ್ನು ಪಾವತಿಸಬೇಕಿದೆ. ಈ ಎಲ್ಲಾ ಸಂಸ್ಥೆಗಳ ತೆರಿಗೆ ದರವನ್ನು ಸಮಾನವಾಗಿ ಶೇ.5ರ ದರದಂತೆ ವಿಧಿಸಲು ಪ್ರಸ್ತಾಪಿಸುತ್ತೇನೆ. ಈ ಪ್ರಸ್ತಾವನೆಯಿಂದ ರಾಜಸ್ವದಲ್ಲಿ 65 ಕೋಟಿ ರೂ. ಕಡಿಮೆಯಾಗುವುದು.

ಅರಣ್ಯ ಅಭಿವೃದ್ಧಿ ತೆರಿಗೆ

219. ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ಮತ್ತು ಕಲ್ಲು ಗಣಿಗಾರಿಕೆ ಚಟುವಟಿಕೆ ನಡೆಸುತ್ತಿರುವ ಗುತ್ತಿಗೆದಾರರ ಮೇಲೆ ಕರ್ನಾಟಕ ಅರಣ್ಯ ಕಾಯಿದೆ 1983 ರ ಪರಿಚ್ಛೇದ 98(ಎ) ಮತ್ತು ಉಪ ಪರಿಚ್ಛೇದ (1) ರಲ್ಲಿನ ಅಧಿಕಾರವನ್ನು ಬಳಸಿ **'ಅರಣ್ಯ ಅಭಿವೃದ್ಧಿ ತೆರಿಗೆ'** ವಿಧಿಸಲು ಉದ್ದೇಶಿಸಲಾಗಿದೆ. ಪ್ರಸ್ತುತ ಈ ಅರಣ್ಯ ಅಭಿವೃದ್ಧಿ ತೆರಿಗೆಯನ್ನು ಸಾರ್ವಜನಿಕ ಸ್ವಾಮ್ಯದ ಕಂಪನಿಗಳಿಂದ ಮಾತ್ರ ಸಂಗ್ರಹಿಸಲಾಗುತ್ತಿದೆ. ಈ ಕ್ರಮದಿಂದಾಗಿ ಇನ್ನು ಮುಂದೆ ಸಾರ್ವಜನಿಕ ಸ್ವಾಮ್ಯದ ಕಂಪನಿಗಳು ಮತ್ತು ಖಾಸಗಿ ಗಣಿ ಮತ್ತು ಕಲ್ಲುಗಣಿಗಾರಿಕೆ ಕಂಪನಿಗಳ ನಡುವೆ ಏಕರೂಪತೆ ಮೂಡಲಿದ್ದು, ಅರಣ್ಯ ಅಭಿವೃದ್ಧಿ ತೆರಿಗೆಯ ಮೂಲಕ ಸರ್ಕಾರಕ್ಕೆ ಪ್ರತಿ ವರ್ಷ ರೂ.150 ಕೋಟಿಗಳ ಹೆಚ್ಚುವರಿ ರಾಜಸ್ವ ದೊರೆಯಲಿದೆ.

ಹೆಚ್ಚುವರಿ ಸಂಪನ್ಮೂಲಗಳ ಸಂಗ್ರಹಣೆ

220. ಪ್ರಸ್ತಾಪಿಸಿರುವ ತೆರಿಗೆ ಸಂಗ್ರಹಣಾ ಕ್ರಮಗಳಿಂದ ಈ ವರ್ಷದ ಉಳಿದ ಅವಧಿಯಲ್ಲಿ ರೂ.120 ಕೋಟಿಗಳಷ್ಟು ಹೆಚ್ಚುವರಿ ಸಂಪನ್ಮೂಲಗಳ ಕ್ರೋಢೀಕರಣವಾಗಲಿದೆ.

ಕಾನೂನಿನ ತಿದ್ದುಪಡಿಗಳು

221. ಮೇಲ್ಕಂಡ ತೆರಿಗೆ ಪ್ರಸ್ತಾವನೆಗಳನ್ನು ಜಾರಿಗೊಳಿಸಲು ಸಂಬಂಧಪಟ್ಟ ತೆರಿಗೆ ಸಂಬಂಧಿತ ಕಾನೂನುಗಳಲ್ಲಿ ತಿದ್ದುಪಡಿಗಳನ್ನು ಮಾಡಬೇಕಾಗಿದೆ. ಅದರಂತೆ, ಮೇಲಿನ ಹಾಗೂ ಇತರ ಅಗತ್ಯವಿರುವ ತಿದ್ದುಪಡಿಗಳನ್ನು ಸದನದ ಮುಂದೆ ಪ್ರಸ್ತಾವಿಸಲಾಗುವುದು.

ಪರಿಷ್ಕೃತ ಆಯವ್ಯಯ 2008-09ರ ಪಕ್ಷಿನೋಟ

222. ನಮ್ಮ ಅಭಿವೃದ್ಧಿಯ ಪರಿಕಲ್ಪನೆ ಮತ್ತು ಕಾರ್ಯತಂತ್ರಗಳ ಹಿನ್ನೆಲೆಯಲ್ಲಿ ಪರಿಷ್ಕೃತ ಆಯವ್ಯಯವು ಈ ಕೆಳಕಂಡ ಅಂಶಗಳನ್ನು ಒಳಗೊಂಡಿದೆ.

ಪರಿಷ್ಕೃತ ಅಂದಾಜುಗಳು 2007-08

223. 2007-08 ರ ಮುಂಗಡ ಅಂದಾಜುಗಳ ರೀತ್ಯಾ ಒಟ್ಟು ಜಮೆಗಳನ್ನು 47927.28 ಕೋಟಿ ರೂ.ಗಳೆಂದು ನಿರೀಕ್ಷಿಸಲಾಗಿತ್ತು. ಆದರೆ ಪರಿಷ್ಕೃತ ಅಂದಾಜಿನ ರೀತ್ಯಾ ಒಟ್ಟು ಜಮೆಗಳು 47649.42 ಕೋಟಿ ರೂ.ಗಳಾಗಿದೆ. ಮುಂಗಡ ಅಂದಾಜುಗಳ ರೀತ್ಯಾ ಒಟ್ಟು ವೆಚ್ಚವು 47950.34 ಕೋಟಿ ರೂ.ಗಳಾಗಿತ್ತು ಈಗ ಪರಿಷ್ಕೃತ ಅಂದಾಜಿನ ರೀತ್ಯಾ ಒಟ್ಟು ವೆಚ್ಚವು 47822.98 ಕೋಟಿ ರೂ.ಗಳಾಗಿದೆ. ಸಾರ್ವಜನಿಕ ವೆಚ್ಚದ ನಿವ್ವಳ ಲೆಕ್ಕ ತೆಗೆದುಕೊಂಡ ನಂತರ ಈ ವರ್ಷದ ಅಂತಿಮ ಕೊರತೆಯು

58.32 ಕೋಟಿ ರೂ.ಗಳಾಗುವ ನಿರೀಕ್ಷೆ ಇದೆ. 2007-08ರ ಮುಂಗಡ ಪತ್ರವನ್ನು ಮಂಡಿಸುವಾಗ ಈ ಕೊರತೆಯನ್ನು 73.31 ಕೋಟಿ ರೂ.ಗಳೆಂದು ತೋರಿಸಲಾಗಿತ್ತು.

ಆಯವ್ಯಯ ಅಂದಾಜುಗಳು 2008-09

224. 2008-09 ನೇ ಸಾಲಿನ ಒಟ್ಟು ಜಮೆ 55273.94 ಕೋಟಿ ರೂ.ಗಳಾಗುವ ನಿರೀಕ್ಷೆ ಇದೆ. ಇದರಲ್ಲಿ 47240.31 ಕೋಟಿ ರೂ.ಗಳ ರಾಜಸ್ವ ಜಮೆ ಮತ್ತು 8033.63 ಕೋಟಿ ರೂ.ಗಳ ಬಂಡವಾಳ ಜಮೆ ಸೇರಿರುತ್ತದೆ. ಒಟ್ಟು ವೆಚ್ಚವನ್ನು 55313.41 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ 45712.86 ಕೋಟಿ ರೂ.ಗಳು ರಾಜಸ್ವ ವೆಚ್ಚವಾಗಿದ್ದು 9600.55 ಕೋಟಿ ರೂ.ಗಳು ಬಂಡವಾಳ ವೆಚ್ಚವಾಗಿದೆ.

225. ಸರ್ಕಾರವು ತೆರಿಗೆ ರಾಜಸ್ವದ ಮೂಲಕ 31875.85 ಕೋಟಿ ರೂ.ಗಳನ್ನು ತೆರಿಗೆಯೇತರ ರಾಜಸ್ವದ ಮೂಲಕ 1931.65 ಕೋಟಿ ರೂ.ಗಳನ್ನು ಸಂಗ್ರಹಿಸುವ ನಿರೀಕ್ಷೆಯನ್ನು ಇಟ್ಟುಕೊಂಡಿದೆ. ಇದಲ್ಲದೆ ಭಾರತೀಯ ರಿಸರ್ವ್‌ಬ್ಯಾಂಕ್ ಮತ್ತು ಇತರ ಹಣಕಾಸು ಸಂಸ್ಥೆಗಳಿಂದ 5248.42 ಕೋಟಿ ರೂ.ಗಳನ್ನು ಮತ್ತು ಕೇಂದ್ರ ಸರ್ಕಾರದ ಒಟ್ಟು ಸಾಲಗಳಿಂದ 1571.29 ಕೋಟಿ ರೂ.ಗಳನ್ನು ಸಂಗ್ರಹಿಸುವ ನಿರೀಕ್ಷೆಯನ್ನು ಇಟ್ಟುಕೊಂಡಿದೆ.

226. 2007-08 ರ ಪರಿಷ್ಕೃತ ಅಂದಾಜುಗಳ ರೀತ್ಯಾ ಕ್ರೋಢೀಕೃತ ರಾಜಸ್ವ ಉಳಿಕೆಯು ಮತ್ತು ಕ್ರೋಢೀಕೃತ ವಿತ್ತೀಯ ಕೊರತೆಯು ಕ್ರಮವಾಗಿ ರೂ. 2981.49 ಮತ್ತು ರೂ. 6085.48 ಕೋಟಿ ರೂಪಾಯಿಗಳೆಂದು ಅಂದಾಜು ಮಾಡಲಾಗಿದ್ದು ಇದು ಜಿಎಸ್‌ಡಿಪಿಯ ಶೇಕಡ 1.38 ಮತ್ತು ಶೇಕಡ 2.83 ಆಗಿರುತ್ತದೆ. 2008-09ರ ಕ್ರೋಢೀಕೃತ ರಾಜಸ್ವ ಉಳಿಕೆ ಮತ್ತು ಕ್ರೋಢೀಕೃತ ವಿತ್ತೀಯ ಕೊರತೆಯನ್ನು ಕ್ರಮವಾಗಿ 1527.45 ಕೋಟಿ ರೂಪಾಯಿಗಳೆಂದು ಮತ್ತು 7029.73 ಕೋಟಿ ರೂಪಾಯಿಗಳೆಂದು ಅಂದಾಜಿಸಲಾಗಿದ್ದು ಇದು ಅನುಕ್ರಮವಾಗಿ ಜಿಎಸ್‌ಡಿಪಿಯ ಶೇಕಡ 0.63 ಮತ್ತು ಶೇಕಡ 2.88 ಎಂದು ಅಂದಾಜಿಸಲಾಗಿದೆ. ಇದು 2002ನೇ ಇಸವಿಯ ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮದ ರೀತ್ಯಾ ಇದೆ.

ಭಾರತಿಗೆ ಬಲವಾಗಿ
ವಸುಮತಿಗೆ ಚೆಲುವಾಗಿ
ಸಕಲರಿಗೆ ಗೆಲುವಾಗಿ
ನಮ್ಮ ಹೊಸ ಹುಟ್ಟು
ಇದಕ್ಕಾಗಿ ಒಂದಾಗಿ
ದುಡಿಯುವೆವು ನಾವು

ಕವಿ ಕಾವ್ಯಾನಂದರ ಈ ಕಾವ್ಯ ಧ್ವನಿಸುವಂತೆ ಕರ್ನಾಟಕವನ್ನು ಸಶಕ್ತ ಮತ್ತು ಸಮೃದ್ಧಿಗೊಳಿಸಿ ಆ ಮೂಲಕ ದೇಶವನ್ನು ಬಲಗೊಳಿಸಲು ನಮ್ಮ ಸರ್ಕಾರ ಒಮ್ಮನದಿಂದ ಮತ್ತು ಒಮ್ಮತದಿಂದ ದುಡಿಯಲಿದೆ.

ಸನ್ಮಾನ್ಯ ಸಭಾಧ್ಯಕ್ಷರೇ,

ನಾನು ಈಗ 2008-09ನೇ ಸಾಲಿನ ಪರಿಷ್ಕೃತ ಆಯವ್ಯಯದ ಅಂದಾಜುಗಳನ್ನು ಸದನದ ಪರಿಶೀಲನೆಗೆ ಮಂಡಿಸುತ್ತಾ, ಈ ಮುಂಗಡ ಪತ್ರಕ್ಕೆ ಮಾನ್ಯ ಸದನದ ಅನುಮೋದನೆಯನ್ನು ಕೋರುತ್ತಿದ್ದೇನೆ.

ಜೈ ಹಿಂದ್

ಜೈ ಕರ್ನಾಟಕ

ಬಜೆಟ್ ವಿಹಂಗಮ ನೋಟ

(ಕೋಟಿ ರೂಪಾಯಿಗಳಲ್ಲಿ)

ಕ್ರ. ಸಂ.	ಬಾಬ್ತು	ಬಜೆಟ್ ಅಂದಾಜು 2007-08	ಪರಿಷ್ಕೃತ ಅಂದಾಜು 2007-08	ಬಜೆಟ್ ಅಂದಾಜು 2008-09
	ಪ್ರಾರಂಭದ ಶಿಲ್ಕು	96.37	231.88	58.32
	ಎ. ರಾಜಸ್ವ ಲೆಕ್ಕ			
I.	**ಜಮೆ :**			
	ರಾಜ್ಯ ತೆರಿಗೆ	26691.17	27218.32	31875.85
	ಕೇಂದ್ರ ತೆರಿಗೆಯಲ್ಲಿ ಪಾಲು	6300.00	6300.00	7982.38
	ಕೇಂದ್ರ ಸರ್ಕಾರದ ಅನುದಾನಗಳು	5913.82	5519.81	5450.43
	ತೆರಿಗೆಯೇತರ ರಾಜಸ್ವ	1857.10	1802.10	1931.65
	ಒಟ್ಟು-ಎ. I	**40762.09**	**40840.23**	**47240.31**
II.	**ವೆಚ್ಚ :**			
	ಸಾಮಾಜಿಕ ಸೇವೆ	14783.09	13445.18	17138.39
	ಆರ್ಥಿಕ ಸೇವೆ	10675.80	11302.77	11816.31
	ಸಾಮಾನ್ಯ ಸೇವೆ	11772.15	11206.40	13763.48
	ಸಹಾಯಾನುದಾನ ಮತ್ತು ಅಂಶದಾನ	1904.39	1904.39	2994.68
	ಒಟ್ಟು-ಎ. II	**39135.43**	**37858.74**	**45712.86**
	ಎ. ರಾಜಸ್ವ ಲೆಕ್ಕ ಹೆಚ್ಚುವರಿ / ಕೊರತೆ	1626.66	2981.49	1527.45
	ಬಿ. ಬಂಡವಾಳ ಲೆಕ್ಕ			
I.	**ಜಮೆ :**			
	ಭಾರತ ಸರ್ಕಾರದಿಂದ ಸಾಲ	1990.71	1990.71	1571.29
	ಬಹಿರಂಗ ಮಾರುಕಟ್ಟೆ ಸಾಲ (ನಿವ್ವಳ)	-465.27	-465.27	3199.66
	ಎಲ್‌ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿ ಇವುಗಳಿಂದ ಸಾಲ	1200.00	1200.00	2048.76
	ಸಾಲಗಳು ಮತ್ತು ಮುಂಗಡಗಳ ವಸೂಲಿ	49.07	63.07	69.97
	ಸಾರ್ವಜನಿಕ ಲೆಕ್ಕ (ನಿವ್ವಳ)ಇತರೆ	4390.68	4020.68	1143.95
	ಒಟ್ಟು-ಬಿ. I	**7165.19**	**6809.19**	**8033.63**

II.	**ಬಟವಾಡೆ :**			
	ಬಂಡವಾಳ ವೆಚ್ಚ (ನಿವ್ವಳ)	7507.23	8686.14	7640.06
	ಕೇಂದ್ರ ಸಾಲಗಳ ಮರುಸಂದಾಯ	463.73	463.73	500.80
	ಎಲ್ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿ ಇತ್ಯಾದಿಗಳಿಗೆ ಸಾಲಗಳ ಮರುಸಂದಾಯ	370.47	370.47	472.60
	ಸಾಲಗಳ ಮತ್ತು ಮುಂಗಡಗಳ ಬಟವಾಡೆ	473.48	443.90	987.09
	ಒಟ್ಟು-ಬಿ. II	**8814.91**	**9964.24**	**9600.55**
ಬಿ.	ಬಂಡವಾಳ ಲೆಕ್ಕ ಹೆಚ್ಚಳ / ಕೊರತೆ	**-1649.72**	**-3155.05**	**-1566.92**
ಸಿ.	ವರ್ಷದ ಒಟ್ಟು ಹೆಚ್ಚಳ / ಕೊರತೆ	**-23.06**	**-173.56**	**-39.47**
ಡಿ.	ಮುಕ್ತಾಯ ಶಿಲ್ಕು ಕಳೆದಾಗ	**73.31**	**58.32**	**18.85**

ಅನುಬಂಧ - I

(ಪ್ಯಾರಾ 179)

2007-2008ನೇ ಸಾಲಿನ ವಿಭಾಗವಾರು ರಾಜ್ಯ ಯೋಜನಾ ಹಂಚಿಕೆ

	ವಿಭಾಗ	ಕೋಟಿ ರೂ.ಗಳಲ್ಲಿ	ಶೇಕಡಾ ಪ್ರಮಾಣ
ಎ.	**ಆರ್ಥಿಕ ಸೇವೆಗಳು**		
	ಕೃಷಿ ಮತ್ತು ಸಂಬಂಧಪಟ್ಟ ಸೇವೆ	2491.63	9.60
	ಗ್ರಾಮೀಣ ಅಭಿವೃದ್ಧಿ	1593.28	6.14
	ವಿಶೇಷ ಪ್ರದೇಶ ಯೋಜನೆ	181.92	0.70
	ನೀರಾವರಿ ಮತ್ತು ಪ್ರವಾಹ ನಿಯಂತ್ರಣ	3468.75	13.37
	ಶಕ್ತಿ ಮೂಲಗಳು	2414.29	9.30
	ಕೈಗಾರಿಕೆ ಮತ್ತು ಖನಿಜಗಳು	356.94	1.38
	ಸಾರಿಗೆ	3293.83	12.69
	ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ	25.29	0.10
	ಸಾಮಾನ್ಯ ಆರ್ಥಿಕ ಸೇವೆಗಳು	740.55	2.85
ಬಿ.	**ಸಮಾಜ ಸೇವೆಗಳು**		
	ಶಿಕ್ಷಣ, ಕ್ರೀಡೆಗಳು, ಕಲೆ ಮತ್ತು ಸಂಸ್ಕೃತಿ	2198.99	8.47
	ಆರೋಗ್ಯ	964.39	3.72
	ನೀರು ಸರಬರಾಜು ಮತ್ತು ನೈರ್ಮಲ್ಯ	1267.54	4.88
	ವಸತಿ ಮತ್ತು ನಗರಾಭಿವೃದ್ಧಿ	4672.00	18.00
	ವಾರ್ತಾ ಮತ್ತು ಪ್ರಚಾರ	19.10	0.07
	ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳು ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ	1546.08	5.96
	ಕಾರ್ಮಿಕ ಮತ್ತು ಉದ್ಯೋಗ	153.62	0.59
ಸಿ.	**ಸಾಮಾನ್ಯ ಸೇವೆಗಳು**	564.64	2.18
	ಒಟ್ಟು	**25952.84**	**100.00**

ಅನುಬಂಧ - II (ಕಂಡಿಕೆ 215)

ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಅನುಸೂಚಿಯ ಉದ್ದೇಶಿತ ಬದಲಾವಣೆ (ತಿದ್ದುಪಡಿ)ಗಳು

ಕ್ರ. ಸಂ.	ಅನುಸೂಚಿ ಯಲ್ಲಿರುವ ಐಟಂ	ಅನುಚ್ಛೇದ	ಪ್ರಸ್ತುತ				ಉದ್ದೇಶಿತ			
			ವಿವರಣೆ	ದರ			ವಿವರಣೆ	ದರ		
1	ಹಕ್ಕುಪತ್ರಗಳ ಠೇವಣಿಗೆ ಸಂಬಂಧಿಸಿದ ಕರಾರು	6 (1) (ಎ) (ಬಿ)	(a) ಸಾಲವು ಕರಾರು ಪತ್ರದ ದಿನಾಂಕದಿಂದ 3 ತಿಂಗಳ ನಂತರ ತಗಾದೆಯ ಮೇರೆಗೆ ಮರುಪಾವತಿ ಯಾಗುವಂತಿದ್ದಲ್ಲಿ	ಒಂದೇ ಸೆಟ್‌ನಲ್ಲಿ ಡ್ರಾ ಮಾಡಿದಲ್ಲಿ ರೂ. ಪೈ.	ಎರಡು ಸೆಟ್‌ನಲ್ಲಿ ಡ್ರಾ ಮಾಡಿದಲ್ಲಿ ಸೆಟ್‌ನ ಪ್ರತಿ ಭಾಗಕ್ಕೆ ರೂ. ಪೈ.	ಮೂರು ಸೆಟ್‌ನಲ್ಲಿ ಡ್ರಾ ಮಾಡಿದಲ್ಲಿ ಸೆಟ್‌ನ ಪ್ರತಿ ಭಾಗಕ್ಕೆ ರೂ. ಪೈ.	(a) ಸಾಲವು ಕರಾರು ಪತ್ರದ ದಿನಾಂಕದಿಂದ 3 ತಿಂಗಳ ನಂತರ ತಗಾದೆಯ ಮೇರೆಗೆ ಮರುಪಾವತಿ ಯಾಗುವಂತಿದ್ದಲ್ಲಿ	ಒಂದೇ ಸೆಟ್‌ನಲ್ಲಿ ಡ್ರಾ ಮಾಡಿದಲ್ಲಿ ರೂ. ಪೈ.	ಎರಡು ಸೆಟ್‌ನಲ್ಲಿ ಡ್ರಾ ಮಾಡಿದಲ್ಲಿ ಸೆಟ್‌ನ ಪ್ರತಿ ಭಾಗಕ್ಕೆ ರೂ. ಪೈ.	ಮೂರು ಸೆಟ್‌ನಲ್ಲಿ ಡ್ರಾ ಮಾಡಿದಲ್ಲಿ ಸೆಟ್‌ನ ಪ್ರತಿ ಭಾಗಕ್ಕೆ ರೂ. ಪೈ.
			(i) ಸಾಲದಮೊತ್ತವು ರೂ. 500/- ಮೀರದಿದ್ದಲ್ಲಿ	2.50	2.00	1.00	(i) ಸಾಲದಮೊತ್ತವು ರೂ. 500/- ಮೀರದಿದ್ದಲ್ಲಿ	1.25	1.00	0.50
			(ii) ಸಾಲದ ಮೊತ್ತವು ರೂ. 500/- ಕ್ಕಿಂತ ಹೆಚ್ಚಿದ್ದು, ರೂ.1000/- ಮೀರದಿದ್ದಲ್ಲಿ.	5.00	2.50	2.00	(ii) ಸಾಲದ ಮೊತ್ತವು ರೂ. 500/- ಕ್ಕಿಂತ ಹೆಚ್ಚಿದ್ದು, ರೂ.1000/- ಮೀರದಿದ್ದಲ್ಲಿ.	2.50	1.25	1.00
			(iii) ಸಾಲದ ಮೊತ್ತವು ರೂ. 1,000/- ಕ್ಕಿಂತ ಹೆಚ್ಚಿದ್ದು, ರೂ.5000/- ಮೀರದಿದ್ದಲ್ಲಿ.	25.00	12.50	10.00	(iii) ಸಾಲದ ಮೊತ್ತವು ರೂ. 1,000/- ಕ್ಕಿಂತ ಹೆಚ್ಚಿದ್ದು, ರೂ.5000/- ಮೀರದಿದ್ದಲ್ಲಿ.	12.50	6.25	5.00
			(iv) ಸಾಲದ ಮೊತ್ತವು ರೂ. 5000/- ಕ್ಕಿಂತ ಹೆಚ್ಚಿದ್ದು, ರೂ.10000/- ಮೀರದಿದ್ದಲ್ಲಿ.	50.00	25.00	20.00	(iv) ಸಾಲದ ಮೊತ್ತವು ರೂ. 5000/- ಕ್ಕಿಂತ ಹೆಚ್ಚಿದ್ದು, ರೂ.10,000/- ಮೀರದಿದ್ದಲ್ಲಿ.	25.00	12.50	10.00
			ಆದರೆ ಸಾಲವು ಈ ಕೆಳಗಿನ ಉದ್ದೇಶಗಳಿಗಾಗಿದ್ದಲ್ಲಿ				(v) ಸಾಲದ ಮೊತ್ತವು ರೂ.10000/- ಮೀರಿದಲ್ಲಿ ರೂ.10,000/- ವನ್ನು ಮೀರಿದಪ್ರತಿಹೆಚ್ಚುವರಿ ರೂ. 5000/- ಅಥವಾ ಅದರ ಭಾಗಾಂಶಕ್ಕೆ.	12.50	6.25	5.00
			1) ಮಂಜೂರಾದ ಯೋಜನೆ (Plan) ಯಲ್ಲಿ ಸೂಚಿಸಿರುವಂತೆ ವಾಣಿಜ್ಯ ಉದ್ದೇಶಕ್ಕಾಗಿಯೇ ಆಸ್ತಿಯನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಸಾಲವನ್ನು ಪಡೆಯುತ್ತಿದ್ದಲ್ಲಿ.	ಐದು ಲಕ್ಷ ರೂಪಾಯಿಗಳ ಗರಿಷ್ಠ ಮಿತಿಗೆ ಒಳಪಟ್ಟು ಸಾಲದ ಮೊತ್ತದ ಮೇಲೆ ಶೇ. 0.50ರಷ್ಟು ಮುದ್ರಾಂಕ ಶುಲ್ಕ				ರೂ.5 ಲಕ್ಷಗಳ ಗರಿಷ್ಠ ಮಿತಿಗೆ ಒಳಪಟ್ಟು.		

ಕ್ರ. ಸಂ.	ಅನುಸೂಚಿಯಲ್ಲಿರುವ ಐಟಂ	ಅನುಚ್ಛೇದ	ಪ್ರಸ್ತುತ		ಉದ್ದೇಶಿತ	
			ವಿವರಣೆ	ದರ	ವಿವರಣೆ	ದರ
			2) ಮಂಜೂರಾದ ಯೋಜನೆ (Plan) ಯಲ್ಲಿ ಸೂಚಿಸಿರುವಂತೆ ವಸತಿ ಯೋಜನೆಗಾಗಿಯೇ ಆಸ್ತಿಯನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಸಾಲವನ್ನು ಪಡೆಯುತ್ತಿದ್ದಲ್ಲಿ. (v) ಸಾಲದ ಮೊತ್ತವು ರೂ. 10000/- ಗಳನ್ನು ಮೀರಿದಲ್ಲಿ ರೂ.10000/ ಕ್ಕಿಂತ ಮೇಲಿನ ಪ್ರತಿ ಹೆಚ್ಚುವರಿ ರೂ.5,000/-ಅಥವಾ ಅದರ ಭಾಗಾಂಶಕ್ಕೆ. (b) ಸಾಲವು ಕರಾರು ಪತ್ರದ ದಿನಾಂಕದಿಂದ 3 ತಿಂಗಳಿಗೆ ಮೀರದ ಅವಧಿಯಲ್ಲಿ ಮರು ಪಾವತಿಯಾಗುವಂತಿದ್ದಲ್ಲಿ.	ರೂ. 50,000/- ಗಳ ಗರಿಷ್ಠ ಮಿತಿಗೆ ಒಳಪಟ್ಟು ಸಾಲದ ಮೊತ್ತದ ಮೇಲೆ ಶೇ. 0.50 ರಷ್ಟು ಮುದ್ರಾಂಕ ಶುಲ್ಕ. 25.00 12.50 10.00 ಮಂಜೂರಾದ ಸಾಲದ ಮೇಲೆ ಉಪಕಂಡಿಕೆ (a) ರಲ್ಲಿನ ಐಟಂ (i) ಅಥವಾ (ii) ಅಥವಾ (iii) ಅಥವಾ (iv) ಅಥವಾ (v) ರಂತೆ ಪಾವತಿಸಬೇಕಾದ ಮುದ್ರಾಂಕ ಶುಲ್ಕದ ಅರ್ಧ ಮೊತ್ತ.	(b) ಸಾಲವು ಕರಾರು ಪತ್ರದ ದಿನಾಂಕದಿಂದ 3 ತಿಂಗಳಿಗಿಂತ ಹೆಚ್ಚಿಲ್ಲದ ಅವಧಿಯಲ್ಲಿ ಮರು ಪಾವತಿಯಾಗುವಂತಿದ್ದಲ್ಲಿ.	ಮಂಜೂರಾದ ಸಾಲದ ಮೇಲೆ ಉಪಕಂಡಿಕೆ (a) ರಲ್ಲಿನ ಐಟಂ (!)ಅಥವಾ (ii) ಅಥವಾ (iii) ಅಥವಾ (iv) ಅಥವಾ (V) ರಂತೆ ಪಾವತಿಸಬೇಕಾದ ಮುದ್ರಾಂಕ ಶುಲ್ಕದ ಅರ್ಧ ಮೊತ್ತ ರೂ.5 ಲಕ್ಷಗಳ ಗರಿಷ್ಠ ಮಿತಿಗೆ ಒಳಪಟ್ಟು.
2	ಅಡವು ಅಥವಾ ಒತ್ತೆ	6 (2)	ವಿನಾಯಿತಿ : ದೃಢೀಕರಿಸಲ್ಪಡದ ಅಡವು ಅಥವಾ ಒತ್ತೆ ಇಟ್ಟಿರುವ ಪತ್ರಗಳು.	ಈ ಹಿಂದೆಯೇ ಒಪ್ಪಂದ ಮಾಡಿಕೊಂಡಿರುವ ವ್ಯಕ್ತಿಗಳ ಮಧ್ಯೆ ಈ ಹಿಂದಿನ ಒಪ್ಪಂದದಲ್ಲಿರುವಷ್ಟೇ ಮೊತ್ತಕ್ಕೆ ಅದೇ ಉದ್ದೇಶಕ್ಕೆ ಚರಾಸ್ತಿಯನ್ನು ಒತ್ತೆ ಅಥವಾ ಅಡವು ಇಡುವ ಬಗ್ಗೆ ಹೊಸದಾಗಿ ಒಪ್ಪಂದವನ್ನು ಮಾಡಿಕೊಂಡಲ್ಲಿ ಮತ್ತು ಹಿಂದಿನ ಒಪ್ಪಂದದ ಮೇಲೆ ಮುದ್ರಾಂಕ ಶುಲ್ಕವನ್ನು ಪಾವತಿಸಲಾಗಿದ್ದಲ್ಲಿ ಹೊಸ ಒಪ್ಪಂದ ಪತ್ರವು ಈ ಅನುಸೂಚಿಯ ಅನುಚ್ಛೇದ (5)ರ ಕಂಡಿಕೆ (1) ರಂತೆ ಮುದ್ರಾಂಕ ಶುಲ್ಕದ ಆಕರಣೆಗೆ ಒಳಪಡುವುದು.	ವಿನಾಯಿತಿ : 1. ರೂ. 10,000/- ದವರೆಗಿನ ಮೊತ್ತಕ್ಕೆ ಒಡವೆಗಳನ್ನು ಅಡವು ಅಥವಾ ಒತ್ತೆಯಿಡುವ ಸಾಲ ಪತ್ರಗಳು. 2. ಸರಕುಗಳ ಅಡವು ಅಥವಾ ಒತ್ತೆ ಇಡುವ ದೃಢೀಕರಿಸದ ಪತ್ರಗಳು.	ಈ ಹಿಂದೆಯೇ ಒಪ್ಪಂದ ಮಾಡಿಕೊಂಡಿರುವ ವ್ಯಕ್ತಿಗಳ ಮಧ್ಯೆ ಹಿಂದಿನ ಒಪ್ಪಂದದಲ್ಲಿರುವಷ್ಟೇ ಮೊತ್ತಕ್ಕೆ, ಅದೇ ಉದ್ದೇಶಕ್ಕೆ, ಚರಾಸ್ತಿಯನ್ನು ಅಡವು ಅಥವಾ ಒತ್ತೆ ಇಡುವಬಗ್ಗೆ ಹೊಸದಾಗಿ ಒಪ್ಪಂದವನ್ನು ಮಾಡಿಕೊಂಡಲ್ಲಿ ಮತ್ತು ಹಿಂದಿನ ಒಪ್ಪಂದದ ಮೇಲೆ ಮುದ್ರಾಂಕ ಶುಲ್ಕವನ್ನು ಪಾವತಿಸಲಾಗಿದ್ದಲ್ಲಿ ಹೊಸ ಒಪ್ಪಂದ ಪತ್ರವು ಈ ಅನುಸೂಚಿಯ ಅನುಚ್ಛೇಧ (5)ರ ಕಂಡಿಕೆ (1) ರಂತೆ ಮುದ್ರಾಂಕ ಶುಲ್ಕದ ಆಕರಣೆಗೆ ಒಳಪಡುವುದು.

ಕ್ರ. ಸಂ.	ಅನುಸೂಚಿ ಯಲ್ಲಿರುವ ಐಟಂ	ಅನುಚ್ಛೇದ	ಪ್ರಸ್ತುತ		ಉದ್ದೇಶಿತ	
			ವಿವರಣೆ	ದರ	ವಿವರಣೆ	ದರ
3	ಹಸ್ತಾಂತರಣ	20 (4) (i) (ii)	ಕಂಪನಿ ಕಾಯ್ದೆ 1956ರ ಕಲಂ 394ರ ಅಡಿ ಸಂಯೋಜನೆಗೊಳ್ಳುವ ಕಂಪನಿಗಳ ಬಗ್ಗೆ ಉಚ್ಛ ನ್ಯಾಯಾಲಯವು ಹೊರಡಿಸುವ ಆದೇಶ.		ಕಂಪನಿ ಕಾಯ್ದೆ 1956ರ ಕಲಂ 394ರ ಅಡಿ ಸಂಯೋಜನೆಗೊಳ್ಳುವ ಕಂಪನಿಗಳ ಬಗ್ಗೆ ಉಚ್ಛನ್ಯಾಯಾಲಯವು ಹೊರಡಿಸುವ ಆದೇಶ	
			(i) ಅಧೀನ ಕಂಪನಿಯು ಐಕ್ಯ ಹೊಂದಿದ ಸಂಯೋಜನೆಗಳಿಗಾಗಿ.	ಕರ್ನಾಟಕ ರಾಜ್ಯದೊಳಗಿರುವ ಹಸ್ತಾಂತರ ಕರ್ತ ಕಂಪನಿಯು ಹಸ್ತಾಂತರ ಪಡೆಯುತ್ತಿರುವ ಕಂಪನಿಗೆ ವರ್ಗಾಯಿಸಿರುವ ಆಸ್ತಿಯ ಮಾರುಕಟ್ಟೆ ಮೌಲ್ಯದ ಮೇಲೆ ಹಸ್ತಾಂತರ ಪತ್ರಕ್ಕೆ ಆಕರಿಸುವ ಶುಲ್ಕ (ಅನುಚ್ಛೇದ 20(1)) ಅಥವಾ ವಿತರಿಸಲಾದ ಅಥವಾ ವಿನಿಮಯದಲ್ಲಿ ಹಂಚಿಕೆ ಮಾಡಲಾದ ಒಟ್ಟು ಷೇರುಗಳ ಮೌಲ್ಯದ ಶೇ.0.7 ರಷ್ಟಕ್ಕೆ ಸಮನಾದ ಮೊತ್ತ ಅಥವಾ ಅಧೀನ ಕಂಪನಿಯಾಗಿದ್ದಲ್ಲಿ ಮೂಲ ಕಂಪನಿಯೊಂದಿಗೆ ಸಂಯೋಜನೆಗೊಳಿಸಲಾದ ಷೇರುಗಳ ಮೊತ್ತ (ಅಥವಾ ರದ್ದುಪಡಿಸಿದ) ಮತ್ತು ಸಂಯೋಜನೆಗೆ ಪ್ರತಿಫಲ ನೀಡಲಾಗಿದ್ದಲ್ಲಿ, ಆ ಪ್ರತಿಫಲದ ಮೊತ್ತ. -- ಇವುಗಳಲ್ಲಿ ಯಾವುದು ಹೆಚ್ಚಿನದೋ ಅದು.	(i) ಮೂಲ ಕಂಪನಿಯೊಂದಿಗೆ ಅಧೀನ ಕಂಪನಿಯ ಐಕ್ಯತೆಯು ಸೇರಿದಂತೆ ಕಂಪನಿಗಳ ಸಂಯೋಜನೆಗೆ.	ಕರ್ನಾಟಕ ರಾಜ್ಯದೊಳಗಿರುವ ಹಸ್ತಾಂತರ ಕರ್ತ ಕಂಪನಿಯು ಹಸ್ತಾಂತರ ಪಡೆಯುತ್ತಿರುವ ಕಂಪನಿಗೆ ವರ್ಗಾಯಿಸಿರುವ ಆಸ್ತಿಯ ಮಾರುಕಟ್ಟೆ ಮೌಲ್ಯದ ಮೇಲೆ ಶೇ. 5 ಅಥವಾ ವಿತರಿಸಲಾದ ಅಥವಾ ವಿನಿಮಯದಲ್ಲಿ ಹಂಚಿಕೆ ಮಾಡಲಾದ ಒಟ್ಟು ಷೇರುಗಳ ಮೌಲ್ಯದ ಶೇ. 0.7ರಷ್ಟಕ್ಕೆ ಸಮನಾದ ಮೊತ್ತ ಅಥವಾ ಅಧೀನ ಕಂಪನಿ ಯಾಗಿದ್ದಲ್ಲಿ ಮೂಲ ಕಂಪನಿಯೊಂದಿಗೆ ಸಂಯೋಜನೆ ಗೊಳಿಸಲಾದ ಷೇರುಗಳ ಮೊತ್ತ (ಅಥವಾ ರದ್ದುಪಡಿಸಿದ) ಮತ್ತು ಸಂಯೋಜನೆಗೆ ಪ್ರತಿಫಲ ನೀಡಲಾಗಿದ್ದಲ್ಲಿ, ಆ ಪ್ರತಿಫಲದ ಮೊತ್ತ -- ಇವುಗಳಲ್ಲಿ ಯಾವುದು ಹೆಚ್ಚಿನದೋ ಅದು.
			(ii) ಒಂದು ಕಂಪನಿಯ ಪುನರ್ ನಿರ್ಮಾಣ ಅಥವಾ ಬೇರ್ಪಡೆ	ಕರ್ನಾಟಕದ ಒಳಗಿರುವ ಹಸ್ತಾಂತರ ಕರ್ತ ಕಂಪನಿಯು ಪುನರ್ ನಿರ್ಮಾಣಗೊಂಡ ಕಂಪನಿಗೆ ಹಸ್ತಾಂತರ ಮಾಡಿದ ಆಸ್ತಿಯ ಮಾರುಕಟ್ಟೆಯ ಮೌಲ್ಯದ ಮೇಲೆ ಹಸ್ತಾಂತರ ಪತ್ರಕ್ಕೆ ಆಕಾರಿಸುವ ಶುಲ್ಕ (ಅನುಚ್ಛೇಧ 20 (1)) ಅಥವಾ ಫಲಾನುಭವಿ ಕಂಪನಿಗೆ ವರ್ಗಾವಣೆಯಾಗುವ ಹಸ್ತಾಂತರ ಕರ್ತ ಕಂಪನಿಯ ಷೇರುಗಳ ಮೌಲ್ಯದ ಮೇಲೆ ಮತ್ತು ಪುನರ್ ನಿರ್ಮಾಣ ಅಥವಾ ಬೇರ್ಪಡೆಗೆ ಸಂಬಂಧಿಸಿದಂತೆ ನೀಡುವ ಪ್ರತಿಫಲದ ಮೇಲೆ 0.7% ರಂತೆ. -- ಇವುಗಳಲ್ಲಿ ಯಾವುದು ಹೆಚ್ಚಿನದೋ ಅದು.	(ii) ಒಂದು ಕಂಪನಿಯ ಪುನರ್ ನಿರ್ಮಾಣ ಅಥವಾ ಬೇರ್ಪಡೆ.	ಕರ್ನಾಟಕದ ಒಳಗಿರುವ ಹಸ್ತಾಂತರ ಕರ್ತ ಕಂಪನಿಯು ಪುನರ್ ನಿರ್ಮಾಣಗೊಂಡ ಕಂಪನಿಗೆ ಹಸ್ತಾಂತರ ಮಾಡಿದ ಆಸ್ತಿಯ ಮಾರುಕಟ್ಟೆಯ ಮೌಲ್ಯದ ಮೇಲೆ ಶೇ.5 ಅಥವಾ ಫಲಾನುಭವಿ ಕಂಪೆನಿಗೆ ವರ್ಗಾವಣೆಯಾಗುವ ಹಸ್ತಾಂತರ ಕರ್ತ ಕಂಪನಿಯ ಷೇರುಗಳ ಮೌಲ್ಯದ ಮೇಲೆ ಮತ್ತು ಪುನರ್ ನಿರ್ಮಾಣ ಅಥವಾ ಬೇರ್ಪಡೆಗೆ ಸಂಬಂಧಿಸಿದಂತೆ ನೀಡುವ ಪ್ರತಿಫಲದ ಮೇಲೆ 0.7% ರಂತೆ. -- ಇವುಗಳಲ್ಲಿ ಯಾವುದು ಹೆಚ್ಚಿನದೋ ಅದು.

ಕ್ರ. ಸಂ.	ಅನುಸೂಚಿ ಯಲ್ಲಿರುವ ಐಟಂ	ಅನುಚ್ಛೇದ	ಪ್ರಸ್ತುತ		ಉದ್ದೇಶಿತ	
			ವಿವರಣೆ	ದರ	ವಿವರಣೆ	ದರ
			ವಿನಾಯಿತಿ : XXXXX		ವಿನಾಯಿತಿ : ಕೈಗಾರಿಕಾ, ಹಣಕಾಸು ಮತ್ತು ಪುನರ್ ನಿರ್ಮಾಣ ಮಂಡಳಿ (BIFR) ಯ ಆದೇಶದ ಮೇರೆಗೆ ರೋಗಗ್ರಸ್ಥ ಕಂಪನಿಯು ಇತರೆ ಕಂಪನಿಗಳೊಂದಿಗೆ ಸಂಯೋಜನೆಗೊಂಡಾಗ.	
4	ಸ್ಥಿರಾಸ್ತಿಗಳ ಗುತ್ತಿಗೆ ಪತ್ರ	30(1) (a) (iii)	ಗುತ್ತಿಗೆಯು ಐದು ವರ್ಷಗಳಿಗಿಂತ ಕಡಿಮೆ ಆದರೆ 10 ವರ್ಷಗಳಿಗಿಂತ ಕಡಿಮೆ ಅವಧಿಯದಾಗಿದ್ದಲ್ಲಿ.	ಈ ಹಿಂದಿನಂತೆ	ಐದು ವರ್ಷಗಳಿಗಿಂತ ಹೆಚ್ಚಿನ ಆದರೆ 10 ವರ್ಷ ಮೀರದ ಅವಧಿಯ ಗುತ್ತಿಗೆ ಪತ್ರಗಳಿಗೆ.	ಬದಲಾವಣೆ ಇಲ್ಲ.
5	ಸ್ಥಿರಾಸ್ತಿಗಳ ಗುತ್ತಿಗೆ ಪತ್ರ	30(1) (ಸಿ)		ವಿವರಣೆ xxxx		ವಿವರಣೆ : 'ನಗದು ಮುಂಗಡ' ಎಂದರೆ ಮರುಪಾವತಿಸುವ ಅಥವಾ ಬಾಡಿಗೆಗೆ ಸರಿ ಹೊಂದಿಸುವ ಭದ್ರತಾ ಠೇವಣಿಯಾಗಿರುತ್ತದೆ ಮತ್ತು ಅದನ್ನು ಒಳಗೊಂಡಿರುತ್ತದೆ. - X X X X -
		30(1) (ಡಿ)	(ಡಿ) ಗುತ್ತಿಗೆಯು ಬಾಡಿಗೆ ಅಥವಾ ಜುಲ್ಮಾನೆ ಅಥವಾ ಪ್ರೀಮಿಯಂ ಅಥವಾ ನಗದು ಮುಂಗಡದೊಂದಿಗೆ ಮರುಪಾವತಿಸುವ ಠೇವಣಿಯನ್ನು ಒಳಗೊಂಡಿದ್ದಲ್ಲಿ. (i) ಅಂತಹ ಗುತ್ತಿಗೆಯು 30 ವರ್ಷಗಳ ಅವಧಿಯನ್ನು ಮೀರದಿದ್ದರೆ. (ii) ಅಂತಹ ಗುತ್ತಿಗೆಯು 30 ವರ್ಷಗಳನ್ನು ಮೀರದಿದ್ದಲ್ಲಿ.	ಅನುಚ್ಛೇದ 30(ಎ), 30(ಬಿ) ಅಥವಾ 30(ಸಿ) ರಂತೆ ಸದರಿ ಗುತ್ತಿಗೆ ಪತ್ರಕ್ಕೆ ಪಾವತಿಸಬೇಕಾದ ಮುದ್ರಾಂಕ ಶುಲ್ಕದೊಂದಿಗೆ ಗುತ್ತಿಗೆ ಪತ್ರದಲ್ಲಿ ನಮೂದಿಸಿದ ಠೇವಣಿ ಮೊತ್ತದ ಮೇಲೆ ಶೇ.1 ರ ಮುದ್ರಾಂಕ ಶುಲ್ಕ. ಅನುಚ್ಛೇದ 30(ಎ). 30(ಬಿ) ಅಥವಾ 30(ಸಿ)ರಂತೆ ಸದರಿ ಗುತ್ತಿಗೆ ಪತ್ರಕ್ಕೆ ಮುದ್ರಾಂಕ ಶುಲ್ಕ ಪಾವತಿಸಬೇಕಿದ್ದಲ್ಲಿ ಆ ಮೊಬಲಗಿನ ಮೇಲೆ ಅಥವಾ ಗುತ್ತಿಗೆ ಪತ್ರದಲ್ಲಿ ಕಂಡ ಸ್ವತ್ತಿನ ಮಾರುಕಟ್ಟೆ ದರದ ಮೇಲೆ ಈ ಎರಡರಲ್ಲಿ ಯಾವುದು ಹೆಚ್ಚೋ ಅದರ ಮೇಲೆ ಪಾವತಿಸಬೇಕಾದ ಮುದ್ರಾಂಕ ಶುಲ್ಕದೊಂದಿಗೆ ಗುತ್ತಿಗೆ ಪತ್ರದಲ್ಲಿ ನಮೂದಿಸಿದ ಠೇವಣಿ ಮೊತ್ತಕ್ಕೆ ಶೇ. 3ರ ಮುದ್ರಾಂಕ ಶುಲ್ಕ.	(ಡಿ) XXXX [ಕಂಡಿಕೆ (1) ರ ಉಪ ಕಂಡಿಕೆ (ಡಿ) ಯನ್ನು ಕೈಬಿಡಲಾಗಿದೆ.]	

ಅನುಬಂಧ - III
(ಪ್ಯಾರಾ - 217)

ಕ್ರಮ ಸಂಖ್ಯೆ	ಮೋಟಾರು ವಾಹನ ತೆರಿಗೆ ಕಾಯ್ದೆ ಪ್ರಕರಣ	ವಾಹನದ ವರ್ಗ	ಸಂಚಾರದಿಂದ ಬಂದ ಒಟ್ಟು ಆದಾಯದ ಮೇಲೆ ವಿಧಿಸುತ್ತಿರುವ ಹಾಲಿ ಶೇಕಡವಾರು ತೆರಿಗೆ	ಮೋಟಾರು ವಾಹನ ತೆರಿಗೆ ಕಾಯ್ದೆ ಪ್ರಕರಣ	ವಾಹನ ವರ್ಗ	ಸಂಚಾರದದಿಂದ ಬಂದ ಒಟ್ಟು ಆದಾಯದ ಮೇಲೆ ವಿಧಿಸುತ್ತಿರುವ ಉದ್ದೇಶಿತ ಶೇಕಡವಾರು ತೆರಿಗೆ
1	10(ii)	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಹೊರತುಪಡಿಸಿದಂತೆ ರಾಜ್ಯದ ಇತರೆ ಸಾರಿಗೆ ಸಂಸ್ಥೆಗಳ ಸ್ವಂತ / ಅಧೀನದಲ್ಲಿರುವ ಬೆಂಗಳೂರು ನಗರದ ಮಿತಿಯ ಹೊರಗೆ ಸಂಚರಿಸುತ್ತಿರುವ ಸಾರ್ವಜನಿಕ ಸೇವಾ ವಾಹನಗಳು	7	10(ii)	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಹೊರತುಪಡಿಸಿದಂತೆ ರಾಜ್ಯದ ಇತರೆ ಸಾರಿಗೆ ಸಂಸ್ಥೆಗಳ ಸ್ವಂತ / ಅಧೀನದಲ್ಲಿರುವ ಬೆಂಗಳೂರು ನಗರದ ಮಿತಿಯ ಹೊರಗೆ ಸಂಚರಿಸುತ್ತಿರುವ ಸಾರ್ವಜನಿಕ ಸೇವಾ ವಾಹನಗಳು	5

ಭಾಗ - ಎ - 5

ಕಲಂ 3(1) ನ್ನು ನೋಡಿ

ಮೋಟಾರು ಕಾರುಗಳು, ಜೀಪುಗಳು, ಓಮ್ನಿ ಬಸ್ ಹಾಗೂ ಖಾಸಗೀ ಸೇವಾ ವಾಹನಗಳಿಗೆ ಹಾಲಿ ವಿಧಿಸುತ್ತಿರುವ ಜೀವಾವಧಿ ತೆರಿಗೆ

ಐಟಂ	ವಾಹನ ವರ್ಗ	ರೂ. 5,00 ಲಕ್ಷ ಬೆಲೆ ಮೀರದ 5 ಚ.ಮೀ. ವರೆಗೆ ನೆಲವಿಸ್ತೀರ್ಣ ಹೊಂದಿರುವ ಮೋಟಾರು ಕಾರುಗಳು, ಜೀಪುಗಳು, ಓಮ್ನಿಬಸ್ಸುಗಳು ಮತ್ತು ಖಾಸಗೀ ಸೇವಾ ವಾಹನಗಳು	ರೂ. 10.00 ಲಕ್ಷ ಬೆಲೆ ಮೀರದ 5 ಚ.ಮೀ. ವರೆಗೆ ನೆಲವಿಸ್ತೀರ್ಣ ಹೊಂದಿರುವ ಮೋಟಾರು ಕಾರುಗಳು, ಜೀಪುಗಳು, ಓಮ್ನಿಬಸ್ಸುಗಳು ಮತ್ತು ಖಾಸಗೀ ಸೇವಾ ವಾಹನಗಳು	ರೂ. 10.00 ಲಕ್ಷ ಬೆಲೆ ಮೀರದ 5 ಚ.ಮೀ. ವರೆಗೆ ನೆಲವಿಸ್ತೀರ್ಣ ಹೊಂದಿರುವ ಮೋಟಾರು ಕಾರುಗಳು, ಜೀಪುಗಳು, ಓಮ್ನಿಬಸ್ಸುಗಳು ಮತ್ತು ಖಾಸಗೀ ಸೇವಾ ವಾಹನಗಳು
1	2	3	4	5
ಎ	ಹೊಸ ವಾಹನದ ನೋಂದಣಿ ಸಮಯದಲ್ಲಿ	ವಾಹನದ ಬೆಲೆಯ ಶೇ. 10	ವಾಹನದ ಬೆಲೆಯ ಶೇ. 11	ವಾಹನದ ಬೆಲೆಯ ಶೇ. 14
ಬಿ	ವಾಹನವು ಈಗಾಗಲೇ ನೋಂದಣಿಯಾಗಿದ್ದಲ್ಲಿ ಹಾಗೂ ಅದರ ವಯಸ್ಸು ವಾಹನ ನೋಂದಣಿಯಾದ ತಿಂಗಳಿನಿಂದ	ಖಂಡ 'ಎ' ಅಡಿಯಲ್ಲಿ ಶೇಕಡಾವಾರು ಜೀವಾವಧಿ ತೆರಿಗೆ	ಖಂಡ 'ಎ' ಅಡಿಯಲ್ಲಿ ಶೇಕಡಾವಾರು ಜೀವಾವಧಿ ತೆರಿಗೆ	ಖಂಡ 'ಎ' ಅಡಿಯಲ್ಲಿ ಶೇಕಡಾವಾರು ಜೀವಾವಧಿ ತೆರಿಗೆ

1	2	3	4	5
1	2 ವರ್ಷಗಳಿಗೆ ಮೀರದ	93%	93%	93%
2	2 ವರ್ಷಗಳಿಗೆ ಮೀರಿದ ಆದರೆ 3 ವರ್ಷಗಳಿಗೆ ಮೀರದ	87%	87%	87%
3	3 ವರ್ಷಗಳಿಗೆ ಮೀರಿದ ಆದರೆ 4 ವರ್ಷಗಳಿಗೆ ಮೀರದ	81%	81%	81%
4	4 ವರ್ಷಗಳಿಗೆ ಮೀರಿದ ಆದರೆ 5 ವರ್ಷಗಳಿಗೆ ಮೀರದ	75%	75%	75%
5	5 ವರ್ಷಗಳಿಗೆ ಮೀರಿದ ಆದರೆ 6 ವರ್ಷಗಳಿಗೆ ಮೀರದ	69%	69%	69%
6	6 ವರ್ಷಗಳಿಗೆ ಮೀರಿದ ಆದರೆ 7 ವರ್ಷಗಳಿಗೆ ಮೀರದ	64%	64%	64%
7	7 ವರ್ಷಗಳಿಗೆ ಮೀರಿದ ಆದರೆ 8 ವರ್ಷಗಳಿಗೆ ಮೀರದ	59%	59%	59%
8	8 ವರ್ಷಗಳಿಗೆ ಮೀರಿದ ಆದರೆ 9 ವರ್ಷಗಳಿಗೆ ಮೀರದ	54%	54%	54%

1	2	3	4	5
9	9 ವರ್ಷಗಳಿಗೆ ಮೀರಿದ ಆದರೆ 10 ವರ್ಷಗಳಿಗೆ ಮೀರದ	49%	49%	49%
10	10 ವರ್ಷಗಳಿಗೆ ಮೀರಿದ ಆದರೆ 11 ವರ್ಷಗಳಿಗೆ ಮೀರದ	45%	45%	45%
11	11 ವರ್ಷಗಳಿಗೆ ಮೀರಿದ ಆದರೆ 12 ವರ್ಷಗಳಿಗೆ ಮೀರದ	41%	41%	41%
12	13 ವರ್ಷಗಳಿಗೆ ಮೀರಿದ ಆದರೆ 14 ವರ್ಷಗಳಿಗೆ ಮೀರದ	37%	37%	37%
13	14 ವರ್ಷಗಳಿಗೆ ಮೀರಿದ ಆದರೆ 15 ವರ್ಷಗಳಿಗೆ ಮೀರದ	33%	33%	33%
14	15 ವರ್ಷಗಳಿಗೆ ಮೀರಿದ ಆದರೆ 16 ವರ್ಷಗಳಿಗೆ ಮೀರದ	29%	29%	29%
15	15 ವರ್ಷಗಳಿಗೆ ಮೀರಿದ	25%	25%	25%

ಭಾಗ - ಎ - 5

ಕಲಂ 3(1) ನ್ನು ನೋಡಿ

ಮೋಟಾರು ಕಾರುಗಳು, ಜೀಪುಗಳು, ಓಮ್ನಿ ಬಸ್ ಹಾಗೂ ಖಾಸಗೀ ಸೇವಾ ವಾಹನಗಳ ಮೇಲೆ ವಿಧಿಸಲು ಉದ್ದೇಶಿಸಿರುವ ಜೀವಾವಧಿ ತೆರಿಗೆ

ಐಟಂ	ವಾಹನದ ವರ್ಗ	ರೂ. 5.00 ಲಕ್ಷ ಬೆಲೆ ಮೀರದ 5 ಚ.ಮೀ. ವರೆಗೆ ನೆಲವಿಸ್ತೀರ್ಣ ಹೊಂದಿರುವ ಮೋಟಾರು ಕಾರುಗಳು, ಜೀಪುಗಳು, ಓಮ್ನಿ ಬಸ್ಸುಗಳು ಮತ್ತು ಖಾಸಗೀ ಸೇವಾ ವಾಹನಗಳು	ರೂ. 10.00 ಲಕ್ಷ ಬೆಲೆ ಮೀರದ 5 ಚ.ಮೀ. ವರೆಗೆ ನೆಲವಿಸ್ತೀರ್ಣ ಹೊಂದಿರುವ ಮೋಟಾರು ಕಾರುಗಳು, ಜೀಪುಗಳು, ಓಮ್ನಿ ಬಸ್ಸುಗಳು ಮತ್ತು ಖಾಸಗೀ ಸೇವಾ ವಾಹನಗಳು	ರೂ. 10.00 ಲಕ್ಷ ಬೆಲೆ ಮೀರದ 5 ಚ.ಮೀ. ವರೆಗೆ ನೆಲವಿಸ್ತೀರ್ಣ ಹೊಂದಿರುವ ಮೋಟಾರು ಕಾರುಗಳು, ಜೀಪುಗಳು, ಓಮ್ನಿ ಬಸ್ಸುಗಳು ಮತ್ತು ಖಾಸಗೀ ಸೇವಾ ವಾಹನಗಳು
1	2	3	4	5
ಎ	ಹೊಸ ವಾಹನದ ನೋಂದಣಿ ಸಮಯದಲ್ಲಿ	ವಾಹನದ ಬೆಲೆಯ ಶೇ. 12	ವಾಹನದ ಬೆಲೆಯ ಶೇ. 14	ವಾಹನದ ಬೆಲೆಯ ಶೇ. 16
ಬಿ	ವಾಹನವು ಈಗಾಗಲೇ ನೋಂದಣಿಯಾಗಿದ್ದಲ್ಲಿ ಹಾಗೂ ಅದರ ವಯಸ್ಸು ವಾಹನ ನೋಂದಣಿಯಾದ ತಿಂಗಳಿನಿಂದ	ಖಂಡ 'ಎ' ಅಡಿಯಲ್ಲಿ ಶೇಕಡಾವಾರು ಜೀವಾವಧಿ ತೆರಿಗೆ	ಖಂಡ 'ಎ' ಅಡಿಯಲ್ಲಿ ಶೇಕಡಾವಾರು ಜೀವಾವಧಿ ತೆರಿಗೆ	ಖಂಡ 'ಎ' ಅಡಿಯಲ್ಲಿ ಶೇಕಡಾವಾರು ಜೀವಾವಧಿ ತೆರಿಗೆ

1	2	3	4	5
1	ತಿಂಗಳಿನಿಂದ 2 ವರ್ಷಗಳಿಗೆ ಮೀರದ	93%	93%	93%
2	2 ವರ್ಷಗಳಿಗೆ ಮೀರಿದ ಆದರೆ 3 ವರ್ಷಗಳಿಗೆ ಮೀರದ	87%	87%	87%
3	3 ವರ್ಷಗಳಿಗೆ ಮೀರಿದ ಆದರೆ 4 ವರ್ಷಗಳಿಗೆ ಮೀರದ	81%	81%	81%
4	4 ವರ್ಷಗಳಿಗೆ ಮೀರಿದ ಆದರೆ 5 ವರ್ಷಗಳಿಗೆ ಮೀರದ	75%	75%	75%
5	5 ವರ್ಷಗಳಿಗೆ ಮೀರಿದ ಆದರೆ 6 ವರ್ಷಗಳಿಗೆ ಮೀರದ	69%	69%	69%
6	6 ವರ್ಷಗಳಿಗೆ ಮೀರಿದ ಆದರೆ 7 ವರ್ಷಗಳಿಗೆ ಮೀರದ	64%	64%	64%
7	7 ವರ್ಷಗಳಿಗೆ ಮೀರಿದ ಆದರೆ 8 ವರ್ಷಗಳಿಗೆ ಮೀರದ	59%	59%	59%
8	8 ವರ್ಷಗಳಿಗೆ ಮೀರಿದ ಆದರೆ 9 ವರ್ಷಗಳಿಗೆ ಮೀರದ	54%	54%	54%

1	2	3	4	5
9	9 ವರ್ಷಗಳಿಗೆ ಮೀರಿದ ಆದರೆ 10 ವರ್ಷಗಳಿಗೆ ಮೀರದ	49%	49%	49%
10	10 ವರ್ಷಗಳಿಗೆ ಮೀರಿದ ಆದರೆ 11 ವರ್ಷಗಳಿಗೆ ಮೀರದ	45%	45%	45%
11	11 ವರ್ಷಗಳಿಗೆ ಮೀರಿದ ಆದರೆ 12 ವರ್ಷಗಳಿಗೆ ಮೀರದ	41%	41%	41%
12	13 ವರ್ಷಗಳಿಗೆ ಮೀರಿದ ಆದರೆ 14 ವರ್ಷಗಳಿಗೆ ಮೀರದ	37%	37%	37%
13	14 ವರ್ಷಗಳಿಗೆ ಮೀರಿದ ಆದರೆ 15 ವರ್ಷಗಳಿಗೆ ಮೀರದ	33%	33%	33%
14	15 ವರ್ಷಗಳಿಗೆ ಮೀರಿದ ಆದರೆ 16 ವರ್ಷಗಳಿಗೆ ಮೀರದ	29%	29%	29%
15	15 ವರ್ಷಗಳಿಗೆ ಮೀರಿದ	25%	25%	25%

ಜಮೆ - ರೂಪಾಯಿ ಎಷ್ಟು ಭಾಗ ಯಾವುದರಿಂದ



ವೆಚ್ಚ (ಯೋಜನೆ ಮತ್ತು ಯೋಜನೇತರ), ರೂಪಾಯಿ ಯಾವ ಭಾಗ ಎಷ್ಟೆಷ್ಟು?



ರಾಜ್ಯದ ಸ್ವಂತ ತೆರಿಗೆಗಳ ವಿವರಗಳು 2008-09 (ಆಯವ್ಯಯ ಅಂದಾಜುಗಳು) (ಉಪಕರ ಹೊರತುಪಡಿಸಿ) (ಕೋಟಿ ರೂ.ಗಳಲ್ಲಿ ಮತ್ತು ಶೇಕಡಾವಾರು)



ವಲಯವಾರು ಯೋಜನಾ ವೆಚ್ಚ 2008-09 (ಕೋಟಿ ರೂ.ಗಳಲ್ಲಿ)




ವಲಯವಾರು ಯೋಜನಾ ವೆಚ್ಚ (ಕೋಟಿ ರೂ.ಗಳಲ್ಲಿ)
2007-08 ಆಯವ್ಯಯದ ಅಂದಾಜು
2008-09 ಆಯವ್ಯಯದ ಅಂದಾಜು
5000
4500
4000
3500
3000
2500
2000
1500
1000
500
0
1108
1593
ಗ್ರಾಮೀಣ ಅಭಿವೃದ್ಧಿ
1255
2492
ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳು
3146
3469
ನೀರಾವರಿ ಮತ್ತು ಪ್ರವಾಹ ನಿಯಂತ್ರಣ
436
357
ಕೈಗಾರಿಕೆ ಮತ್ತು ಖನಿಜಗಳು
1042
1268
ನೀರು ಪೂರೈಕೆ ಮತ್ತು ನೈರ್ಮಲ್ಯ
2218
4672
ವಸತಿ ಮತ್ತು ನಗರಾಭಿವೃದ್ಧಿ
1601
2199
ಶಿಕ್ಷಣ, ಕ್ರೀಡೆಗಳು, ಕಲೆ ಮತ್ತು ಸಂಸ್ಕೃತಿ
2349
3294
ಸಾರಿಗೆ
617
964
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
2102
2414
ಇಂಧನ
2641
3231
ಇತರೆ

ಅಧ್ಯಕ್ಷರು : ಈಗ ಸದನವನ್ನು ನಾಳೆ (18-07-2008) ಬೆಳಿಗ್ಗೆ 10.30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ. (ಸದನವು ಮಧ್ಯಾಹ್ನ 1-50 ಗಂಟೆಗೆ, ಪುನಃ ದಿನಾಂಕ : 18-07-2008 ರಂದು ಬೆಳಿಗ್ಗೆ 19.30 ಗಂಟೆಗೆ ಸೇರುವಂತೆ ಮುಂದೂಡಲಾಯಿತು)